MYSORE LAND REFORMS (AMENDMENT) BILL, 1967—*Introduced.*

Sri B. RACHAIAH (Minister for Revenue and Forest).—I beg leave to introduce the Mysore Land Reforms (Amendment) Bill, 1967.

Mr. SPEAKER.—The question is :

> "That leave be granted to introduce the Mysore Land Reforms (Amendment) Bill, 1967."

The motion was adopted.

Sri B. RACHAIAH.—I introduce the Bill.

Mr. SPEAKER.—The Mysore Land Reforms (Amendment) Bill, 1967, is introduced.

BUDGET ESTIMATES FOR 1967-68

VOTING OF DEMANDS FOR GRANTS IN ADVANCE (VOTE ON ACCOUNT)

Demand No. 1—Taxes on Income other than Corporation Tax.

Sri B. RACHAIAH (Minister for Revenue and Forests).—Sir, on behalf of the Hon'ble Finance Minister and on the recommendation of the Governor, I beg to move :

> "That a sum not exceeding Rs. 2,20,000 be granted to the Government to defray the charges which will come in course of payment during the part of the financial year for the period ending 31st day of July 1967, in respect of 'Taxes on Income other than Corporation Tax'."

Mr. SPEAKER.—Motion moved, on the recommendation of the Governor:—

> "That a sum not exceeding Rs. 2,20,000 be granted to the Government to defray the charges which will come in course of payment during the part of the financial year for the period ending 31st day of July 1967, in respect of 'Taxes on Income other than Corporation Tax."

The rest of the Demands *viz* Demand No. 2, to 18, 20 to 27, 29 to 54 will also deemed to have been moved and are before the House. It is 'Vote on Account.' Therefore, there will be no Cut Motions. All the Demands are open for debate.

†ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ಮಾನ್ಯ ಹಣಕಾಸಿನ ಸಚಿವರು ಮಂಡನೆ ಮಾಡಿರತಕ್ಕಂತಹ 1967-68ನೇ ಸಾಲಿನ ಹಣದ ಮುಂಗಡ ಪತ್ರವನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಮಧ್ಯವರ್ತಿಯ ಕಾಲದ ಪಿರ್ಯಾಡಿಗಾಗಿ ನಾಲ್ಕು ತಿಂಗಳ ಹಣ ವಿನಿಯೋಗಕ್ಕಾಗಿ ವೋಟ್ ಆನ್ ಅಕೌಂಟ್ ರೂಪದಲ್ಲಿ ಸುಮಾರು 80 ಕೋಟಿ ರೂಪಾಯಿಗಳಷ್ಟು ಹಣವನ್ನು ವಿನಿಯೋಗಮಾಡತಕ್ಕ ಎಲ್ಲಾ ಅನೇಕ ಡಿಮಾಂಡುಗಳನ್ನು ಸಭೆಯ ಮುಂದೆ ಇಟ್ಟಿದ್ದಾರೆ. ಈ ಬೇಡಿಕೆಗಳನ್ನು ಇಡುವುದಕ್ಕೆ ಮುಂಚೆ ನಮ್ಮ ದೇಶದ ಆರ್ಥಿಕ ಸಚಿವರು ಮೊನ್ನೆ ತಾನೇ ಹಣಕಾಸಿನ ಮುನ್ಸೂಚನಾ ಪತ್ರವನ್ನು ಸಭೆಯ ಮುಂದೆ ಈಗಾಗಲೇ ಮಂಡನೆ ಮಾಡಿದ್ದಾರೆ. ಆರ್ಥಿಕ ಸಚಿವರ ಭಾಷಣದಲ್ಲಿ ನಮ್ಮ 67-68ನೇ ಇಸವಿಯ ಹಣಕಾಸಿನ ನೀತಿ ಏನು ಎಂಬುದನ್ನೆಲ್ಲಾ ಅವರು ವಿವರವಾಗಿ ಬಡ್ಜೆಟ್ ಮಂಡನೆ ಮಾಡುವಾಗ ಹೇಳಿದ್ದಾರೆ. ನಾನಾದರೂ ಕೂಡ ಈ ವೋಟ್ ಆನ್ ಅಕೌಂಟ್ ವಿಚಾರದಲ್ಲಿ ಮಾತನಾಡುವಾಗ, ಹಣಕಾಸಿನ ಚರ್ಚೆಯ ರೂಪದಲ್ಲಿ ಸಾಮಾನ್ಯವಾಗಿ ಎಲ್ಲಾ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಹಾಗೂ ನೀತಿಯ ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಮುಂದೆ ಸಾಮಾನ್ಯ ಚರ್ಚೆಯ ಕಾಲದಲ್ಲಿ ನಾನು ವಿಸ್ತಾರವಾಗಿ ನನ್ನ ಅಭಿಪ್ರಾಯಗಳನ್ನು ತಿಳಿಸಲಿರುವೆನು. ಹಣಕಾಸಿನ ಸಚಿವರು ಈಗಾಗಲೇ ತಮ್ಮ ಅಭಿಪ್ರಾಯವನ್ನು ಮಂಡಿಸಿರುವುದರಿಂದ, ಅದಕ್ಕೆ ಉತ್ತರ ರೂಪವಾಗಿ ನನ್ನ ಅಭಿಪ್ರಾಯಗಳನ್ನು ಕೊಡತಕ್ಕದ್ದು ನನ್ನ ಕರ್ತವ್ಯವೆಂದು ತಿಳಿದು ಈ ಮೂಲಕ ನನ್ನ ಅಭಿಪ್ರಾಯಗಳನ್ನು ಸೂಚಿಸಬಯಸುತ್ತೇನೆ.

ನಮ್ಮ ಹಣಕಾಸಿನ ಸಚಿವರು ಸಭೆಯ ಮುಂದೆ ಮಂಡನೆ ಮಾಡಿರತಕ್ಕ ಆಯವ್ಯಯ ಬಾಷಣದಲ್ಲಿ ನಮ್ಮ ದೇಶದಲ್ಲಿರುವ ಯಾವುದೇ ಪ್ರಚಲಿತ ಸಮಸ್ಯೆಗಳ ಬಗ್ಗೆ ಧೀರವಾದ ಮತ್ತು ಸ್ಪಷ್ಟವಾದ ನಿಲುವು ಏನೆಂಬುದನ್ನು ಹೇಳದೆ ಅಧೈರ್ಯದಿಂದ ಕೂಡಿದ, ನೀತಿಯ ಅಭಾಸಗಳಿಂದ ಕೂಡಿದ ಗೊಂದಲದ ಕಂತೆಯನ್ನು, ದೇಶದ ಮುಂದೆ ಇಟ್ಟಿದ್ದಾರೆ. ಅವರು ಮಂಡನೆ ಮಾಡಿರತಕ್ಕ ಬಜೆಟ್ ಭಾಷಣದಲ್ಲಿ ಆಯವ್ಯಯ ಮತ್ತು ಖರ್ಚನ್ನು ಕೂಡ ತೋರಿಸಿದ್ದಾರೆ. ಅವರ ಪತ್ರದ ಪ್ರಕಾರವಾಗಿ ನಮ್ಮ ದೇಶದ ಆದಾಯ 185 ಕೋಟಿ ಮತ್ತು 177 ಖರ್ಚು ಕೋಟಿ ರೂಪಾಯಿ ಎಂದು ತೋರಿಸಿ 8. 59 ಕೋಟಿ ರೂಪಾಯಿಗಳ ಉಳಿತಾಯದ ಬಡ್ಜೆಟ್ಟನ್ನು ಸಭೆಯ ಮುಂದೆ ಮಂಡನೆ ಮಾಡಿದ್ದಾರೆ. ಅದೇ ಭಾಷಣದಲ್ಲಿ ಅವರು ನಮ್ಮ ಹಣಕಾಸಿನ ಪರಿಸ್ಥಿತಿ ಎಷ್ಟು ಕಷ್ಟಕರವಾಗಿದೆ ಎನ್ನುವುದನ್ನು ಕೂಡ ಬಹಳ ಚಿಂತಾಜನಕವಾಗಿ ವರ್ಣನೆ ಮಾಡಿದ್ದಾರೆ. ಇಂಥ ಕಷ್ಟಕರವಾದ ಆರ್ಥಿಕ ಪರಿಸ್ಥಿತಿ ನಮ್ಮ ದೇಶಕ್ಕೆ ಬರಬೇಕಾಗಿದ್ದರೆ ಈ 20 ವರ್ಷಗಳ ಗೊಂದಲದ ಆಡಳಿತವೇ ಕಾರಣ ಎನ್ನುವುದನ್ನು ನಾವು ಮರೆಯುವ ಹಾಗೆ ಇಲ್ಲ. ಇವತ್ತು ನಮ್ಮ ಹಣಕಾಸಿನ ಪರಿಸ್ಥಿತಿ ಎಷ್ಟು ಕಷ್ಟವಾಗಿದೆ ಎಂದರೆ, 1967–68ನೇ ಹಣಕಾಸಿನ ವರ್ಷವನ್ನು ಪ್ರಾರಂಭ ಮಾಡತಕ್ಕುದೇ ಖೋತಾದಿಂದ.

ನೀವು ಯಾವದನ್ನು ಹೇಳಿದರೂ ಕೂಡ ಸಂಶಯವಾಗಿಯೇ ಕಾಣುತೀರಿ ಎಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಾರೆ. ಅರ್ಥ ಮಂತ್ರಿಗಳು ಆಯವ್ಯಯವನ್ನು ಮಂಡಿಸುವಾಗಲೇ ಸಂಶಯದಿಂದ ಇಟ್ಟಿದ್ದಾರೆ. ಇದರಲ್ಲಿ ಎಲ್ಲವು ಸಂಶಯದ ರೀತಿಯಲ್ಲಿಯೇ ಇದೆ. ಇದರಲ್ಲಿ ಯಾವ ನೀತಿ ನಿಲುವನ್ನೂ ಹೇಳಿಲ್ಲ. ನಮ್ಮ ದೇಶದ ಗ್ರಹಚಾರವೋ ಏನೋ ಮುಖ್ಯ ಮಂತ್ರಿಗಳು ಸಂಶಯದಿಂದ ನಾವು ನೋಡುತ್ತೇವೆ ಎಂದು ಹೇಳುತ್ತಾರೆ. ಆದರೆ ಅವರಿಗೆ ಸಂಶಯ ಇದ್ದಂತೆ ಕಾಣುತ್ತದೆ. ಅವರಲ್ಲಿ ಅವರಿಗೇ ನಂಬಿಕೆ ಇಲ್ಲದಿರುವಾಗ, ಅವರ ನಿಲುವು ಏನು ಎನ್ನುವುದನ್ನು ನಿರ್ದಿಷ್ಟವಾಗಿ ಗೊತ್ತಿಲ್ಲದೆ ಇರುವಾಗ ಅವರ ಬಗ್ಗೆ ಸಂಶಯವಿಲ್ಲದೆ

---

†Indicates that the remarks or speeches have not been revised by the Member concerned.

ಏನಾಗುತ್ತದೆ ಎನ್ನುವುದನ್ನು ಯೋಚನೆ ಮಾಡಬೇಕು. ಲ್ಯಾಂಡ್ ಪಾಲಿಸಿ, ಪ್ರಾಹಿಬಿಷನ್ ಪಾಲಿಸಿ, ಯಾವುದರಲ್ಲಿಯೂ ಕೂಡ ನಿರ್ದಿಷ್ಟವಾದ ನಿಲುವು ಇಲ್ಲ. ಭೂಕಂದಾಯವನ್ನು ಈಗಿರ ತಕ್ಕ ರೀತಿಯಲ್ಲಿ ವಜಾ ಮಾಡುತ್ತೇವೆ, ಮುಂದೆ ಇದರ ಆದಾಯವನ್ನು ಸರಿದೂಗಿಸಲು ಕಾನೂನನ್ನು ಬದಲಾಯಿಸುತ್ತೇವೆಂದು ಕೂಡ ಹೇಳಿದ್ದಾರೆ. ಸರ್ಕಾರಕ್ಕೆ ಧೈರ್ಯವಿದ್ದರೆ, ಈ ಕಂದಾಯದ ನೀತಿಯ ವಿಚಾರವಾಗಿ ದೇಶದ ರೈತರಿಗೆ, ಈ ಶಾಸನ ಸಭೆಯ ಮುಖಾಂತರ ವಾಗಿ ನಿರ್ದಿಷ್ಟವಾಗಿ ಹೇಳಲಿ, ಭೂಕಂದಾಯವನ್ನು ಸಂಪೂರ್ಣವಾಗಿ ವಜಾ ಮಾಡಿದ್ದೇವೆಂದು, ಆಗ ನಾನು ಹೇಳುತ್ತೇನೆ ಸರ್ಕಾರದ ನಿಲುವಿನಲ್ಲಿ ಸ್ಪಷ್ಟತೆ ಇದೆ, ಸರ್ಕಾರದ ನೀತಿಯಲ್ಲಿ ಸ್ಪಷ್ಟತೆ ಇದೆ ಎಂದು. ನಿಮ್ಮ ನಿಲುವು ಏನು ಎನ್ನುವುದನ್ನು ದೇಶದ ಜನತೆಗೆ ಗೊತ್ತಾಗತಕ್ಕ ರೀತಿಯಲ್ಲಿ ಹೇಳಬೇಕು, ಧೈರ್ಯವಿದ್ದರೆ ಹೇಳಬೇಕು ಎಂದು ಕೇಳುತ್ತೇನೆ.

ಅದೇ ರೀತಿಯಲ್ಲಿ ಪಾನನಿರೋಧ ನೀತಿಯೂ ಕೂಡ ಇದೆ. ಪಾನನಿರೋಧ ವಿಚಾರದಲ್ಲಿ ಸರ್ಕಾರದ ನೀತಿ ಏನು ಎನ್ನುವುದನ್ನು ಸ್ಪಷ್ಟವಾಗಿ, ಧೈರ್ಯದಿಂದ ಹೇಳಲಿ. ಅಧೈರ್ಯದಿಂದ ಪುಕ್ಕಲು ಮಾತುಗಳನ್ನು, ಜಾರು ಮಾತುಗಳನ್ನು ಆಡುವುದರಿಂದ ಏನೂ ಕಾರ್ಯಸಾಧನೆ ಯಾಗುವುದಿಲ್ಲ. ಒಂದು ಕಡೆ ಹಣಬೇಕು, ಮತ್ತೊಂದುಕಡೆ ಪಾನನಿರೋಧ ಜಾರಿಯಲ್ಲಿದೆ ಎನ್ನುವ ಗಾಂಧಿ ನೀತಿಯೂ ಬೇಕು. You cannot have the cake and eat it too. ಸರ್ಕಾರದ ನೀತಿ ಪ್ರಾಧಾನ್ಯವಾಗಿದ್ದು ಅದಕ್ಕೆ ಅಂಟಿಕೊಂಡಿದ್ದೇವೆ ಎಂದು ಹೇಳುವುದಾದರೆ ಪಾನನಿರೋಧ ನೀತಿಯನ್ನು ಸಡಿಲಿಸುವುದಿಲ್ಲ, ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರುತ್ತೇವೆಂದು ಹೇಳಲಿ. ನಾನು ಸರ್ಕಾರದ ಮಂತ್ರಿಗಳನ್ನು ಕೇಳುತ್ತೇನೆ, ಎದೆ ಮುಟ್ಟಿ ಹೇಳಲಿ, ಪಾನ ನಿರೋಧದಲ್ಲಿ ನೂರಕ್ಕೆ ನೂರರಷ್ಟು ನಂಬಿಕೆ ಇದೆಯೇ. ಆ ತತ್ವದಲ್ಲಿ ನಂಬಿಕೆ ಇದೆಯೇ ಎನ್ನುವುದನ್ನು. ಕೇವಲ ಮಾತಿಗೋಸ್ಕರವಾಗಿ ಪಾನನಿರೋಧವನ್ನು ಇಟ್ಟುಕೊಳ್ಳುತ್ತೇವೆ. ಆದರೂ ಹಣ ಬೇಕಾಗಿರುವುದರಿಂದ ನಾಲ್ಕು ಕೋಟಿ ರೂಪಾಯಿ ಆದಾಯ ಬರತಕ್ಕ ರೀತಿಯಲ್ಲಿ ಪಾನನಿರೋಧ ನೀತಿಯನ್ನು ಸಡಿಲ ಮಾಡುತ್ತೇವೆಂದರೆ ಅದರ ಅರ್ಥವೇನುಎನ್ನುವುದನ್ನು ಅವರು ದಯವಿಟ್ಟು ಈ ಶಾಸನ ಸಭೆಗೆ ತಿಳಿಸಬೇಕು. ನಿಜವಾಗಿಯೂ ಕೂಡ ಪಾನನಿರೋಧವನ್ನು ಸಂಪೂರ್ಣವಾಗಿ ನಾವು ಸಡಿಲ ಮಾಡಿದ್ದೇವೆ. ಪಾನನಿರೋಧ ಈ ದೇಶದಲ್ಲಿ ಜಾರಿಯಲ್ಲಿಲ್ಲ ಎಂದು ಹೇಳಲಾರರು. ಪಾನನಿರೋಧ ಕಾನೂನು ಇರಬೇಕು ಮತ್ತು ಅದು ಸಡಿಲವಾಗಬೇಕು, ದುಡ್ಡು ಬರಬೇಕು ಎನ್ನುವುದರಿಂದ ದೇಶ ಉದ್ಧಾರವಾಗುವುದಿಲ್ಲ. ಪೋಲೀಸಿನವರಿಗೆ ಇಂಥ ಕಾನೂನನ್ನು ಕೊಟ್ಟು ಬಡ ಜನತೆಯ ಮೇಲೆ ಕಾನೂನು ರಕ್ಷಣೆಗಾಗಿ ಕೇಸುಗಳನ್ನು ಹಾಕಿ ದುಡ್ಡನ್ನು ವಸೂಲ್ಮಾಡಿ, ಒಂದು ಕಡೆ ಪೋಲಿಸಿನವರಿಗೂ ದುಡ್ಡು, ಇನ್ನೊಂದುಕಡೆ ಖಜಾನಿಗೆ ನಾಲ್ಕು ಕೋಟಿ ರೂಪಾಯಿ ಆದಾಯ ಬರಬೇಕು ಎನ್ನುವ ಅನ್ಯಾಯದ ಕಾನೂನನ್ನು, ಒಳ್ಳೆಯದಲ್ಲದ ಕಾನೂನನ್ನು ದೇಶದ ಮುಂದೆ ಇಡುತ್ತಿದ್ದೀರಿ. ಇದರಿಂದ ಯಾವ ನೀತಿಯೂ ಕೂಡ ಪ್ರತಿಪಾದನೆ ಯಾಗುವುದಿಲ್ಲ. ಇದರಿಂದ ಯಾರಿಗೂ ಪ್ರಯೋಜನವಾಗುದಿಲ್ಲ ಎಂದು ಸರ್ಕಾರಕ್ಕೆ ಹೇಳಬೇಕಾಗಿದೆ. ಇದರಲ್ಲಿ ಸರ್ಕಾರದವರು ತಮ್ಮ ನಿಲುವು ಏನು ಎನ್ನುವುದನ್ನು ಧೈರ್ಯವಾಗಿ ಹೇಳಬೇಕು. ಈ ಸಭೆಗೆ ತಮ್ಮ ನಿರ್ದಿಷ್ಟವಾದ ನಿಲುವನ್ನು ತಿಳಿಸಬೇಕೆಂದು ಈ ಮೂಲಕ ಒಂದು ಸೂಚನೆಯನ್ನು ಕೊಡುತ್ತಿದ್ದೇನೆ.

ಅದೇ ರೀತಿಯಲ್ಲಿ ಕೈಗಾರಿಕಾ ನೀತಿಯಲ್ಲೂ ಕೂಡ ಸರ್ಕಾರದ ನಿಲುವು ಏನು ಎನ್ನುವುದು ಗೊತ್ತಿಲ್ಲ. ಸಮಾಜವಾದ ಎಂದು ಹೇಳುವುದು ರಾಷ್ಟ್ರೀಕರಣದ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಬೇಕು. ಮೈಸೂರು ದೇಶದಲ್ಲಿ ಯಾವ ಯಾವ ಕೈಗಾರಿಕೆಗಳನ್ನು ರಾಷ್ಟ್ರೀಕರಣ ಮಾಡುತ್ತಾರೆ, ಯಾವ ಯಾವ ಕೈಗಾರಿಕೆಗಳು ಪಬ್ಲಿಕ್ ಸೆಕ್ಟಾರಿನಲ್ಲಿರಬೇಕು, ಯಾವ ಯಾವ ಕೈಗಾರಿಕೆಗಳನ್ನು ಖಾಸಗಿ ಜನರಿಗೆ ಕೊಡಬೇಕು ಎನ್ನುವ ನೀತಿಯನ್ನು

(ಶ್ರೀ ಎಸ್. ಶಿವಪ್ಪ)

ಕೂಡ ಸಭೆಗೆ ತಿಳಿಸಬೇಕು. ಶರಾವತಿಯಲ್ಲಿ ಅಪಾರವಾದ ವಿದ್ಯುಚ್ಛಕ್ತಿ ನಮ್ಮ ದೇಶದಲ್ಲಿ ಉತ್ಪತ್ತಿಯಾಗುತ್ತಿದೆ. ಆದುದರಿಂದ ದೊಡ್ಡ ದೊಡ್ಡ ಬಂಡವಾಳಗಾರರಿಗೆ ಈ ದೇಶಕ್ಕೆ ಬರುವುದಕ್ಕೆ ಆಹ್ವಾನ ಮಾಡಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಕೇಳಿರುವುದಾಗಿ ಹೇಳಿದ್ದಾರೆ. ಇದರ ಹಿಂದೆ ಇರುವ ಸರ್ಕಾರದ ನೀತಿಯಾದರೂ ಏನು ಎನ್ನುವುದನ್ನು ಯೋಚನೆ ಮಾಡಬೇಕು. ಇವತ್ತು ಹಣವಿಲ್ಲದೆ ಯಾವ ಕೈಗಾರಿಕೆಯನ್ನೂ ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ ಎನ್ನುವುದನ್ನು ಎಲ್ಲರೂ ನಂಬುತ್ತಾರೆ. ಸರ್ಕಾರಕ್ಕೆ ಸಾಧ್ಯವಿಲ್ಲದುದನ್ನು ಒಬ್ಬ ಬಂಡವಾಳಗಾರ ಮಾಡುತ್ತಾನೆಂದರೆ ಆ ವಿಚಾರವನ್ನು ಬಹಳ ವಿಷಾದದಿಂದ ನಾವು ನೋಡಬೇಕಾಗಿದೆ. ಸರ್ಕಾರಕ್ಕಿಂತ ಹೆಚ್ಚು ಹಣ, ಹೆಚ್ಚು ಬಂಡವಾಳ ಇರುವ ಜನರು ಈ ದೇಶದಲ್ಲಿ ಇದ್ದಾರೆ, ಅವರು ಕೈಗಾರಿಕೆಗಳನ್ನು ಸ್ಥಾಪನೆ ಮಾಡುತ್ತಾರೆಂದರೆ ಈ ದೇಶದಲ್ಲಿ ಬಂಡವಾಳಗಾರರ ಶಕ್ತಿ, ಬಂಡವಾಳಗಾರರ ಹಣದ ಶಕ್ತಿ ಎಷ್ಟರಮಟ್ಟಿಗೆ ಬೆಳೆದಿದೆ ಎಂದು ನಾವು ವಿಚಾರ ಮಾಡಬೇಕಾಗಿದೆ. ದೊಡ್ಡ ದೊಡ್ಡ ಕೈಗಾರಿಕೆಗಳಿಗಾಗಿ ಐವತ್ತು ಕೋಟಿ ಅಥವಾ ನೂರು ಕೋಟಿಯಷ್ಟು ಸರ್ಕಾರವೇ ಹಾಕಬೇಕು ಎಂದರೆ, ಹಿಂದು ಮುಂದು ನೋಡುವಂತಹ ಪರಿಸ್ಥಿತಿ ಇದೆ. ಆದರೆ ಬೊಂಬಾಯಿಯಿಂದಲೋ ಕಲ್ಕತ್ತಾದಿಂದಲೋ ಕೈಗಾರಿಕೆಗಳನ್ನು ಮಾಡುವವರು ಬಂದರೆ ಅವರು ನೂರು ಕೋಟಿ ರೂಪಾಯಿಗಳನ್ನು ನೀರು ಚೆಲ್ಲುವಹಾಗೆ ಚೆಲ್ಲುತ್ತಾರೆ. ಶ್ರೀಮಂತರಾಗಿದ್ದಾರೆ ಮತ್ತು ಅವರು ಹೆಚ್ಚು ದುಡ್ಡು ಇಟ್ಟು ಕೊಂಡಿರುವವರು ಎಂದು ಅವರಿಗೆ ಇನ್ನೂ ಹೆಚ್ಚು ಪ್ರಾಶಸ್ತ್ಯ ಕೊಡಬೇಕೆಂದು ಮಾಡುವ ನಿಮ್ಮ ನೀತಿ ಸಮಾಜವಾದಕ್ಕೆ ತಿಲಾಂಜಲಿ ಕೊಟ್ಟ ಹಾಗೆ ಎಂದು ಹೇಳಬೇಕಾಗಿದೆ. ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಎಂದರೆ ಸಣ್ಣ ಪುಟ್ಟ ಕೈಗಾರಿಕೆಗಳನ್ನು ಮಾಡುವಂತಹ ಖಾಸಗಿಯವರಿಗೆ ಕೊಟ್ಟರೆ ಅದರಿಂದೇನೂ ತೊಂದರೆಯಾಗುವುದಿಲ್ಲ. ದೊಡ್ಡ ದೊಡ್ಡ ಬೇಸಿಕ್ ಇಂಡಸ್ಟ್ರೀಸ್ ಎಂದರೆ, ಉಕ್ಕು, ಸಿಮೆಂಟು, ಕಬ್ಬಿಣ ಇತ್ಯಾದಿ, ಇತ್ಯಾದಿ ಇಂತಹ ಕೈಗಾರಿಕೆಗಳನ್ನು ಸರ್ಕಾರವೇ ನೇರವಾಗಿ ತನ್ನ ಬಂಡವಾಳವನ್ನು ಹಾಕಿ ಕೆಲಸಗಳನ್ನು ಮಾಡಲಿ ಎಂದು ಸರ್ಕಾರಕ್ಕೆ ಇಲ್ಲಿ ಒತ್ತಿ ಒತ್ತಿ ಹೇಳಬೇಕಾಗಿದೆ. ರಾಷ್ಟ್ರೀಕರಣದ ನೀತಿಯನ್ನು ಆಚರಣೆಗೆ ತರದೇ ಹೋದರೆ ಕೇವಲ ಸಮಾಜವಾದದ ಮಾತು ಎಂದು ಹೇಳುವುದು ಅರ್ಥವಿಲ್ಲದ ಮಾತು ಮತ್ತು ಇದು ಬರೀ ವೇದಿಕೆಯ ಮೇಲಿಂದ ಹೇಳುವ ಭಾಷಣವಾಗುತ್ತದೆಯೇ ವಿನಾ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಸರ್ಕಾರದವರು ಇದನ್ನು ಶೀಘ್ರವಾಗಿ ಯೋಚನೆ ಮಾಡಬೇಕು ಎಂದು ಇಲ್ಲಿ ಸೂಚಿಸುತ್ತೇನೆ.

ಇನ್ನೊಂದು ವಿಚಾರವನ್ನು ಸರ್ಕಾರಕ್ಕೆ ಇಲ್ಲಿ ತಿಳಿಸಬೇಕಾಗಿದೆ. ಅದು ನಮ್ಮ ಸಾಲದ ಹೊರೆ ದಿನೇ ದಿನೇ ಜಾಸ್ತಿಯಾಗುತ್ತಾ ಇದೆ. ಇವೊತ್ತು ನಮ್ಮ ಸಾಲದ ಹೊರೆ 1966-67ನೇ ಸಾಲಿಗೆ ಸುಮಾರು 313.36 ಕೋಟಿಯಷ್ಟು ಇದೆ. ಇದು ನಮ್ಮ ಅರ್ಥಸಚಿವರು ಅವರ ಭಾಷಣದಲ್ಲಿ ಹೇಳಿದ್ದಾರೆ. ಇದಕ್ಕೆ ನಾವು ಕೊಡತಕ್ಕ ಬಡ್ಡಿ ಎಷ್ಟು ಎಂದರೆ ಸುಮಾರು ಹದಿನೇಳೂವರೆ ಕೋಟಿಯಷ್ಟು. ಹಾಗೆ 1967–68ರಲ್ಲಿ ನಾವು ಕೊಡತಕ್ಕ ತೆರಿಗೆ 1961–62ನೇ ಸಾಲಿನಲ್ಲಿ 32 ಕೋಟಿಯವರೆಗೆ ಕೊಡುತ್ತಿದ್ದ ಜನರಿಗೆ 1967–68ನೇ ಸಾಲಿನಲ್ಲಿ ಸುಮಾರು 85 ಕೋಟಿಯವರೆಗೆ ತೆರಿಗೆಹೊರೆಯನ್ನು ಜಾಸ್ತಿ ಮಾಡಿದ್ದಾರೆ ಎಂದರೆ 100ಕ್ಕೆ 250ರಷ್ಟು ಜಾಸ್ತಿ ಮಾಡಿದಂತಾಗುತ್ತದೆ. ಹೀಗೆ ಜನರ ಮೇಲೆ ಇಷ್ಟು ಭಾರವನ್ನೂ ನೀವು ಹಾಕಿದ ಮೇಲೆ ದೇಶದ ಅಭಿವೃದ್ಧಿ ಕಾರ್ಯಗಳಿಗಾಗಿ ನೀವು ಮಾಡತಕ್ಕ ಡೆವಲಪ್‌ಮೆಂಟ್ ಆಕ್ಟಿವಿಟೀಸ್‌ಗಳಿಗಾಗಿ ಸೋಷಿಯಲ್ ಆಕ್ಟಿವಿಟೀಸ್‌ಗಳಿಗಾಗಿ ಇದರಲ್ಲಿ ಕೊಟ್ಟಿರತಕ್ಕ ಹಣ 250 ಕೋಟಿಯಷ್ಟು ತೆರಿಗೆಯ ಭಾರವನ್ನು ದೇಶದ ಜನತೆಯ ಮೇಲೆ ಹೇರಿ ನಮ್ಮ ದೇಶದ ಕಲ್ಯಾಣಕ್ಕಾಗಿ ನೀವು ಖರ್ಚು ಮಾಡಿರತಕ್ಕದ್ದು ಡೆವಲಪ್‌ಮೆಂಟ್ ಕೆಲಸಗಳಿಗಾಗಿ ಸುಮಾರು ಇನ್ನೂರರಷ್ಟು ಎಂದರೆ 1961–62 ರಲ್ಲಿ 60 ಕೋಟಿ ಇದ್ದದ್ದು ಇವತ್ತಿನ ದಿವಸ ಅದನ್ನು 100 ಕೋಟಿಯವರೆಗೆ ಏರಿಸಿದ್ದೀರಿ, ಎಂದರೆ ಒಂದಕ್ಕೆ ಎರಡರಷ್ಟು

ಎಂದಾಗುತ್ತದೆ. ಇದಲ್ಲದೆ ಜನರ ಮೇಲೆ ತೆರಿಗೆಭಾರ ಹೊರಿಸಿರುವುದು 100ಕ್ಕೆ 250 ರಷ್ಟು ಇಷ್ಟು ಹಣ ಬರುತ್ತಿದ್ದರೂ ಸರ್ಕಾರದ ಅಭಿವೃದ್ಧಿ ಕೆಲಸಗಳಿಗಾಗಿ ಸರಿಯಾಗಿ ಖರ್ಚು ಮಾಡದೇ ಇರುವುದರಿಂದ ಹಣ ಪೋಲಾಗುತ್ತಿದೆ ಎನ್ನುವುದಕ್ಕೆ ಇದು ಸಾಕ್ಷಿ ಭೂತವಾಗುತ್ತದೆ. ಕ್ಯಾಪಿಟಲ್ ಔಟ್‌ಲೇ ಬಗ್ಗೆ ನೋಡಿದೆ 1961-62ರಲ್ಲಿ 33 ಕೋಟಿ ಇದ್ದದ್ದು 1967-68ರಲ್ಲಿ 34 ಕೋಟಿಯಷ್ಟು ಇದೆ. ಇದರಿಂದ ತೆರಿಗೆಯ ಭಾರ ಜನತೆಯಮೇಲೆ ಜಾಸ್ತಿಯಾಗುತ್ತಾ ಬರುತ್ತಿದೆ. ನಮ್ಮ ದೇಶದಲ್ಲಿ ಡೆವಲಪ್‌ಮೆಂಟ್ ಅಕ್ಟಿವಿಟೀಸ್‌ಗಳನ್ನು ಹೆಚ್ಚು ಮಾಡತಕ್ಕ ಕೆಲಸಗಳಿಗಾಗಿ ಹಣವನ್ನು ಹೆಚ್ಚು ಮಾಡಲಿಲ್ಲ. ತೆರಿಗೆಯ ಭಾರವನ್ನು ಮಾತ್ರ ಹೆಚ್ಚು ಮಾಡಿದೆ. ಆದುದರಿಂದ ಸರ್ಕಾರ ಇದನ್ನು ಯೋಚನೆಮಾಡಿ ಎಲ್ಲಿ ದುಬಾರಿ ಹಣ ಖರ್ಚಾಗುತ್ತದೆ ಎನ್ನುವುದನ್ನು ಯೋಚನೆಮಾಡಿ ಸ್ಪಷ್ಟವಾಗಿ ನೀತಿಯನ್ನು ಹಾಕಿಕೊಳ್ಳದೇ ಹೋದರೆ ಅದರಿಂದ ಹೆಚ್ಚಿನ ಪ್ರಯೋಜನ ಸಿಗುವುದಿಲ್ಲ.

ಇನ್ನು ಜನರಲ್ ಅಡ್ಮಿನಿಸ್ಟ್ರೇಷನ್ ವಿಚಾರ ತೆಗೆದುಕೊಳ್ಳುವುದಾದರೆ, ಇದರ ಮೇಲೆ ಖರ್ಚು ದಿನೇ ದಿನೇ ಎಷ್ಟು ಮಟ್ಟಿಗೆ ಜಾಸ್ತಿಯಾಗುತ್ತಿದೆ ಎನ್ನುವುದನ್ನು ತಾವು ಯೋಚನೆಮಾಡಬೇಕು. ತಾವೇನೋ ಇಲ್ಲಿ ಹೇಳಬಹುದು. ಮಂತ್ರಿ ಮಂಡಲಕ್ಕಾಗಿ ಎಷ್ಟು ಹಣ ಖರ್ಚಾಗುತ್ತದೆ ಎಂದು ನೋಡಿದರೆ ಸುಮಾರು 12 ಲಕ್ಷ ಇದ್ದು ಇವೊತ್ತು 18 ಲಕ್ಷದಷ್ಟು ಆಯಿತು. ಏಕೆಂದರೆ ಮಂತ್ರಿಗಳ ಸಂಖ್ಯೆ ಜಾಸ್ತಿಯಾಯಿತು, ಅದಕ್ಕಾಗಿ ಖರ್ಚು ಜಾಸ್ತಿಯಾಗಿದೆಯೆಂದು ಇಷ್ಟೊಂದು ಹೆಚ್ಚು ಸಂಖ್ಯೆಯಲ್ಲಿರುವ ಮಂತ್ರಿಮಂಡಲದ ಅಗತ್ಯವಿದೆಯೇ? ಈ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳು ನಾವು ಒಂದು ದೇಶವನ್ನು ಆಳಬೇಕೆಂದಿರುವಾಗ ಇದು ನನಗೆ ಸಂಬಂಧಪಟ್ಟ ವಿಚಾರ ಮತ್ತು ದೇಶದ ಜವಾಬುದಾರಿಯನ್ನು ಹೊತ್ತಿರುವುದರಿಂದ ಅದಕ್ಕೆ ತಕ್ಕಂತೆ ಮಂತ್ರಿಮಂಡಲದ ಗಾತ್ರವೂ ಇರುತ್ತದೆ ಎಂದು ಹೇಳಬಹುದು. ಆದರೆ ಅವರು ಈ ದೇಶದ ಶಾಸನ ಸಭೆಗೆ ಇದರ ಬಗ್ಗೆ ಸರಿಯಾದ ವಿವರಗಳನ್ನು ಕೊಡಲೇಬೇಕಾಗಿದೆ. ಮಂತ್ರಿ ಮಂಡಲದ ಗಾತ್ರ ಈಗ ಹೇಗಿದೆ ಎಂದರೆ, ಹೋದ ಸಾರಿ ಯಾವ ಯಾವ ಮಂತ್ರಿಗಳಿದ್ದರೋ ಅವರುಗಳೇ ಇದ್ದಾರೆ ಮತ್ತು ಅವರು ಯಾವ ಯಾವ ಖಾತೆಗಳನ್ನು ಹೊಂದಿದ್ದರೋ ಅದನ್ನು ಸ್ವಲ್ಪ ಬದಲಾವಣೆ ಮಾಡಿದ್ದಾರೆ ಅಷ್ಟೇ. ನಿಮಗೇ ನಿಮ್ಮ ಮಂತ್ರಿಗಳಲ್ಲಿ ನಂಬಿಕೆ ಇಲ್ಲ. ಆದುದರಿಂದ ನಿಮ್ಮ ಮಂತ್ರಿಮಂಡಲದಲ್ಲಿ ದೇಶದ ಜನತೆಗೆ ನಂಬಿಕೆಯಿಲ್ಲ. ಆದ್ದರಿಂದ ಈ ವಿಚಾರವನ್ನು ಈ ಸಭೆಗೆ ತಿಳಿಸಬೇಕಾಗಿದೆ. ನಿಮ್ಮ ಸಂಶಯದಿಂದಲೇ ನಿಮ್ಮ ಮಂತ್ರಿಮಂಡಲಕ್ಕೆ ಖರ್ಚು ಜಾಸ್ತಿಯಾಗುತ್ತಿದೆ. ಇದರ ಬಗ್ಗೆ ನಮಗೆ ಈಚೆಗೆ ಒದಗಿಸಿರುವ ಅಡಿಟ್ ರಿಪೋರ್ಟನಲ್ಲಿ ಪುಟ 64 ರಲ್ಲಿ ಓದಿದರೆ ತಮಗೆ ಗೊತ್ತಾಗುತ್ತದೆ. ಇದರಲ್ಲಿ ಅವರು ಹೇಳಿರುವುದು:

"46 Expenditure on Minister's Residences:

(a) 14,000 per Minister and Rs. 8,000 per Deputy Minister, if official residences are provided.

(b) Rs. 2,074 per Minister and Rs. 2,000 per Deputy Minister, if they stayed in private residence."

ಎಂದರೆ, ಒಬ್ಬರು ಮಂತ್ರಿಗಳ ಮನೆಗಳಿಗೆ 14 ಸಾವಿರ, ಒಬ್ಬರು ಡೆಪ್ಯುಟಿ ಮಿನಿಸ್ಟರಿಗೆ ಎಂಟು ಸಾವಿರದವರೆಗೆ ಖರ್ಚು ಮಾಡಬಹುದು ಎಂದು ಇದೆ. ತಾವೇ 1965-66ನೇ ಸಾಲಿನ ಆಡಿಟ್ ರಿಪೋರ್ಟು ಪ್ರಕಾರ ಹೇಳಿರುವಂತೆ 13 ಜನ ಮಂತ್ರಿಗಳಿಗಾಗಿ ಹಾಗೂ ಒಂಬತ್ತು ಜನ ಉಪ ಮಂತ್ರಿಗಳ ಮನೆಗಳಿಗಾಗಿ ಖರ್ಚು ಮಾಡಿರತಕ್ಕ ಹಣ ಎಂದರೆ ಒಬ್ಬರು ಮಂತ್ರಿಗಳಿಗೆ 14 ಸಾವಿರ ಒಬ್ಬರು ಉಪಮಂತ್ರಿಗಳಿಗೆ 8 ಸಾವಿರ ಎಂದರೆ ಇದರ ಒಟ್ಟು ಮೊತ್ತ ಸುಮಾರು 2.15 ಲಕ್ಷ ಮಂತ್ರಿಗಳಿಗಾಗಿ 1.23 ಲಕ್ಷ ಉಪಮಂತ್ರಿಗಳ ಮನೆಗಳಿಗಾಗಿ ಹೆಚ್ಚು ಖರ್ಚು ಮಾಡಿದ್ದಾರೆ ಎಂದು ಈ ಆಡಿಟ್ ರಿಪೋರ್ಟಿನಲ್ಲೇ ಇದೆ.

ಶ್ರೀ ಬಿ. ರಾಚಯ್ಯ.—ಹಳೆ ಮನೆಗಳಾದರೆ ಅದನ್ನು ಏನು ಮಾಡುವುದು?

ಶ್ರೀ ಎಸ್. ಶಿವಪ್ಪ.—ಮಾನ್ಯ ಅರಣ್ಯ ಶಾಖೆಯ ಮಂತ್ರಿಗಳು ಆಡಿಟ್ ರಿಪೋರ್ಟಿನಲ್ಲಿ ಪುಟ 64 ರಲ್ಲಿ ಏನಿದೆ ತಾವೇ ಓದಿ ನೋಡಲಿ. ಅದನ್ನು ಮಾತ್ರ ಇಲ್ಲಿ ತಮ್ಮ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಎಷ್ಟುಮಟ್ಟಿಗೆ ಹಣವನ್ನು ಖರ್ಚು ಮಾಡುತ್ತಿದ್ದೀರಿ ಮತ್ತು ಮಿತವ್ಯಯವನ್ನು ಯಾವರೀತಿ ಮಾಡಬೇಕು ಎನ್ನುವುದಕ್ಕಾಗಿ ಈ ವಿಚಾರವನ್ನು ಹೇಳಬೇಕಾಗಿ ಬಂತು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಅರಣ್ಯ ಸಚಿವರೂ ಕೂಡ ಮಿತವ್ಯಯದ ದೃಷ್ಟಿಯಿಂದ ಯಾವ ರೀತಿ ಮಾಡಬೇಕು ಎನ್ನುವುದನ್ನು ಅವರು ಜವಾಬು ಕೊಡುವಾಗ ಇಲ್ಲಿ ವಿವರಗಳನ್ನು ಕೊಡ ಬೇಕೆಂದು ಕೇಳುತ್ತೇನೆ.

ಹಾಗೇ ಇದರಲ್ಲಿ ಮಿತವ್ಯಯಮಾಡುವ ಇನ್ನೂ ಅನೇಕ ಇಲಾಖೆಗಳೂ ಇವೆ. ಪೋಲೀಸು ಖಾತೆಗಾಗಿ ನೋಡಿದರೆ ದಿನೇ ದಿನೇ ದುಡ್ಡನ್ನು ಜಾಸ್ತಿ ಖರ್ಚು ಮಾಡುತ್ತಾ ಇದ್ದಾರೆ. 1965–66ನೇ ಸಾಲಿನಲ್ಲಿ ಐದೂವರೆ ಕೋಟಿ ಇದ್ದದ್ದು 1967–68ರಲ್ಲಿ 7.20 ಲಕ್ಷದಷ್ಟು ಈ ಬಜೆಟ್ಟಿನಲ್ಲಿ ಒದಗಿಸಿದ್ದಾರೆ. ಒಂದು ವರ್ಷಕ್ಕೆ ಪೋಲೀಸು ಖಾತೆಗಾಗಿ ಇಷ್ಟೊಂದು ಹೆಚ್ಚು ಖರ್ಚು ಮಾಡುವ ಆವಶ್ಯಕತೆ ಇದೆಯೇ? ಏನು ಈ ದೇಶದಲ್ಲಿ ತಾವು ಪೋಲೀಸು ರಾಜ್ಯ ಬೆಳೆಸುವುದಕ್ಕೆ ಹೊರಟಿದ್ದೀರಾ? ಪೋಲೀಸಿನವರ ಅವಶ್ಯಕತೆ ಇಷ್ಟು ಜಾಸ್ತಿಯಾಗಿತ್ತೇ? ಈಗ ಪೋಲೀಸು ರಾಜ್ಯ ಹೋಗಿ ಜನಗಳ ಪ್ರೀತಿಯ ಕವಚವನ್ನು ನೀವು ಸಂಪಾದಿಸಬೇಕಾದ ಕಾಲ ಬಂದಿದೆ. ಅಂತಹ ಜನರ ಪ್ರೀತಿಯನ್ನು ನಿಮಗೆ ಪಡೆಯುವುದಕ್ಕೆ ಸಾಧ್ಯವಿಲ್ಲವೇ? ಆಡಳಿತದವರು ಕೆಲಸ ಮಾಡುವಾಗ ದೇಶದ ಜನರ ಪ್ರೀತಿಯ ಕವಚವನ್ನು ಸಂಪಾದಿಸಿ ಕೆಲಸ ಮಾಡುವುದೇ ನಿಜವಾದ ಪ್ರಜಾಪ್ರಭುತ್ವದ ಧರ್ಮ. ಇದನ್ನು ಅನುಷ್ಠಾನಕ್ಕೆ ತರಬೇಕೆಂದು ತಮ್ಮಲ್ಲಿ ಹೇಳಲು ಇಷ್ಟ ಪಡುತ್ತೇನೆ. ಇತ್ತೀಚೆಗೆ ಈ ಇಲಾಖೆಗಾಗಿ ಖರ್ಚು ವರ್ಷೇ ವರ್ಷೇ ಹೆಚ್ಚು ಮಾಡುತ್ತಿದ್ದೀರಿ.

1-30 P.M.

ವಿದ್ಯಾ ಇಲಾಖೆಯ ಬಾಬನ್ನು ನೋಡಿದರೆ ಅದಕ್ಕಾಗಿ ಸುಮಾರು 4–5 ಕೋಟಿ ಹೆಚ್ಚು ಒದಗಿಸಿದ್ದೀರಿ, ನಿಜ, ದೇಶದಲ್ಲೆಲ್ಲಾ ಅತಿ ಮುಖ್ಯವಾದ ಈ ವಿದ್ಯಾ ಇಲಾಖೆಗೆ ಹಣವನ್ನು ಒದಗಿಸಬೇಕೆಂದು ಹೋದ ಸಾರಿ 33 ಕೋಟಿಯವರೆಗೂ ಒದಗಿಸಿದ್ದರು. ಆದರೆ ಅಷ್ಟು ಹಣ ಒದಗಿಸಿದ್ದರೂ ಅದಕ್ಕೆ ತಕ್ಕ ಪ್ರತಿಫಲ ದೇಶದ ಜನತೆಗೆ ಒದಗಿಸುತ್ತಿದ್ದೀರಾ ಎನ್ನುವುದನ್ನು ನಾವು ಇಲ್ಲಿ ನೋಡಬೇಕಾಗಿದೆ. ನೀವು ಇವೊತ್ತು ಕಂಪಲ್ಸರಿ ಎಜುಕೇಷನ್ ಜಾರಿಗೆ ತಂದಿದ್ದೀರಿ. ಇವೊತ್ತು ನಮ್ಮ ದೇಶದಲ್ಲಿ ಕಡ್ಡಾಯವಾದ ಶಿಕ್ಷಣವನ್ನು ಎಷ್ಟರಮಟ್ಟಿಗೆ ಕೊಟ್ಟಿದೆ ಎಂಬುದು ಪ್ರಾಮುಖ್ಯವಾದ ವಿಚಾರ. ಇವೊತ್ತು ಎಷ್ಟೋಕಡೆ ಸ್ಕೂಲುಗಳಿಗೆ ಕಟ್ಟಡ ಇಲ್ಲದೆ ಮರಗಳ ಕೆಳಗೆ, ಚಾವಡಿಯಲ್ಲಿ, ದೇವಸ್ಥಾನಗಳಲ್ಲಿ ಜಗಲಿ ಮೇಲೆ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಾಇರುವುದನ್ನು ಯೋಚನೆ ಮಾಡಬೇಕು. ವಿದ್ಯಾರ್ಥಿಗಳು ಕೂಡುವುದಕ್ಕೆ ಸ್ಥಳ ಇಲ್ಲ, ವಿದ್ಯಾಭ್ಯಾಸ ಮಾಡಲು ಕಟ್ಟಡಗಳು ಇಲ್ಲ. ಕೆಲವು ಕಡೆ ಉಪಾಧ್ಯಾಯರುಗಳು ಇದ್ದರೆ, ಸ್ಥಳ ಇಲ್ಲ. ಕೆಲವು ಕಡೆ ಕಟ್ಟಡಗಳೂ ಇಲ್ಲ, ಉಪಾಧ್ಯಾಯರುಗಳೂ ಇಲ್ಲ. ಹೀಗೆ ಕಡ್ಡಾಯವಾದ ಶಿಕ್ಷಣವನ್ನು ಮಾಡಿ ದೇಶದಲ್ಲಿ ಜಾರಿಗೆ ತಂದಿದ್ದೀರಿ. ಇದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆ ಎಂಬುದನ್ನು ಯೋಚನೆ ಮಾಡಿ. ಲಕ್ಷಾಂತರ ರೂಪಾಯಿ ಖರ್ಚು ಮಾಡಿ ದೊಡ್ಡ ಭವ್ಯವಾದ ಬಂಗಲೆಗಳನ್ನು ನಿರ್ಮಾಣ ಮಾಡುತ್ತೀರಿ. ಒಂದು ಸ್ಕೂಲಿಗೆ 3,000 ರೂಪಾಯಿ ಕೊಡಬೇಕು ಎಂದರೆ, ನೀವು 2,000 ರೂಪಾಯಿ ಕಾಂಟ್ರಿಬ್ಯೂಷನ್ ಕೊಡಿ ಉಳಿದ ಹಣ ನಾವು ಕೊಡುತ್ತೇವೆ ಎಂದು ಬಡ ರೈತರನ್ನು ಕೇಳುತ್ತೀರಿ. ಅವರು 2 ಸಾವಿರ ಕೊಡಲಿಲ್ಲ, ಸ್ಕೂಲು ಆಗಲಿಲ್ಲ. ಹೀಗಾದರೆ ಮಕ್ಕಳಿಗೆ ಕಡ್ಡಾಯವಾದ ಶಿಕ್ಷಣ ಯಾವ ರೀತಿ ಜಾರಿಗೆ ಬರುತ್ತದೆ? ಮಕ್ಕಳ ವಿದ್ಯಾಭ್ಯಾಸ ವನ್ನು ನೋಡಿದರೆ ಇಂತಹ ವಿದ್ಯಾಭ್ಯಾಸವನ್ನು ಕೊಡುವುದಕ್ಕಿಂತ ಶಾಲೆಗಳನ್ನು ಮುಚ್ಚುವುದೇ ಲೇಸು ಎಂದು ಕಾಣುತ್ತದೆ. ದೇಶದಲ್ಲಿ ವಿದ್ಯಾಭ್ಯಾಸದ ಒಂದು ಕಾಂಪಿಟಿಷನ್ ವಿಜ್

(Competition Age) ಬಂದಿದೆ. ನಮ್ಮ ಮಕ್ಕಳು ಡಾಕ್ಟರ್ ಆಗಬೇಕು, ಇಂಜಿನೀಯರ್ ಆಗಬೇಕು ಎಂದು. ಹಡಗಲಿ ಕ್ಷೇತ್ರದ ಮಕ್ಕಳು ವಿದ್ಯಾಭ್ಯಾಸ ಮಾಡಬೇಕಾದರೆ ಇಂಜನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಸಿಕ್ಕಬೇಕಾದರೆ ಮೆರಿಟ್ ಪ್ರಕಾರ ಅಲ್ಲಿ ಸೀಟು ಸಿಕ್ಕುತ್ತದೆ. ಸ್ಪರ್ಧೆಯಲ್ಲಿರುವ ವಿದ್ಯಾರ್ಥಿಗಳ ಜೊತೆಗೆ ಯಾವ ರೀತಿಯಿಂದ ಮುಂದಕ್ಕೆ ಬರುತ್ತಾರೆ ಎನ್ನುವುದನ್ನು ಯೋಚನೆ ಮಾಡಿ. ವಿದ್ಯಾಭ್ಯಾಸಕ್ಕೆ ಡಬ್ಬಲ್ ಸ್ಟ್ಯಾಂಡರ್ಡ್ ಇದೆ. ಬಹಳ ಬುದ್ಧಿವಂತರ ಮಕ್ಕಳಿಗೆ ಹಣವಂತರ ಮಕ್ಕಳಿಗೆ ಈ ಒಂದು ಕಡ್ಡಾಯ ವಿದ್ಯಾಭ್ಯಾಸ. ಬಡ ರೈತರ ಮಕ್ಕಳಿಗೆ ಒಂದು ರೀತಿಯಾದ ವಿದ್ಯಾಭ್ಯಾಸ ಇದೆ. ಜೀವನರಂಗದಲ್ಲಿ ಶ್ರೇಷ್ಠವಾದ ವಿದ್ಯೆಯನ್ನು ಪಡೆಯುವುದಕ್ಕೆ ಏನು ಅವಕಾಶ ಕಲ್ಪನೆ ಮಾಡಿದ್ದೀರಿ ಎಂದು ವಿದ್ಯಾ ಇಲಾಖೆಯ ಮಂತ್ರಿಗಳನ್ನು ಕೇಳುತ್ತೇನೆ.

ಮತ್ತೊಂದು ವಿಚಾರ ವಿಶ್ವವಿದ್ಯಾನಿಲಯದ ಮಟ್ಟಕ್ಕೆ ಹೋದರೆ ಪ್ರೀ-ಯೂನಿವರ್ಸಿಟಿ ಸ್ಥಾನ ಏನು ಎನ್ನುವುದು ತೂಗು ಉಯ್ಯಾಲೆ ಇದ್ದ ಹಾಗೆ ಇದೆ. ವಿದ್ಯಾ ಇಲಾಖೆಯವರು ಅವರ ವಶದಲ್ಲಿರುವ ಹೈಸ್ಕೂಲುಗಳಲ್ಲಿ 11ನೇ ಸ್ಟ್ಯಾಂಡರ್ಡ್‌ನ್ನು ಪಿ.ಯು.ಸಿ. ಎಂದು ಹೇಳುತ್ತಾರೆ. ವಿಶ್ವವಿದ್ಯಾನಿಲಯದವರು ಪಿ.ಯು.ಸಿ. ಒಂದು ವರ್ಷ ಇರಬೇಕೇ ಕೆಲವೆಡೆ ಎರಡು ವರ್ಷ ಇರಬೇಕೇ ಎಂದು ಇನ್ನೂ ನಿರ್ದಿಷ್ಟವಾದ ತೀರ್ಮಾನ ಮಾಡಿಲ್ಲ. ಹೀಗಿರುವಾಗ ಪಿ.ಯು.ಸಿ. ಅಭ್ಯಾಸ ಮಾಡತಕ್ಕ ಮಕ್ಕಳಿಗೆ ನಾನು ಯಾವುದಕ್ಕೇ ಹೋಗುವುದು ಅಥವಾ ಯಾವುದಕ್ಕೆ ಹೋಗಬಾರದು ಎನ್ನುವ ಪ್ರಶ್ನೆ ಬರುತ್ತದೆ. ಆದುದರಿಂದ ಇದು ಬಹಳ ಮುಖ್ಯ. ಪಿ.ಯು.ಸಿ. ಕೋರ್ಸ್ ಹೈಸ್ಕೂಲಿನಿಂದ ಬಂದಂಥ ವಿದ್ಯಾರ್ಥಿಗೆ ಕೇವಲ ಒಂದು ವರ್ಷದಲ್ಲಿ ವಿಶ್ವವಿದ್ಯಾನಿಲಯದ ವಾತಾವರಣಕ್ಕೆ ಹೊಂದಿಕೊಳ್ಳುವುದು ಬಹಳ ಕಷ್ಟ ಇದೆ. ಕೊನೆಯ ಪಕ್ಷ 2 ವರ್ಷ ಮಾಡಿ ಸಾಕಷ್ಟು ಕಾಲಾವಕಾಶ ಕೊಟ್ಟರೆ ಅವನು ಪಿ.ಯು.ಸಿ. ಪರೀಕ್ಷೆಯಲ್ಲಿ ತೇರ್ಗಡೆ ಆಗುವ ಕಾಲದಲ್ಲಿ ಹೆಚ್ಚು ಪರಿಣಾಮಕಾರಿಯಾದ ರೀತಿಯಲ್ಲಿ ಆಗಲು ಅವಕಾಶವಾಗುತ್ತದೆ. 2 ವರ್ಷ ಮಾಡಬೇಕು. ಈ 2 ವರ್ಷದ ಪಿ.ಯು.ಸಿ. ಕೋರ್ಸ್ ಹೈಸ್ಕೂಲಿಗೆ ಕೊಡಬಾರದು. ಪಿ.ಯು.ಸಿ. ಯನ್ನು ಜೂನಿಯರ್ ಕಾಲೇಜುಗಳನ್ನಾಗಿ ಮಾಡಿ ಎಂದು ಶ್ರೀಮಾನ್ ಕಂಠಿಯವರ ಕಾಲದಲ್ಲಿ ಕೊನೆಯ ವರ್ಷದಲ್ಲೇ ಹೇಳಿದ್ದಕ್ಕೆ ಅವರು ಅದನ್ನು ಯೋಚನೆ ಮಾಡುತ್ತೇವೆಂದು ಹೇಳಿದರು. ಈಗ ಅವರಿಗೆ ಆ ಖಾತೆ ಇಲ್ಲ. 2 ವರ್ಷ ಜೂನಿಯರ್ ಕಾಲೇಜುಗಳನ್ನಾಗಿ ಮಾಡಿ ಪಿ.ಯು.ಸಿ. ಜೂನಿಯರ್ ಕಾಲೇಜುಗಳ ವ್ಯಾಪ್ತಿಗೆ ಒಳಪಡುವುದರಿಂದ ಪಿ.ಯು.ಸಿ. ಕೋರ್ಸ್ ವಿಶ್ವವಿದ್ಯಾನಿಲಯದ ವಾತಾವರಣದಲ್ಲಿ ನಡೆದು ಶಿಕ್ಷಣದ ಸಾಮರ್ಥ್ಯವನ್ನು ಕಲ್ಪಿಸಿಕೊಡತಕ್ಕದ್ದು ಮುಖ್ಯ. ಇದನ್ನು ಸರ್ಕಾರ ಯೋಚನೆ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ (ನ್ಯಾಯ ಶಾಖೆಯ ಮಂತ್ರಿಗಳು).—ಎಜುಕೇಷನ್ ಕಮೀಷನ್ನಿನವರು ಯೂನಿವರ್ಸಿಟಿಗೆ ಕೊಡಬಾರದು ಎಂದು ಹೇಳಿದ್ದಾರೆ.

ಶ್ರೀ ಎಸ್. ಶಿವಪ್ಪ.—ಅದು ಏನೇ ಇರಲಿ. ಯೂನಿವರ್ಸಿಟಿಗೆ ಕೊಡದೇ ಹೋದರೂ ಸರ್ಕಾರದವರೇ ನೇರವಾಗಿ 2 ವರ್ಷದ ಒಂದು ಕೋರ್ಸನ್ನು ಪ್ರಾರಂಭ ಮಾಡಿ ಜೂನಿಯರ್ ಕಾಲೇಜುಗಳಿಗೆ ಯಾವ ಹೆಸರನ್ನಾದರೂ ಕೊಡಿ. ಹೈಸ್ಕೂಲುಗಳಿಗೆ ಸೇರಿಸುವುದು ಬೇಡ. ಸೆಕೆಂಡರಿ ವಿದ್ಯಾಭ್ಯಾಸದ ಜೊತೆಗೆ ಸೇರತಕ್ಕದ್ದು ಬೇಡ. ಪ್ರಾರಂಭವಾದ 10ನೇ ಸ್ಟ್ಯಾಂಡರ್ಡನ್ನು 2 ವರ್ಷದ ಕೋರ್ಸನ್ನಾಗಿ ಮಾಡಿ.

ಶ್ರೀ ಎಸ್. ಆರ್. ಕಂಠಿ.—ಹೈಯರ್ ಸೆಕೆಂಡರಿ ಕೋರ್ಸ್‌ನಲ್ಲಿ 11ನೇ ಸ್ಟ್ಯಾಂಡರ್ಡ್ ಇರಬೇಕು ಎಂದು ಎಜುಕೇಷನ್ ಕಮೀಷನ್ ರಿಪೋರ್ಟ್‌ನಲ್ಲಿ ಇದೆ.

ಶ್ರೀ ಎಸ್. ಶಿವಪ್ಪ.—ವ್ಯವಸಾಯದ ವಿಚಾರದಲ್ಲಿ ನಮ್ಮ ಮುಖ್ಯ ಮಂತ್ರಿಗಳು ಆ ಖಾತೆಯನ್ನು ಅವರೇ ಇಟ್ಟುಕೊಂಡು ಬಿಟ್ಟಿದ್ದಾರೆ, ಅದಕ್ಕೆ ಬಹಳ ಪ್ರಾಶಸ್ತ್ಯ ಕೊಡಬೇಕು ಎಂದು. ವ್ಯವಸಾಯ ಬಹಳ ಪ್ರಾಮುಖ್ಯವಾದ ಶಾಖೆ. ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ

(ಶ್ರೀ ಎಸ್. ಶಿವಪ್ಪ)

ಕೊಡಬೇಕು ಎನ್ನುವುದನ್ನು ನಾನು ಒಪ್ಪುತ್ತೇನೆ. ಇವೊತ್ತು ವ್ಯವಸಾಯದ ಅಭಿವೃದ್ಧಿ ಯಾವ ರೀತಿ ಆಗುತ್ತದೆ ಎಂದರೆ ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಉದ್ಯೋಗಗಳನ್ನು ನಿರ್ಮಾಣ ಮಾಡುವ ಕಾರ್ಯ ಮಾತ್ರ ವ್ಯವಸಾಯದ ಇಲಾಖೆಯಲ್ಲಿ ನಡೆದಿದೆಯೇ ಹೊರತು ನಿಜವಾಗಿ ವ್ಯವಸಾಯದ ಇಲಾಖೆಯಿಂದ ರೈತನಿಗೆ ಯಾವ ಅಭಿವೃದ್ಧಿ ಕೆಲಸಗಳೂ ಆಗುತ್ತಾ ಇಲ್ಲ. ವ್ಯವಸಾಯದ ಇಲಾಖೆಯಲ್ಲಿ ಎಸ್ಟಾಬ್ಲಿಷ್‌ಮೆಂಟ್ ಏನು ಇದೆ, ಉದ್ಯೋಗಕ್ಕೆ ಕೊಡತಕ್ಕ ಹಣ ಡೆವಲಪ್‌ಮೆಂಟಿಗೆ ಕೊಡತಕ್ಕ ಹಣಕ್ಕಿಂತ ಜಾಸ್ತಿ ಆಗಿದೆ. ತಮ್ಮ ಒಂದೆರಡು ಆಡಿಟ್ ರಿಪೋರ್ಟಿನಲ್ಲಿ ಅವರು ಹೇಳಿದ್ದಾರೆ. ಉದ್ಯೋಗಕ್ಕೂ ಮತ್ತು ಡೆವಲಪ್‌ಮೆಂಟಿಗೂ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ಚೆನ್ನಾಗಿ ಹೇಳಿದ್ದಾರೆ. ಒಂದೇ ಒಂದು ಉದಾಹರಣೆ ಕೊಟ್ಟಿದ್ದಾರೆ. ಅದು 'comprehensive improvement scheme of practices' ಇದಕ್ಕೆ ಒಂದು ಕಡೆ ಎಸ್ಟಾಬ್ಲಿಷ್‌ಮೆಂಟ್ ಎಕ್ಸ್‌ಪೆಂಡಿಚರ್ ಲೆಕ್ಕದ ಪ್ರಕಾರ ಇರಬೇಕಾದುದು 5 ಲಕ್ಷ 64 ಸಾವಿರ. ಅವರು ಖರ್ಚು ಮಾಡಿರುವುದು ಎಸ್ಟಾಬ್ಲಿಷ್‌ಮೆಂಟಿಗೆ 6 ಲಕ್ಷ 80 ಸಾವಿರ. Development expenditure subsidy for improved seeds ಅದಕ್ಕೋಸ್ಕರವಾಗಿ $14\frac{1}{2}$ ಲಕ್ಷ ಖರ್ಚು ಮಾಡಬೇಕಾಗಿತ್ತು, ಆದರೆ ಖರ್ಚು ಮಾಡಿದ್ದು 5 ಲಕ್ಷ. ಎಸ್ಟಾಬ್ಲಿಷ್‌ಮೆಂಟ್ 5 ಲಕ್ಷ ಆಗುವ ಕಡೆ 6 ಲಕ್ಷ 80 ಸಾವಿರ. ಡೆವಲಪ್‌ಮೆಂಟಿಗೆ 15 ಲಕ್ಷ ಆಗುವ ಕಡೆ ಆದದ್ದು 5 ಲಕ್ಷ ಮಾತ್ರ. ಆದುದರಿಂದ ಈ ರೀತಿಯಾದ ಎಸ್ಟಾಬ್ಲಿಷ್‌ಮೆಂಟಿಗೆ ಹೆಚ್ಚಿಗೆ ಹಣವನ್ನು ಖರ್ಚು ಮಾಡುತ್ತಾ ಇದ್ದಾರೆಯೋ ಹೊರತು ಬೀಜ ಹಂಚುವುದಕ್ಕೆ ಮತ್ತು ಡೆವಲಪ್‌ಮೆಂಟ್ ಬಾಬುಗಳಿಗೆ ಏನು ಹಣ ಖರ್ಚು ಮಾಡಬೇಕಾಗಿದೆಯೋ ಆ ಹಣದ ಅರ್ಧದಷ್ಟು ಖರ್ಚು ಆಗದೇ ಇರುವುದರಿಂದ ವ್ಯವಸಾಯ ಇಲಾಖೆ ಮತ್ತು ಇತರ ಇಲಾಖೆಗಳಲ್ಲಿಯೂ ಖರ್ಚಿಗೆ ತಕ್ಕಂತೆ ಸಾಕಷ್ಟು ಅನುಕೂಲ ಆಗಿಲ್ಲ.

ಇಂಡಸ್ಟ್ರೀಸ್ ವಿಚಾರ: ಟೆಕ್ನಿಕಲ್ ನೋ ಹೌ (Know-How) ಒದಗಿಸಲು ಸಂಸ್ಥಾನದಲ್ಲಿ ಇಂಡಸ್ಟ್ರೀಸ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್ಸ್ ಯಾವ ರೀತಿ ಕೆಲಸ ಮಾಡುತ್ತಿದೆ ಎಂದರೆ, ಇವೊತ್ತಿನ ದಿವಸ ಟ್ರೈನಿಂಗ್ ಇನ್‌ಸ್ಟಿಟ್ಯೂಟಿನಲ್ಲಿ ಎಷ್ಟು ವಿದ್ಯಾರ್ಥಿಗಳು ತಯಾರಾಗಬೇಕಾಗಿತ್ತೋ ಅದರ ಅರ್ಧದಷ್ಟೂ ತಯಾರಾಗಿ ಬಂದಿಲ್ಲ. ಇವೊತ್ತು ನಮ್ಮ ಸ್ಯಾಂಕ್ಷನ್ ಸ್ಕೀಮ್ಸ್ ಪ್ರಕಾರ ಸುಮಾರು 600–800 ಜನ ತಯಾರು ಆಗಬೇಕಾದಂಥ ಕಡೆ ಇವೊತ್ತು ಕೇವಲ 450 ಜನ ಮಾತ್ರ ತಯಾರಾಗಿದ್ದಾರೆ, ಎಂದು ಹೇಳಿದ್ದಾರೆ. ಇಂತಹ ಸ್ಕೂಲುಗಳಿಂದ ಏನು ಪ್ರಯೋಜನ ಆಯಿತು ಎಂಬುದನ್ನು ಯೋಚನೆ ಮಾಡಬೇಕಾಗಿದೆ. ಅಲ್ಲಿ ಇದ್ದಂತ ಎಸ್ಟಾಬ್ಲಿಷ್‌ಮೆಂಟಿಗೆ ಹೆಚ್ಚು ಖರ್ಚಾಗಿದ್ದರೂ ಕೂಡ ನಮಗೆ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನಲ್ಲಿ ಎಷ್ಟು ಜನ ತಯಾರಾಗಬೇಕಾಗಿತ್ತೋ ಅದರ ಅರ್ಧ ಭಾಗ ಬಂದಿಲ್ಲ ಎಂದರೆ ಕೈಗಾರಿಕೆ ಯಾವ ರೀತಿ ಅಭಿವೃದ್ಧಿ ಆಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು. ಹೀಗೆ ನಮ್ಮ ದೇಶದಲ್ಲಿ ಅನೇಕ ಅಪ್ರಯೋಜಕವಾಗಿ ಖರ್ಚು ಮಾಡತಕ್ಕ ಹಣವನ್ನು ನೋಡುತ್ತಾ ಇದ್ದೇವೆ.

ಮತ್ತೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಕಾಲಾವಕಾಶ ಇಲ್ಲ. ಒಂದೆರಡು ಮಾತು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಇವೊತ್ತು ನಮ್ಮ ಹಣ ಎಷ್ಟರಮಟ್ಟಿಗೆ ಖರ್ಚು ಮಾಡಿದ್ದೀರಿ ಅದಕ್ಕೆ ಪ್ರತಿಫಲವಾಗಿ ಬೇಕಾದ ಲಾಭ ಬಂದಿಲ್ಲ ಎನ್ನುವುದರ ಬಗ್ಗೆ ಒಂದೆರಡು ವಿಚಾರ ತಮ್ಮಲ್ಲಿ ಹೇಳುತ್ತೇನೆ. ಇವೊತ್ತು ಸರ್ಕಾರ ನೇರವಾಗಿ ಮಾಡತಕ್ಕ ಕೈಗಾರಿಕಾಉದ್ಯಮದಲ್ಲಿ ಸುಮಾರು 25 ಕೋಟಿ ರೂಪಾಯಿ ಬಂಡವಾಳ ಹಾಕಿರತಕ್ಕ ನಮ್ಮ ಸರ್ಕಾರಿ ಉದ್ಯಮದಲ್ಲಿ ಇವೊತ್ತಿನ ಲಾಭ ಬರತಕ್ಕದ್ದು ಎಷ್ಟು? ಕೇವಲ $2\frac{1}{4}$ ಪರ್ಸೆಂಟು ಮಾತ್ರ ಬರುತ್ತಾ ಇದೆ. 60 ಲಕ್ಷ ಬಂದಿದೆ. 25 ಕೋಟಿ ಬಂಡವಾಳ ಹಾಕಿರತಕ್ಕ ಅನೇಕ ಸ್ಟೇಟ್ ಇನ್‌ಸ್ಟಿಟ್ಯೂಷನ್ಸ್

ಏನು ಇವೆ, ನಾವು ಇಷ್ಟೊತ್ತು ಸಾಲ ಪಡೆಯುತಕ್ಕ ಹಣಕ್ಕೆ ಎಷ್ಟು ಬಡ್ಡಿ ಕೊಡುತ್ತಿದ್ದೇವೆ ಎಂದರೆ 4 ರಿಂದ 5 ಪರ್ಸೆಂಟು. 2½ ಪರ್ಸೆಂಟು ಬಡ್ಡಿ ತೆಗೆದುಕೊಳ್ಳುತ್ತೇವೆ. ಇದು ಎಂತಹ ಕೈಗಾರಿಕೆ? ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್ ನೋಡಿದರೆ ದೇವರೇ ಗತಿ! ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್ಸ್‌ಗೆ ಬಡ್ಜೆಟ್ಟಿನ ಪ್ರಕಾರ ಒಂದು ಕಡೆ 9·7 ಅಂದರೆ ಸುಮಾರು 10 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಅದಕ್ಕೆ ಬಂದಿರತಕ್ಕ ಡಿವಿಡೆಂಡ್ ಕೇವಲ 6·75 ಲಕ್ಷ, ಅಂದರೆ ಸುಮಾರು 7 ಲಕ್ಷ ಡಿವಿಡೆಂಡ್ ಬಂದಿದೆ.

ಅದು ಎಷ್ಟು ಪರಸೆಂಟ್ ಅಗುತ್ತದೆಂದರೆ, 1.6 ಫರ್‌ಸೆಂಟ್ ಆಗುತ್ತದೆ. ಸರ್ಕಾರದವರೇ ನೇರವಾಗಿ ಮಾಡುವ ಉದ್ಯಮಗಳಲ್ಲಿ ಈ ರೀತಿಯಾಗಿ ನಮ್ಮ ಹಣಕ್ಕೆ ಸರಿಯಾಗಿ ಬಡ್ಡಿ ಬರುತ್ತಿಲ್ಲ. ನಾವು ಸಾಲಗಾರರಾಗುತ್ತಿದ್ದೇವೆ. ನಾವು ಒಂದು ವರ್ಷಕ್ಕೆ ಸಾಲದ ಮೇಲೆ ಬಡ್ಡಿಯನ್ನು 17 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ನಮ್ಮಲ್ಲಿ ಹಣವಿಲ್ಲದಾಗ ಓವರ್‌ಡ್ರಾಫ್ಟ್ ತೆಗೆದುಕೊಳ್ಳಬೇಕಾಗುತ್ತದೆ. ಈ ರೀತಿಯಾಗಿ ನಮ್ಮ ದೇಶದಲ್ಲಿ ಹಣವನ್ನು ಖರ್ಚುಮಾಡುವಾಗ ಸರಿಯಾದ ಹಿಡಿತವನ್ನು ಇಟ್ಟುಕೊಳ್ಳದಿರುವುದರಿಂದ ನಮ್ಮ ಹಣಕಾಸಿನ ಸ್ಥಿತಿ ಚಿಂತಾಜನಕವಾಗಿದೆ. ಇದು ನಮಗೆ ಆಶ್ಚರ್ಯವಾಗಿ ಕಾಣುತ್ತಿದೆ. ನಾನು ಯಾವ ವಿಚಾರ ಹೇಳಿದರೂ ಸಹ ಮಾನ್ಯ ಮುಖ್ಯಮಂತ್ರಿಗಳು ನಾವು ಹೇಳುವ ವಿಚಾರದಲ್ಲಿ ಯಾವಾಗಲೂ ಸಂಶಯಪಡುತ್ತಾರೆಂದು ಹೇಳುತ್ತಾರೆ. ದಯವಿಟ್ಟು ಆ ರೀತಿ ತಾವು ಹೇಳಬಾರದು, ನಮ್ಮಲ್ಲೂ ನಂಬಿಕೆ ಇರಬೇಕು.

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿಯವರು).—ನೀವು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಎಸ್. ಶಿವಪ್ಪ.—ನಮ್ಮ ಹಣವನ್ನು, ನಾವು ಕೊಡುವ ತೆರಿಗೆ ಹಣ, ಕಂದಾಯದ ಹಣವನ್ನು ತಾವು ಕಣ್ಣಲ್ಲಿ ಕಣ್ಣಿಟ್ಟು ಖರ್ಚು ಮಾಡಿ ಈ ಸಭೆಗೆ, ಈ ದೇಶಕ್ಕೆ ಒಂದು ಮಾದರಿಯಾಗಿರಬೇಕು. ಆ ಒಂದು ಜವಾಬ್ದಾರಿ ನಿಮ್ಮ ಮೇಲೆ ಇದೆ. ದೇಶದ ಜನರು 20 ವರ್ಷಗಳಿಂದ ತಾಳ್ಮೆಯಿಂದ ಇದ್ದಾರೆ. ಮತ್ತಷ್ಟು ಕಾಲ ನಿಮ್ಮ ಆಡಳಿತವನ್ನು ನೋಡಿಯಾರು ಎಂದು ತಮ್ಮ ಮೂಲಕ ಅವರಿಗೆ ತಿಳಿಸುತ್ತಿದ್ದೇನೆ. ಯಾವ ಒಂದು ನೀತಿಯನ್ನೂ ಇಟ್ಟುಕೊಳ್ಳದೆ, ಅನೇಕ ಅಂಶಗಳನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಭೂಕಂದಾಯ ಪದ್ಧತಿಯಾಗಲಿ, ಪಾನ ನಿರೋಧದ ವಿಚಾರವಾಗಲಿ, ಕೈಗಾರಿಕೆಯನ್ನು ರಾಷ್ಟ್ರೀಯ ಕರಣಗೊಳಿಸುವ ವಿಚಾರವಾಗಲಿ, ಯಾವ ವಿಚಾರದಲ್ಲೂ ಒಂದು ನಿರ್ದಿಷ್ಟವಾದ ನಿಲುವನ್ನು ತಾವು ಹೊಂದಿಲ್ಲ. ಸಮಸ್ಯೆಗಳನ್ನು ದೇಶದ ಮುಂದೆ ಇಟ್ಟುಕೊಂಡು ಹೋಗುತ್ತಿದ್ದಾರೆ, ಈ ರೀತಿಯಾಗಿ ನಮ್ಮ ರಾಜ್ಯದ ಹಣ ದಿವಾಳಿಯಾಗುತ್ತಿದೆ. ನಾನು ಈ ಬಡ್ಜೆಟ್ಟನ್ನು ವಿಷಾದದಿಂದ ನಿರಾಕರಿಸಬೇಕಾಗಿದೆ.

ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿ. ಬೆಂಗಳೂರಿನಲ್ಲಿ ಕುದುರೆ ಜೂಜು ನಡೆಯುತ್ತಿದೆ. ಅದರಿಂದ ಸರ್ಕಾರಕ್ಕೆ ಹಣ ಬರುತ್ತಿದೆ. ಕುದುರೆ ಜೂಜು ನಡೆಯುವ ಸ್ಥಳವನ್ನು ನಗರದ ಹೊರಕ್ಕೆ ಸಾಗಿಸುತ್ತೇವೆಂದು ಅನೇಕ ಸಲ ಹೇಳುತ್ತಿದ್ದರು. ಇತ್ತೀಚೆಗೆ ಅಲ್ಲಿಯ ಸಂಘದವರು ಕುದುರೆಗಳನ್ನು ಸಾಕಲು ಅಲ್ಲಿಯೇ ಲಾಯಗಳನ್ನು ಕಟ್ಟುವುದಕ್ಕೆ ತಾವು ಅವಕಾಶ ಕೊಟ್ಟಿದ್ದೀರಿ. ಈ ರೀತಿಯಾಗಿ ತಾವು ಅವಕಾಶ ಕೊಟ್ಟರೆ, ಆ ಭಾಗದಲ್ಲಿ ವಾಸನೆ ಬರಬಹುದು. ಇದರಿಂದ ಜನರಿಗೆ ತೊಂದರೆಯಾಗಬಹುದು, ಆದ್ದರಿಂದ ಇದಕ್ಕೆ ಏನಾದರೂ ಪರಿಹಾರವನ್ನು ಮಾಡಬೇಕು.

ಶ್ರೀ ಎಸ್. ನಿಜಲಿಂಗಪ್ಪ.—ಕಲ್ಕತ್ತಾ, ಮದ್ರಾಸ್, ಊಟಿ, ಮತ್ತು ಬೊಂಬಾಯಿಗೆ ತಾವು ಹೋಗಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಕುದರೆ ಜೂಜು ನಡೆಯುವ ಸ್ಥಳದಿಂದ 10 ಗಜ ದೂರದಲ್ಲಿಯೇ ದೊಡ್ಡ ದೊಡ್ಡ ಕುದರೆ ಲಾಯಗಳನ್ನು ಕಟ್ಟಿದ್ದಾರೆ. ದಿನಕ್ಕೆ ನಾಲ್ಕು ಸಾರಿ ಆ ಭಾಗವನ್ನು ಶುದ್ಧ ಮಾಡುತ್ತಾರೆ. ಒಂದು ನೊಣವೂ ಸಹ ಅಲ್ಲಿ ಸೇರುವುದಿಲ್ಲ. ಬೆಂಗಳೂರಿನಲ್ಲೂ ಆ ರೀತಿ ಕಟ್ಟುತ್ತೇವೆಂದು ಅವರು ಕೇಳಿದಾಗ ನಾನು ಬಂದು ನೋಡುವವರೆಗೂ

(ಶ್ರೀ ಎಸ್. ನಿಜಲಿಂಗಪ್ಪ)

ಕಟ್ಟಿಸಬಾರದೆಂದು ಹೇಳಿದ್ದೇನೆ. ಅವರು ಸಹ ಕಟ್ಟುವ ಕೆಲಸವನ್ನು ನಿಲ್ಲಿಸಿದ್ದಾರೆ. ಅದನ್ನು ಕಟ್ಟಿದ್ದರೆ ಅಷ್ಟೊಂದು ತೊಂದರೆಯಾಗುವುದಿಲ್ಲ. ಈ ವಿಚಾರವನ್ನು ಯೋಚನೆ ಮಾಡಿ ಏನಾದರೂ ತೀರ್ಮಾನ ಮಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಕುದರೆ ಜೂಜನ್ನು ನಿಲ್ಲಿಸುವುದಕ್ಕಾಗುವುದಿಲ್ಲವೆ ?

(ಉತ್ತರವಿಲ್ಲ).

ಶ್ರೀ ವಾಟಾಳ್ ನಾಗರಾಜ್ (ಚಿಕ್ಕಪೇಟೆ).—ಸ್ವಾಮಿ, ಈ ಜಾಗದಲ್ಲಿ ಮೈಕ್ ಇಲ್ಲ, ಮಧ್ಯೆ ಮಧ್ಯೆ ಮಾತನಾಡುವುದಕ್ಕಾಗುವುದಿಲ್ಲ, ಸರಿಯಾದ ಜಾಗದ ವ್ಯವಸ್ಥೆ ಮಾಡಬೇಕು.

ಅಧ್ಯಕ್ಷರು.—ನಿಮ್ಮ ಪಾರ್ಟಿಯವರೇ ಆ ಸೀಟನ್ನು ನಿಮಗೆ ಕೊಟ್ಟಿರಬಹುದು. ಆ ಬಗ್ಗೆ ವಿಚಾರ ಮಾಡುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಶ್ರೀಮಾನ್ ಶಿವಪ್ಪನವರು ಒಂದು ವಿಷಯವನ್ನು ಹೇಳಿದರು. ಕುದುರೆ ಲಾಯವನ್ನು ಕಟ್ಟುವ ವಿಚಾರದಲ್ಲಿ ಸಭಾನಾಯಕರು ಅದಕ್ಕೆ ಉತ್ತರ ಕೊಟ್ಟರು. ಕುದುರೆ ಲಾಯವನ್ನು ಕಟ್ಟಿದರೆ ಗಲೀಜಾಗದಂತೆ ಇಟ್ಟುಕೊಳ್ಳುತ್ತೇವೆಂದು. ಬೆಂಗಳೂರಿನಲ್ಲಿ ಕುದುರೆ ಜೂಜು ಪ್ರಾರಂಭವಾಗಿ ಬಹಳ ವರ್ಷವಾಗಿರಬೇಕು. ಇದುವರೆಗೆ ಕುದುರೆ ಲಾಯವನ್ನು ಅಲ್ಲಿಯೇ ಕಟ್ಟುವುದಕ್ಕೆ ಅವಕಾಶವನ್ನು ಕೊಟ್ಟಿರಲಿಲ್ಲ. ಆ ವಿಚಾರದಲ್ಲಿ ಇತ್ತೀಚೆಗೆ ಬದಲಾವಣೆಯಾಗಿರಬಹುದೆಂದು ಕಾಣುತ್ತದೆ. ಆ ಜಾಗದಲ್ಲಿಯೇ ಕುದುರೆ ಲಾಯವನ್ನು ಕಟ್ಟಿದರೆ ಒಳ್ಳೆಯದೆಂದು ತಮಗೆ ಅವರು ತಿಳಿಸಿರಬಹುದು. ಈಗಿರುವ ಕುದುರೆ ಜೂಜಿನ ಸ್ಥಳವನ್ನೇ ಬೇರೆ ಕಡೆಗೆ ವರ್ಗಾವಣೆ ಮಾಡಬೇಕೆಂದು ಹೇಳುತ್ತಿದ್ದಿರಿ, ಆ ವಿಚಾರದಲ್ಲಿ ಸ್ವಲ್ಪ ತಿಳುವಳಿಕೆ ಕೊಟ್ಟರೆ ಮುಂದೆ ನಮಗೆ ಮಾತನಾಡುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಎಸ್. ನಿಜಲಿಂಗಪ್ಪ.—ಬೇರೆ ಕಡೆಗೆ ಬದಲಾವಣೆ ಮಾಡಬೇಕೆಂದು ತಿರ್ಮಾನ ಮಾಡಿದ್ದೇವೆ. 2–3 ಜಾಗಗಳನ್ನು ಹುಡುಕುತ್ತಿದ್ದೇವೆ. ತಜ್ಞರು ಯಾವುದಾದರು ಒಂದು ಜಾಗವನ್ನು ಒಪ್ಪುವವರೆಗೆ ನಾವು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ನಾವು ನೋಡಿರುವ ಒಂದು ಜಾಗದಲ್ಲಿ ಫ್ಲೈಯಿಂಗ್ ಕ್ಲಬ್ ಇದೆ. ಅದನ್ನು ಯಾವ ಜಾಗಕ್ಕೆ ಕಳಿಸಬೇಕೆಂದು ತೀರ್ಮಾನವಾಗಬೇಕಾಗಿದೆ. ಇಷ್ಟರಲ್ಲಿಯೇ ತೀರ್ಮಾನ ಮಾಡಬೇಕಾಗಿದೆ. ಊರಿನ ಮಧ್ಯ ಭಾಗದಲ್ಲಿ ಇರಬಾರದೆಂದು ನಮಗೆ ಗೊತ್ತಿದೆ. 10–15 ವರ್ಷದಿಂದಲೂ ಕುದುರೆ ಲಾಯವನ್ನು ಕಟ್ಟಬೇಕೆಂದು ಇದ್ದಾರೆ. ಈಗ ಕಟ್ಟಿದರೆ ಆಧುನಿಕ ರೀತಿಯಲ್ಲಿ ಕಟ್ಟುತ್ತಾರೆ. ಅಲ್ಲಿ ಕುದುರೆ ಲಾಯವನ್ನು ಕಟ್ಟಿದರೆ ತೊಂದರೆಯಾಗುತ್ತದೆಂದು ನನಗೆ ಯಾರೋ ಬಂದು ಹೇಳಿದರು. ಅದಕ್ಕೆ ನಾನು ಸಂಬಂಧಪಟ್ಟವರಿಗೆ ಕಟ್ಟುವುದಕ್ಕೆ ಮೊದಲು ಮದ್ರಾಸ್, ಕಲ್ಕತ್ತಾಕ್ಕೆ ಹೋಗಿ ಅಲ್ಲಿ ಯಾವ ರೀತಿ ಕಟ್ಟಿದ್ದಾರೆ ಎಂಬುದನ್ನು ನೋಡಿಕೊಂಡು ಬಂದು ನನಗೆ ತಿಳಿಸಬೇಕೆಂದು ಹೇಳಿದ್ದೇನೆ. ಅವರು ಸಹ ಹೋಗಿರಬಹುದೆಂದು ಕಾಣುತ್ತದೆ.

Sri Azeez Sait (Narasimharaja).—I just want to bring a representation to the Speaker in regard to seating arrangement. Since the Opposition consists of many parties, the leader of the party would be somewhere and the whips in another place and the Members of that party cannot communicate with the leaders and obtain instructions. The arrangement should be such that it should be possible for party members to contact their leader immediately. As it is done at present, I feel there is something very discriminating.

Mr. SPEAKER.—Sri Azeez Sait will kindly remember what transpired on the prior occasion. I placed all the 90 seats entirly at the disposal of the opposition, and there distributed among themselves. If the member feels anything wrong, he may kindly put it in writing and send it on to me but let him not take it up during the course of the debate.

† ಶ್ರೀಮತಿ ಕೆ. ಲೀಲಾವತಿ ರೈ (ಬಂಟವಾಳ್).—ಸನ್ಮಾನ್ಯ ಸಭಾಧ್ಯಕ್ಷರೇ, ಬಡ್ಜೆಟ್ ವಿವರ ಎಲ್ಲವನ್ನೂ ನಾವು ತಿಳಿದುಕೊಳ್ಳದೇ ಇದ್ದರೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಕೆಲವು ಅಂಶಗಳನ್ನು ತಮ್ಮ ಮುಂದೆ ಇಡುವುದಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಮೊದಲನೆಯದಾಗಿ ಹೇಳಬೇಕಾದುದು ಅಂದರೆ, ನಮ್ಮ ಊರಿನಲ್ಲಿ ಈಗ ತೆಗೆದುಕೊಳ್ಳುವ ಲೆವಿ ಪರಿಸ್ಥಿತಿ ವಿಚಾರ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೆವಿ ವಸೂಲಾಗುತ್ತಾ ಇದೆ. ಇದು ಸಂತೋಷದ ವಿಚಾರ. ಲೆವಿ ವಿಚಾರದಲ್ಲಿ ಒಂದು ಮನೆಯಲ್ಲಿ ಇರತಕ್ಕಂಥ ಜನರ ಲೆಖ್ಖಾಚಾರ ತೆಗೆದುಕೊಂಡು ಲೆವಿ ತೆಗೆದುಕೊಳ್ಳುವುದನ್ನು ನಿಗದಿ ಮಾಡುವ ವ್ಯವಸ್ಥೆ ಇರಬೇಕೆಂದು ಸಭೆಯ ಮುಂದೆ ಈ ಸೂಚನೆ ಇಡುತ್ತೇನೆ. ಲೆವಿ ವಸೂಲಿ ಬಗ್ಗೆ ಒಂದು ಫಾರ್ಮ್ ಇದೆ. ಈ ಫಾರ್ಮ್ ತುಂಬಿಸಿ ಕೊಡ ತಕ್ಕಂಥಾದ್ದು ರೈತರಿಗೆ ಕಷ್ಟವಾಗಿದೆ. ಆದುದರಿಂದ ಲೆವಿ ನೋಟೀಸ್ ಕೊಡುವ ಮೊದಲೇ ಒಂದು ಮನೆಯಲ್ಲಿ ಇರತಕ್ಕ ಜನರ ಸಂಖ್ಯೆ ನೋಡಿಕೊಂಡು ಲೇವಿ ನೋಟೀಸ್ ಕೊಟ್ಟರೆ ಅದು ಸುಲಭವಾಗುತ್ತದೆ ಎಂದು ಹೇಳಲು ನಾನು ಅಪೇಕ್ಷೆ ಪಡುತ್ತೇನೆ. ಫಾರ್ಮ್ ತುಂಬಿ ಕೊಡತಕ್ಕದ್ದು ರೈತರಿಗೆ ಬಹಳ ತೊಂದರೆಯುಂಟುಮಾಡಿದೆ. ಯಾಕೆಂದರೆ, ಫಾರ್ಮ್ ತುಂಬುವುದಕ್ಕೆ ರೈತರು ಶಾನುಭೋಗರ ಹತ್ತಿರ ಹೋಗಬೇಕಾದ ಕಷ್ಟ ಪರಿಸ್ಥಿತಿ ಉಂಟಾಗುತ್ತದೆ. ಅವರು ರೈತರಿಗೆ ತೊಂದರೆ ಕೊಡುತ್ತಾರೆ. ಇದರಲ್ಲಿ ಹೆಚ್ಚಾಗಿ ಕರಪ್ಷನ್ ಕೂಡ ಇದೆ. ಈ ವಿಚಾರದ ಕಡೆಗೆ ಸಭೆಯ ಗಮನ ಸೆಳೆಯುತ್ತೇನೆ. ಒಟ್ಟಿನಲ್ಲಿ ಲೆವಿ ತೆಗೆದುಕೊಳ್ಳುವಾಗ್ಗೆ ಮನೆಯಲ್ಲಿ ಇರತಕ್ಕ ಜನರು ಎಷ್ಟು ಎಂಬುದನ್ನು ಲೆಕ್ಕ ಮಾಡಿ ಅದರ ಮೂಲಕ ಲೆವಿ ವಸೂಲ್ಮಾಡಬೇಕು ಎಂದು ಹೇಳುತ್ತೇನೆ.

ಈಗ ಲೆವಿ ಮೂಲಕ ವಸೂಲು ಮಾಡುವ ಧಾನ್ಯಕ್ಕೆ ಕೊಡತಕ್ಕ ಬೆಲೆ ಮಾರ್ಕೆಟ್ಟಿನಲ್ಲಿರುವ ಬೆಲೆಗಿಂತ ಬಹಳ ಕಡಿಮೆಯಾಗಿದೆ. ಲೆವಿ ಬೆಲೆ ನಿಗದಿ ಮಾಡಿರುವುದನ್ನು ಸರಕಾರ ಸ್ವಲ ತಿದ್ದುಪಡಿ ಮಾಡಿ ರೈತನಿಗೆ ಕೊಡುವ ಬೆಲೆ ಹೆಚ್ಚಿಗೆ ಮಾಡಬೇಕು ಎಂದು ರೈತರ ಪರವಾಗಿ ನಾನು ಸರಕಾರಕ್ಕೆ ಸೂಚಿಸುತ್ತೇನೆ.

ಇನ್ನು ಮೂರನೆಯದಾಗಿ ಹೇಳಬೇಕಾದುದು ಏನೆಂದರೆ, ಭತ್ತದ ರೂಪದಲ್ಲಿ ಲೆವಿ ತೆಗೆದು ಕೊಳ್ಳಲಾಗುತ್ತಿದೆ. ಭತ್ತದ ಮೂಲಕ ಲೆವಿ ತೆಗೆದುಕೊಳ್ಳುವುದು ರೈತರಿಗೆ ಕಷ್ಟವಾಗಿದೆ. ಕಳೆದ ಎರಡು ಮೂರು ವರ್ಷಗಳಿಂದ ಈ ವಿಚಾರದಲ್ಲಿ ನಾವು ಕೇಳುತ್ತಿದ್ದೇವೆ. ಭತ್ತದ ಬದಲು ಅಕ್ಕಿಯ ರೂಪದಲ್ಲಿ ಲೆವಿ ತೆಗೆದುಕೊಳ್ಳಬೇಕು ಎಂದು. ಭತ್ತ ತೆಗೆದುಕೊಳ್ಳುವುದರಿಂದ ಕೆಲಸ ಮಾಡತಕ್ಕ ಹೆಣ್ಣುಮಕ್ಕಳ ಆರ್ಥಿಕ ಪರಿಸ್ಥಿಗೆ ಅದು ಅಡ್ಡ ಬರುತ್ತಿದೆ. ಇದಲ್ಲದೆ ದನಕರುಗಳಿಗೆ ಬೇಕಾಗುವ ತೌಡು ನುಚ್ಚು ಸಹ ಅವರಿಗೆ ಸಿಕ್ಕುವುದಿಲ್ಲ. ಆದುದರಿಂದ ಸರಕಾರ ಇದನ್ನು ಯೋಚನೆ ಮಾಡಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಕ್ಕಿಯ ಮೂಲಕ ಲೆವಿ ತೆಗೆದುಕೊಳ್ಳುವ ಪದ್ಧತಿ ಜಾರಿ ಮಾಡಬೇಕೆಂದು ಈ ಮೂಲಕ ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ನನ್ನ ಕಾನ್ಸ್ಟಿಟ್ಯುಯೆನ್ಸಿ ಪರವಾಗಿ ಒಂದು ಮಾತು ಹೇಳಬೇಕಾಗಿದೆ. ಗಡಿ ಪ್ರದೇಶದಲ್ಲಿ ಚೆಕ್ ಪೋಸ್ಟ್ ಹಾಕಿದ್ದರೂ ಕೂಡ ಅದರಿಂದ ಪ್ರಯೋಜನವಾಗುತ್ತಿಲ್ಲ. ಒಂದು ಮೈಲಿ ಗಡಿ ಪ್ರದೇಶದಿಂದ ಒಳಗೆ ಚೆಕ್ ಪೋಸ್ಟ್ ಹಾಕಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ಮೊದಲೇ ತಿಳಿಸಿದ್ದೇವೆ. ಕೆಲವು ಕಡೆ ಈ ರೀತಿ ಮಾಡಿ ಹಳ್ಳಿಗರಿಗೆ ಉಪಕಾರವಾಗುವಂತೆ ಮಾಡಿದ್ದಾರೆ. ಆದುದರಿಂದ ಎಲ್ಲ ಕಡೆ ಚೆಕ್‌ಪೋಸ್ಟ್ ಗಡಿ ಪ್ರದೇಶದಿಂದ ಒಂದು ಮೈಲಿ ಈಚೆಗೆ ಹಾಕಬೇಕೆಂದು ಈ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಮತ್ತೊಮ್ಮೆ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ನಿಜಲಿಂಗಪ್ಪ.—ಆ ರೀತಿ ಮಾಡಬೇಕೆಂದು ಆರ್ಡರ್ಸ್ ಮಾಡಿದೆ.

ಶ್ರೀಮತಿ ಕೆ. ಲೀಲಾವತಿ ರೈ.—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಚೆಕ್ ಪೋಸ್ಟ್ ಒಂದು ಪೆಟ್ರಲಿ ದೊರಕ್ಕೆ ಗಡಿ ಪ್ರದೇಶದ ಈಚೆಗೆ ಮಾಡಿದರೆ ರೈತರಿಗೆ ಸುಲಭವಾದೀತು. ಈಗ ಬಹಳ ತೊಂದರೆಪಡುತ್ತಿದ್ದಾರೆ.

ಎರಡನೆಯದಾಗಿ ಹೇಳಬೇಕಾದ ವಿಚಾರ ಅಂಥದೆ, ಪಂಚಾಯುತಿಗಳು. ಪಂಚಾಯುತಿಗಳಿಗೆ ಸೆಕ್ರೆಟರಿ ಎಂದು ಒಬ್ಬರು ಇದ್ದಾರೆ. ವಿಲೇಜ್ ಆಫೀಸರ್ ಆಗಿರುವವರನ್ನು ಪಂಚಾಯುತಿ ಸೆಕ್ರಟರಿ ಎಂದು ನೇಮಕ ಮಾಡತಕ್ಕ ಪದ್ಧತಿ ಇದೆ. ಇದರಲ್ಲಿ ತೊಂದರೆಯಾಗಿರುವ ಒಂದು ವಿಚಾರ ಹೇಳಲು ಅಪೇಕ್ಷಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಶ್ಯಾನಭೋಗರನ್ನು ಸೆಕ್ರೆಟರಿ ಎಂದು ನೇಮಕ ಮಾಡುವುದರಿಂದ ಅವರಿಗೆ ಊರಿನ ಬಗ್ಗೆ ಎಲ್ಲ ವಿಚಾರ ತಿಳಿದಿರುತ್ತದೆ. ಇಂಥವರು ಮೂರು ನಾಲ್ಕು ವರ್ಷಗಳಲ್ಲಿ ಪಾಲಿಟಿಕ್ಸ್ ಅಂದರೆ, ರಾಜಕೀಯ ಮಾಡುವುದಕ್ಕೆ ಪ್ರಾರಂಭಿಸುತ್ತಾರೆ. ಇದನ್ನು ಅನುಭವದಿಂದ ಹೇಳುತ್ತಿದ್ದೇನೆ. ಆದುದರಿಂದ ಪಂಚಾಯುತಿಗಳಿಗೆ trained ಎಂದರೆ ತರಪೇತಾದ ಸೆಕ್ರೆಟರಿಗಳನ್ನು ನೇಮಕ ಮಾಡಬೇಕು ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಬರತಕ್ಕಂಥ ಅಧಿಕಾರಿಗಳಿಗೆ ತುಳು ಭಾಷೆ ಬಾರದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ಅಧಿಕಾರಿಗಳಿಗೆ ತುಳು ಭಾಷೆ ಗೊತ್ತಿದ್ದರೆ ಮಾತ್ರ ಹಳ್ಳಿಗರಿಂದ ಏನಾದರೂ ಕೆಲಸ ಮಾಡಿಸಿಕೊಳ್ಳಲು ಅವರಿಗೆ ಸಾಧ್ಯವಾಗುತ್ತದೆ. ಆದುದರಿಂದ ತುಳು ಭಾಷೆ ಗೊತ್ತಿರತಕ್ಕಂಥವರನ್ನು ಅಧಿಕಾರಿಗಳನ್ನಾಗಿ ನೇಮಕ ಮಾಡಬೇಕು. ಅಲ್ಲದೇ ದಕ್ಷಿಣ ಕನ್ನಡ ಜಿಲ್ಲೆಯವರನ್ನೇ ನೇಮಕ ಮಾಡಬೇಕು. ಹಾಗು ಇದಕ್ಕೆ ಸೂಕ್ತ ಕಾನೂನು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಈ ಮೂಲಕ ಕೇಳಿಕೊಳ್ಳುತ್ತೇನೆ.

ಇನ್ನು ಇರಿಗೇಷನ್ ಬಗ್ಗೆ ಸರಕಾರ ಬಹಳ ಹಣ ಖರ್ಚು ಮಾಡುತ್ತಿದ್ದರೂ ಕೂಡ ನಮ್ಮ ದಕ್ಷಿಣಕನ್ನಡ ಜಿಲ್ಲೆಯ ವಿಶೇಷ ಪರಿಸ್ಥಿತಿಯ ಮೂಲಕ ಹೆಚ್ಚಾಗಿ ಅದರ ಲಾಭ ದೊರೆಯುತ್ತಿಲ್ಲ. ಹೈ ಲಿಫ್ಟ್ ಇರಿಗೇಶನ್ ಮಾಡದೇ ನಮಗೆ ನೀರಾವರಿ ಸೌಲಭ್ಯ ಸಿಕ್ಕುವುದಿಲ್ಲ. ನಮ್ಮ ಬಂಟವಾಳ್ ಕ್ಷೇತ್ರದಲ್ಲಿ ಐದಾರು ಇರಿಗೇಶನ್ ಯೋಜನೆಗಳಿವೆ. ಎರಡು ಎಸ್ಟಿಮೇಟು ಆಗಿವೆ. ಆದರೆ ಹೈ ಲಿಫ್ಟ್ ಇರಿಗೇಶನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹೆಚ್ಚೆಚ್ಚು ಹೈ ಲಿಫ್ಟ್ ಇರಿಗೇಶನ್ ಸ್ಕೀಮ್ ಮಾಡಿದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಪರಿಸ್ಥಿತಿ ಉತ್ತಮವಾದೀತು ಎಂದು ಹೇಳುತ್ತೇನೆ, ಅಲ್ಲಲ್ಲಿ 15–20 ಹಾರ್ಸ್ ಪವರ್ ಪಂಪಸೆಟ್ಸ್ ಇಟ್ಟು ಕೋ-ಅಪರೇಟಿವ್ ಬೇಸಿಸ್ ಮೇಲೆಯಾಗಲಿ ವೈಯಕ್ತಿಕವಾಗಿ ಆಗಲಿ ರೈತರಿಗೆ ಉಪಯೋಗವಾಗುವ ಹಾಗೆ ಮಾಡಿದರೆ ನೀರಾವರಿಯಿಂದ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನ್ವದವಾಗುತ್ತದೆ ಎಂದು ಸೂಚಿಸುತ್ತೇನೆ, ಅಗತ್ಯವಾಗಿ ಇದನ್ನು ಪರಿಶೀಲಿಸಬೇಕು ಎಂದು ಸರಕಾರಕ್ಕೆ ಕೇಳಿಕೊಳ್ಳುತ್ತೇನೆ.

ಇನ್ನು ಡೆವಲಪ್ಮೆಂಟ್, ಅಂದರೆ, ಅಭಿವೃದ್ಧಿ ಕಾರ್ಯದಲ್ಲಿ ರೂರಲ್ ರೋಡ್ಸ್ ವಿಚಾರ ಹೇಳಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ರೂರಲ್ ರೋಡ್ಸ್ ತುಂಬಾ ಆಗಿವೆ. ಇವು ಮಣ್ಣಿನ ಮಾರ್ಗಗಳಾಗಿರುವುದರಿಂದ ವಾಹನಗಳಿಗೆ ಅಷ್ಟು ಅನುಕೂಲವಾಗಿಲ್ಲ. ಪದೇ ಪದೇ ರಿಪೇರಿ ಮಾಡಿಸಬೇಕಾಗುತ್ತದೆ. ರಿಪೇರಿ ಕೆಲಸ ಮಾಡಲು ಪಿ. ಡಬ್ಲ್ಯು. ಡಿ. ಅವರು ತಾಲ್ಲೂಕು ಬೋರ್ಡನ್ನು ಕೇಳಿಕೊಳ್ಳುತ್ತಾರೆ. ತಾಲ್ಲೂಕ ಬೋರ್ಡಿನವರು ಅಷ್ಟು ಹಣ ಖರ್ಚು ಮಾಡುವುದು ಸಾಧ್ಯವಿಲ್ಲ. ಅಲ್ಲಲ್ಲಿ ಬ್ರಿಡ್ಜಸ್, ಕಲ್ವರ್ಟ್ಸ್ ಈ ಮಾರ್ಗಗಳಲ್ಲಿ ಮಾಡಿಸಬೇಕಾಗುತ್ತದೆ. ಈ ಮಾರ್ಗಗಳಲ್ಲಿ ಟಾರ್ ಹಾಕಿ ರಿಪೇರಿ ಮಾಡುವ ಕೆಲಸವನ್ನು ಪಿ. ಡಬ್ಲ್ಯು. ಡಿ. ಅವರು ತೆಗೆದುಕೊಳ್ಳಬೇಕು. ಇಲ್ಲದಿದ್ದರೆ ರೈತರು ಆಹಾರ ಧಾನ್ಯ ಸಾಗಿಸುವುದಕ್ಕೆ ಕಷ್ಟವಾಗುತ್ತದೆ.

ನಮ್ಮಲ್ಲಿ ಮಳೆ ಜಾಸ್ತಿಯಾದುದರಿಂದ ರಸ್ತೆಗಳನ್ನು ಎಷ್ಟೇ ರಿಪೇರಿ ಮಾಡಿದರೂ ಕೂಡ ಎರಡು ತಿಂಗಳಿಗೆಲ್ಲಾ ಕೊಚ್ಚಿ ಹೋಗುತ್ತದೆ. ಇದರಿಂದ ಸಂಚಾರಕ್ಕೆ ಅನಾನುಕೂಲವಾಗುವುದು.

2-00 P.M.

ಕೊನೆಯದಾಗಿ ರೂರಲ್ ವಾಟರ್ ಸಪ್ಲೈ ಸ್ಕೀಂ ನಮ್ಮ ದಕ್ಷಿಣ ಕನಡ ಜಿಲ್ಲೆಯಲ್ಲಿ ಹೆಚ್ಚಾಗಿ ಆಗಿಲ್ಲ. ಎರಡು ಮೂರು ಕಡೆ ಜಾರಿಗೆ ಬಂದಿರಬಹುದು. ಬಂಟವಾಳದಲ್ಲಿ ಅದನ್ನು ಜಾರಿಗೆ ತರಬೇಕೆಂದು ಎಷ್ಟೋ ವರ್ಷಗಳಿಂದ ಹೇಳಲಾಗುತ್ತಿದೆ. ನಮ್ಮ ಕಡೆ ನೀರಿನ ಸಮಸ್ಯೆ ಬಹಳವಾಗಿದೆ. ಅದುದರಿಂದ ಹಳ್ಳಿಗಳಿಗೆ ಈ ಯೋಜನೆಯನ್ನು ಅನ್ವಯಿಸಿ ನೀರಿನ ಅನುಕೂಲಮಾಡಲೇಬೇಕು. ಇದಕ್ಕೆ ಕೇಂದ್ರ ಸರ್ಕಾರ, ರಾಜ್ಯ ಸರಕಾರ ಮತ್ತು ಪಂಚಾಯಿತಿಗಳು ತಮ್ಮ ಭಾಗದ ಸಹಾಯವನ್ನೊದಗಿಸಬೇಕು. ಅದರೆ ನಮ್ಮಲ್ಲಿ ಪಂಚಾಯಿತಿಗಳಿಗೆ ತಮ್ಮ ಭಾಗದ ಹಣ ಒದಗಿಸಲು ಶಕ್ತಿಯಿಲ್ಲ. ಅದುದರಿಂದ ಈ ಸಂಬಂಧವಾಗಿರುವ ನಿರ್ಬಂಧವನ್ನು ಸ್ವಲ್ಪ ಸಡಿಲಮಾಡಿ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರಗಳು ಹಣ ಒದಗಿಸಿ ಈ ನೀರಿನ ಯೋಜನೆಯನ್ನು ಜಾರಿಗೆ ತಂದು ಜನರಿಗೆ ಉಪಕಾರಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಊರಿನಲ್ಲಿ ಆಹಾರದ ಬೆಳವಣಿಗೆ ಜಾಸ್ತಿಯಾಗಿ ಆಗುತ್ತಿಲ್ಲ. ಕೌನ್ಸಿಲ್ಲಿನಲ್ಲಿ ಇದರ ವಿಚಾರವನ್ನು 2-3 ವರ್ಷಗಳಿಂದ ಹೇಳುತ್ತಿದ್ದೇವೆ. ನಮ್ಮ ಊರಿನಲ್ಲಿ ದಣಿ ಮತ್ತು ಒಕ್ಕಲು ಸಮಸ್ಯೆ ಇದೆ. ಹೆಚ್ಚಿನ ಮಂದಿ ಒಕ್ಕಲುತನ ಮಾಡುವ ರೈತರಿದ್ದಾರೆ. ಎಷ್ಟೋ ಸಾರಿ ಹಿಂದೆ ಸದಸ್ಯರಾಗಿದ್ದವರು ಶಾಸನ ಸಭೆಗಳಲ್ಲಿ ವಿಷಯವನ್ನು ತಿಳಿಸಿದ್ದಾರೆ. ಪಂಪ್‌ಸೆಟ್ಟುಗಳನ್ನು ಒದಗಿಸುವಾಗ ಒಕ್ಕಲುಗಳಿಗೆ ಕೊಡುವುದಿಲ್ಲ. ಏಕೆಂದರೆ ಅವರಿಗೆ ಕೊಡಬೇಕಾದರೆ ಒಂದು ಅಥವಾ ಎರಡು ಸೆಕ್ಯೂರಿಟಿ ಅವರು ಕೊಡಬೇಕು ಎಂದು ಡೆವಲಪ್‌ಮೆಂಟ್ ಕೌನ್ಸಿಲ್ಲಿನಲ್ಲಿ ನಿರ್ಣಯ ಮಾಡಿದೆ. ಆದುದರಿಂದ ಈ ವಿಚಾರವನ್ನು ಇಂದು ಒತ್ತಿ ಹೇಳುತ್ತಿದ್ದೇನೆ. ಒಕ್ಕಲುತನದವರಿಗೆ ಸೆಕ್ಯೂರಿಟಿ ಕೊಡಲು ಸಾಧ್ಯವಿಲ್ಲ. ಆಸ್ತಿಯಿರುವುದಿಲ್ಲ. ಇದರಿಂದ ಅವರಿಗೆ ಪಂಪು ಸಿಕ್ಕುವುದಿಲ್ಲ. ಆದುದರಿಂದ ಪರ್ಸನಲ್ ಸೆಕ್ಯೂರಿಟಿಮೇಲೆ ಒಕ್ಕಲಿನವರಿಗೆ ಪಂಪು ದೊರೆಯುವಂತೆ ಏರ್ಪಾಡು ಮಾಡಬೇಕು ಎಂದು ಸರಕಾರವನ್ನು ಈ ಸಂದರ್ಭದಲ್ಲಿ ಕೇಳಿಕೊಂಡು ನನ್ನ ಮಾತನ್ನು ಇಲ್ಲಿಗೆ ಮುಕ್ತಾಯಮಾಡುತ್ತೇನೆ.

†ಶ್ರೀ ಪಿ. ವೆಂಕಟಗಿರಿಯಪ್ಪ (ಕೋಲಾರ).—ಸಭಾಧ್ಯಕ್ಷರೆ, ಈ ಸಭೆಯ ಮುಂದೆ ಹಣಕಾಸಿನ ಸಚಿವರು ಆಯವ್ಯಯದ ಪಟ್ಟಿಯನ್ನು ಮಂಡಿಸಿ ಮೂರನೆಯ ಒಂದು ಭಾಗದ ಹಣಕ್ಕೆ Vote on Account ಮೂಲಕ ಒಪ್ಪಿಗೆ ಕೇಳುತ್ತಿದ್ದಾರೆ. ನಾನು ಈ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ಮಾತುಗಳನ್ನು ಈ ಸಭೆಗೆ ತಿಳಿಸಲು ಬಯಸುತ್ತೇನೆ.

ಆಯವ್ಯಯದ ನೀತಿಯನ್ನು ನಾನು ಕಳೆದ 5 ವರ್ಷಗಳಿಂದ ನೋಡುತ್ತಿದ್ದೇನೆ. ಇದರಲ್ಲಿ ಏನೊಂದು ಮೂಲಭೂತವಾದ ಬದಲಾವಣೆಯೂ ಆಗಿಲ್ಲ. ಇದು ಕೆಲವು ವರ್ಗದ ಜನರ ಹಿತರಕ್ಷಣೆ ಮಾಡುವ ಆಯವ್ಯಯವಾಗಭಾರದು. ಎಲ್ಲಾ ಜನರ ಹಿತರಕ್ಷಣೆಯನ್ನು ಮಾಡುವಂಥಾದ್ದಾಗಬೇಕು ಎಂದು ನಾವು ಹೇಳುತ್ತಿದ್ದೆವು. ಅದರೆ ಸರಕಾರ ಯಾವರೀತಿಯಲ್ಲೂ ಅದನ್ನು ಗಮನಿಸಿಲ್ಲ. ಮೂಲಭೂತವಾದ ಬದಲಾವಣೆಯೇನೂ ಇಲ್ಲದೆ ಹಿಂದಿನ ಧಾಟಿಯಲ್ಲೇ ಈ ಆಯವ್ಯಯಪಟ್ಟಿ ಇದೆ ಎಂದು ಹೇಳದೇ ವಿಧಿಯಿಲ್ಲ. ಇಂದು ಕಾಂಗ್ರೆಸ್ ಪಕ್ಷ ಸಮಾಜವಾದೀ ಸಮಾಜ ರಚನೆಮಾಡಲು ಶ್ರಮಿಸುತ್ತಿರುವುದಾಗಿ ಹೇಳುತ್ತಿದೆ. ಆ ಧೋರಣೆಯನ್ನನುಸರಿಸುತ್ತಿರುವುದಾಗಿಯೂ ಅದನ್ನು ಕಾರ್ಯರೂಪಕ್ಕೆ ತರುತ್ತಿರುವುದಾಗಿಯೂ ಹೇಳುತ್ತಿದೆ. ಆದರೆ ಈ ಆಯವ್ಯಯ ಪಟ್ಟಿಯನ್ನು ನೋಡಿದರೆ ಅದಕ್ಕೆ ವಿರುದ್ಧವಾಗಿದೆಯೆಂದೆನಿಸುತ್ತದೆ. ಪ್ರಜಾಪ್ರಭುತ್ವದಲ್ಲಿ ಪ್ರತಿಯೊಬ್ಬ ವ್ಯಕ್ತಿಯ ಆರ್ಥಿಕೋನ್ನತಿಯಾಗಬೇಕು, ಜೀವನಕ್ಕೆ ಭದ್ರತೆಯಿರಬೇಕು ಎಂದೇನು ನಿರೀಕ್ಷೆಯಿದೆ ಅದಕ್ಕೆ ತದ್ವಿರುದ್ಧವಾಗಿ ಆಯವ್ಯಯ ಪಟ್ಟಿ ರಚಿತವಾಗಿದೆ. ಇಂದು ಕೊಳಚೆ ಪ್ರದೇಶವನ್ನು ನಿರ್ಮೂಲಮಾಡಲು ಸರಿಯಾದ ಕಾರ್ಯಕ್ರಮ ಕೈಗೊಂಡಿಲ್ಲ. ಇದಕ್ಕೆ ಎಷ್ಟು ವರ್ಷ ಬೇಕು ? ನಮ್ಮ ದೇಶದಲ್ಲಿ ಸೇಕಡ 30 ಜನರು ಹಳ್ಳಿಗಳಲ್ಲಿ ವಾಸಮಾಡುತ್ತಾರೆ ಅವರಿಗೆ ವಾಸಕ್ಕೆ ಜೋಪಡಿಯೇ ಗತಿ. ಸರಿಯಾದ ನೆಲೆಯಿಲ್ಲ, ಕಾರ್ಮಿಕರಿಗೆ ವಸತಿಗಳನ್ನು

(ಶ್ರೀ ಪಿ. ವೆಂಕಟಗಿರಿಯಪ್ಪ)

ಕಲ್ಪಿಸಲು ಈ ಆಯವ್ಯಯಪಟ್ಟಿಯಲ್ಲಿ ಅವಕಾಶವೆಲ್ಲಿ ಮಾಡಿದೆ ಎಂದು ಕೇಳಬೇಕಾಗಿದೆ. ಈ ದಿನ ಹೌಸಿಂಗ್ ಬೋರ್ಡ್ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದಾರೆ ಆದರೆ ಹೆಚ್ಚು ಹಣ 500 ರೂಪಾಯಿಗಳಿಗೆ ಕಡಮೆಯಿಲ್ಲದೆ ಆದಾಯವಿರುವ ಮಿಡ್ಲ್ ಇನ್‌ಕಂ ಗ್ರೂಪಿನವರಿಗೆ ಖರ್ಚಾಗುತ್ತಿದೆ. ಕಡಿಮೆ ವರಮಾನವಿರುವವರಿಗೆ ಹೆಚ್ಚು ಮನೆಗಳನ್ನು ಕಟ್ಟಿ ಕೊಡಲು ಹೆಚ್ಚು ಖರ್ಚುಮಾಡುತ್ತಿಲ್ಲ. ನೇಕಡ 25 ಜನರು ಮನೆಗಳಿಲ್ಲದಿರುವಾಗ 500 ರೂಪಾಯಿ ಸಂಬಳ ಬರುವವರಿಗೆ ದೊಡ್ಡ ದೊಡ್ಡ ಮನೆಗಳನ್ನು ಕಟ್ಟಿಸಿಕೊಡುವ ನೀತಿಯನ್ನೇಕೆ ಅನುಸರಿಸ ಬೇಕು ? ಒಟ್ಟಿನಲ್ಲಿ ಹೇಳುವುದಾದರೆ ಈ ಆಯವ್ಯಯ ಪಟ್ಟಿಯಲ್ಲಿ ದಟ್ಟದರಿದ್ರರಿಗೆ ನಿರ್ಗತಿಕರಿಗೆ ಬಡವರಿಗೆ ಅನುಕೂಲವಾಗುವಂತೆ ಯಾವ ಅವಕಾಶವನ್ನು ಸರಿಯಾಗಿ ಮಾಡಿಲ್ಲ.

Sri D. DEVARAJ URS.—(Minister for Animal Husbandry, Fisheries Information and Publicity.)—Is it the intention of the Hon'ble Member that we should not construct middle income group houses ?

Sri P. VENKATAGIRIYAPPA.—Yes; that is my opinion. ಈ ಆಯವ್ಯಯ ಪಟ್ಟಿಯಲ್ಲಿ ಎರಡು ಮುಖ್ಯವಾದ ವಿಷಯಗಳಿವೆ, ಒಂದು ಭೂಕಂದಾಯವನ್ನು ರದ್ದುಮಾಡು ವುದು ಇನ್ನೊಂದು ಪಾನನಿರೋಧವನ್ನು ತೆಗೆದುಹಾಕುವುದು. ಹತ್ತಾರು ವರ್ಷಗಳಿಂದ ವಿರೋಧ ಪಕ್ಷ ಇದನ್ನು ಒತ್ತಾಯಮಾಡುತ್ತಿತ್ತು. ಈಗ ಸರಕಾರ ಇದಕ್ಕೊಪ್ಪಿದೆ, ಸಂತೋಷ. ವಿರೋಧ ಪಕ್ಷದ ಕೂಗನ್ನು ಮತ್ತು ದೇಶದ ಪ್ರಜೆಗಳ ಒತ್ತಾಯವನ್ನು ಗಮನಿಸಿ ಸರಕಾರ ಅದರಂತೆ ಮಾಡಲು ಮುಂದೆ ಬಂದಿರುವುದು ಬಹಳ ಸಂತೋಷದ ಸಂಗತಿ ಎಂದು ಹೇಳದೆ ವಿಧಿಯಿಲ್ಲ. ಈ ಬದಲಾವಣೆ ಬರೀ ಕಾಂಗ್ರೆಸ್ ಪಕ್ಷದಿಂದಲೇ ಆಗಿಲ್ಲ. ವಿರೋಧಪಕ್ಷ ನಿರ್ಣಯ ಮಾಡಿದಮೇಲೆ ಕಾಂಗ್ರೆಸ್ ಸರಕಾರ ಒಪ್ಪಿದೆ ಕಾಂಗ್ರೆಸ್ ತಾನೇ ಸ್ವಂತ ಜವಾಬ್ದಾರಿಯಿಂದ ಈ ಕೆಲಸ ಮಾಡಿದೆ ಎಂದು ಹೇಳುವ ಸ್ಥಿತಿಯಲ್ಲಿಲ್ಲ.

ಇನ್ನೊಂದು ವಿಷಯ. ವ್ಯವಸಾಯದ ಬಗ್ಗೆ ಈ ಆಯವ್ಯಯ ಪಟ್ಟಿಯಲ್ಲಿ ಕೆಲವು ವಿಷಯ ಗಳನ್ನು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ.

> "Maximum attention is being paid to schemes pertaining to agricultural production. Mysore is marginally deficit in the production of foodgrains. This margin will be made up within the next few years. We are determined to make the State self-sufficient of foodgrains by the end of the Fourth Plan."

ಮುಂದಿನ ಐದು ವರ್ಷಗಳಲ್ಲಿ ಸಂಪತ್‌ಭರಿತವಾಗಿ ಮಾಡುತ್ತೇವೆ ಎಂದು ಹಿಂದೆ ಹಣಕಾಸಿನ ಮಂತ್ರಿಗಳು ಹೇಳಿದ್ದಾರೆ. ಅದೇ ರೀತಿ ಈಗಲೂ ಕೂಡ ಹೇಳಿದ್ದಾರೆ. ಇದರಲ್ಲಿ ಹೊಸ ವಿಷಯ ವೇನೂ ಇಲ್ಲ. ಅನೇಕ ಆಶೋತ್ತರಗಳನ್ನು ಜನರ ಮುಂದೆ ಇಡುವುದು ಹೊಸದೇನೂ ಅಲ್ಲ. ಮೊದಲಿನಿಂದಲೂ ಹೇಳುತ್ತಾ ಬಂದಿದ್ದಾರೆ ಅದನ್ನೆ ಈಗಲೂ ಮಾಡುತ್ತಾ ಇದ್ದಾರೆ.

ವ್ಯವಸಾಯದ ಪ್ರಗತಿ ಬಗ್ಗೆ ಸರ್ಕಾರದವರು ಹೇಳುತ್ತಾ ಇರುವುದನ್ನು ನಾನಾದರೂ ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ, ಏಕೆಂದರೆ ಇದನ್ನು ಕೇಳಿ ಕೇಳಿ ಅವರು ಹೇಳುವುದರಲ್ಲ ನನಗೆ ನಂಬಿಕೆಯೇ ಹೊರಟು ಹೋಗಿದೆ. ಇನ್ನೊಂದು ಕಡೆ Our food policy is sucessful ಅಂತ ಹೇಳಿದ್ದಾರೆ. ಅದು ತಮ್ಮ ಕಾಲಗೇ ತಾವೇ ನಮಸ್ಕಾರ ಮಾಡಿಕೊಂಡು ನೂರು ವರ್ಷ ಆಯುಸ್ಸು ಅಂತ ಹರಸಿಕೊಂಡ ಹಾಗೆ ಆಗಿದೆ. ಈ ರೀತಿ ಹೇಳಿಕೊಂಡಿದ್ದಾರೆ. ಈ ದಿವಸ ಈ ದೇಶದಲ್ಲಿರತಕ್ಕ ಎಷ್ಟೋ ಜನ ಕಾಂಗ್ರೆಸ್‌ನ ಮೇಧಾವೀಗಳೇ ಈ ಕಾಂಗ್ರೆಸ್ ಆಡಳಿತದಲ್ಲಿ ಈ ಆಹಾರದ ನೀತಿ ಸರಿಯಾಗಿಲ್ಲ ಎನ್ನುವುದನ್ನು ಹೇಳಿದ್ದಾರೆ, ಒಪ್ಪಿಕೊಂಡಿದ್ದಾರೆ. ಈ ದಿನ

ವ್ಯವಸಾಯದ ಅಭಿವೃದ್ಧಿಯಾಗಬೇಕಾದರೆ, ಹೆಚ್ಚು ಆಹಾರ ಬೆಳೆಯಬೇಕಾದರೆ ಅದಕ್ಕೆ ಮೂಲಭೂತವಾದದ್ದು ಭೂಸುಧಾರಣೆ. ಹತ್ತಾರು ವರ್ಷಗಳಿಂದ ಈ ವಿಷಯದಲ್ಲಿ ಯಾವ ಒಂದು ತೀರ್ಮಾನವನ್ನು ತೆಗೆದುಕೊಳ್ಳದೇ ಕಾಲಹರಣ ಮಾಡಿ ಆ ಕಾನೂನಿನಲ್ಲಿರತಕ್ಕ ಯಾವ ಒಂದು ಪ್ರಯೋಜನವೂ ದೊರೆಯದ ರೀತಿಯಲ್ಲಿ ಮಾಡಿದ್ದಾರೆ. ದೊಡ್ಡ ದೊಡ್ಡ ಜಮೀನ್ದಾರರೂ ವಿಭಾಗ ಪತ್ರಗಳು ಮತ್ತು ಬೇರೆ ರೀತಿಯ ಕಳ್ಳ ಪತ್ರಗಳನ್ನು ಸೃಷ್ಟಿ ಮಾಡಿಕೊಂಡು ಬಡ ಜನರಿಗೆ ನಿರೀಕ್ಷಿಸಿದಷ್ಟು ಜಮೀನು ಸಿಕ್ಕದೇ ಹೋಗಿದೆ. ಇನಾಂರದ್ದಿಯಾತಿ ಕಾನೂನನ್ನು ಜಾರಿಗೆ ತಂದಿದ್ದಾರೆ. 2,000 ಇನಾಂ ಗ್ರಾಮಗಳಲ್ಲಿ ರೈತರಿಗೆ ಅನುಕೂಲವಾಗಬಹುದು ಎಂದು ಇತ್ತು, ಇನಾಂ ಗ್ರಾಮಗಳ ರದ್ದಿಯಾತಿ ಪರಿಣಾಮವಾಗಿ ಇನಾಂ ದಾರರಿಗೆ ಹಣವೂ ಸಿಕ್ಕದೇ, ಅಲ್ಲದೇ ಜಮೀನೂ ಕೂಡ ಅನೇಕರಿಗೆ ಸಿಕ್ಕಿದೆ. ಇಷ್ಟೇ ಅಲ್ಲದೆ ಲ್ಯಾಂಡ್ ರೆವಿನ್ಯೂ ಆಕ್ಟಿನಲ್ಲಿ ಗ್ರ್ಯಾಂಟ್ ರೂಲ್ಸ್ ಪ್ರಕಾರ ಯಾರು ಜಮೀನು ಮಾಡುತ್ತಾ ಇರುತ್ತಾರೋ ಅವರಿಗೆ ಜಮೀನು ಕೊಡಬೇಕೆಂದು ಇದೆ. ಈ ದಿನ ಅಧಿಕಾರಿಗಳು ಶ್ರೀಮಂತರಾಗಬೇಕು ಎನ್ನುವ ದುರಾಶೆಯಿಂದ ಹಳ್ಳಿಯಲ್ಲಿರತಕ್ಕ ಶ್ರೀಮಂತರು ಯಾರಿದ್ದಾರೋ ಅವರಿಗೆ ಲ್ಯಾಂಡ್ ಗ್ರ್ಯಾಂಟ್ ರೂಲ್ಸ್ ಪ್ರಕಾರ ಜಮೀನುಗಳನ್ನು ಕೊಟ್ಟು ಅವರು ತಮ್ಮ ಮಕ್ಕಳು ಮೊಮ್ಮಕ್ಕಳ ಹೆಸರಿನಲ್ಲಿ ಆ ಜಮೀನುಗಳನ್ನು ಮಾಡಿಕೊಂಡಿದ್ದಾರೆ. ಈ ಸಭೆಯಲ್ಲಿ ಸರ್ಕಾರದವರು ಮಾಡಿದಂತಹ ಕಾನೂನಿಗೆ ವಿರೋಧವಾಗಿ ಅಸತ್ಯವಾದ ಮಹಜರನ್ನು ಬರೆಸಿ ಅವರ ಮಕ್ಕಳು ಮೊಮ್ಮಕ್ಕಳ ಹೆಸರಿನಲ್ಲಿ ಖಾತೆ ಮಾಡಿಸಿ ಕೊಂಡಿದ್ದಾರೆ. ಯಾರು ಆ ರೀತಿ ಜಮೀನುಗಳನ್ನು ಕೊಟ್ಟಿದ್ದಾರೋ ಅವರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತಮಗೆ ಶಕ್ತಿ ಇರುವುದಾದರೆ ನಾನು ಎಷ್ಟು ಬೇಕಾದರೂ ಉದಾಹರಣೆ ಗಳನ್ನು ಕೊಡುವುದಕ್ಕೆ ತಯಾರಾಗಿದ್ದೇನೆ.

ಇನ್ನು ಆಹಾರ ಹೆಚ್ಚು ಉತ್ಪಾದನೆ ಮಾಡಬೇಕು ಎಂದು ಹೇಳುವುದಕ್ಕೆ ಸೆಮಿನಾರ್ ಗಳನ್ನು ಮಾಡುತ್ತಾರೆ. ಅಂತಹ ಸೆಮಿನಾರ್‌ಗಳು ಶಾಸನ ಸಭೆ ನಡೆಯುತ್ತಾ ಇರುವಾಗ ಜರುಗುತ್ತವೆ. ಸಭೆ ಇರುವ ದಿವಸ ಬಿಟ್ಟು ಇನ್ನೊಂದು ದಿವಸ ಇಟ್ಟುಕೊಳ್ಳಿ ಎಂದರೆ ಅದನು ಕೇಳುವುದಿಲ್ಲ, ಯಾರಾದರೂ ಬರಲೀ ಬರದೇ ಇರಲಿ, ಸೆಮಿನಾರ್ ನಡೆಯಬೇಕು, ಅಲ್ಲ ಅವರ ಅಂಕಿಅಂಶಗಳನ್ನು ಕೊಡಬೇಕು ಅದನ್ನು ಸರ್ಕಾರದವರಿಗೆ ಕಳುಹಿಸಿಕೊಡಬೇಕು ಅಷ್ಟೇ ವಿನಃ ಜನಗಳ ಸಂಪರ್ಕ ಬೆಳೆಸಬೇಕು, ರೈತರಿಗೆ ಅದರಿಂದ ಹೆಚ್ಚಿನ ಅನುಕೂಲವಾಗಬೇಕೆಂಬ ಪ್ರಯತ್ನ ವೇನೂ ಇಲ್ಲ. ನಿರೀಕ್ಷಿಸಿದಷ್ಟು ಪ್ರಯೋಜನ ಈ ಸೆಮಿನಾರ್‌ಯಿಂದ ಆಗುತ್ತಾ ಇಲ್ಲ.

ಸೀಮೆ ಗೊಬ್ಬರವನ್ನು ವ್ಯವಸಾಯಾಭಿವೃದ್ಧಿಗೆ ಒದಗಿಸುತ್ತಾ ಇದ್ದಾರೆ, ಆದರ ಹಂಚಿಗೆ ಸರಿಯಾಗಿ ನಡೆಯುತ್ತಾ ಇಲ್ಲ. ಎಷ್ಟೋ ಸೊಸೈಟಿಗಳಲ್ಲಿ ಬ್ಲಾಕ್‌ಮಾರ್ಕೆಟ್ ಮೂಲಕ ಗೊಬ್ಬರ ಮಾರುತ್ತಾ ಇದ್ದಾರೆ. 50 ಕೆ. ಜಿ. ವರೆಗೂ ಕೊಡಬಹುದು ಅಂತ ಇದ್ದರೂ ಕೂಡ ಒಂದು ಕೆ. ಜಿ. ಸಹ ಕೊಡುವುದಿಲ್ಲ. ಈ ವಿಷಯದಲ್ಲೂ ಕೂಡ ತೃಪ್ತಿಕರವಾಗಿ ಕೆಲಸ ನಡೆಯುತ್ತಾ ಇಲ್ಲ ಎಂದು ಈ ದಿವಸ ಹೇಳಬೇಕಾಗಿದೆ.

ಸಾಗುವಳಿಗೆ ಯೋಗ್ಯವಾಗಿರತಕ್ಕ ಜಮೀನಿನಲ್ಲಿ ಸಾಗುವಳಿ ಮಾಡಿ, ಹೆಚ್ಚು ಬೆಳೆಯುವುದಕ್ಕೆ ಪ್ರಯತ್ನ ಮಾಡಿದರೆ ಮೈಸೂರು ರಾಜ್ಯ ಬೇರೆ ರಾಜ್ಯಗಳಿಗಿಂತಲೂ ಯಾವ ರೀತಿಯಲ್ಲೂ ಕೂಡ ಆಹಾರದ ಉತ್ಪಾದನೆಯಲ್ಲಿ ಡಿಫಿಸಿಟ್ ರಾಜ್ಯವಾಗುವುದಕ್ಕೆ ಕಾರಣವಿಲ್ಲ. ಬೇಕಾದಷ್ಟು ಬೆಳೆಯುವುದಕ್ಕೆ ಅವಕಾಶವಿದೆ. ಆದರೆ ಫಾರಿನ್ ಎಕ್ಸ್‌ಚೇಂಜ್ ಸಂಪಾದನೆ ಮಾಡಬೇಕು ಎನ್ನುವ ಸಲುವಾಗಿ ಗೇರು ಬೀಜ ಮುಂತಾದ ಬೆಳೆಗಳನ್ನು ಹಾಕಬೇಕೆಂದು ಒಂದು ಯೋಜನೆ ತಯಾರು ಮಾಡಿ 150 ಎಕರೆ ಜಮೀನು ಇದ್ದರೆ ಅದರಲ್ಲಿ ಅಷ್ಟಕ್ಕೂ ಅಂತಹ ಬೆಳೆಗಳನ್ನೇ ಹಾಕಿ ಆ ಮೂಲಕ ಸರ್ಕಾರಕ್ಕೆ ಫಾರಿನ್ ಎಕ್ಸ್‌ಚೇಂಜ್ ಬರಮಾಡಿ ಕೊಳ್ಳಬೇಕೆಂದು ಯೋಜನೆ ಮಾಡಿದ್ದಾರೆ. ಇನ್ನೊಂದು ದೃಷ್ಟಿಯಿಂದ ನೋಡಿದ್ದೇ ಆದರೆ ನಮಗೆ ಅಷ್ಟು ಜಮೀನಿನಲ್ಲಿ ಉತ್ಪಾದನೆಯಾಗುತ್ತಾ ಇದ್ದ ಆಹಾರ ಧಾನ್ಯ ಕಡಿಮೆ ಯಾಯಿತು, ಅದಕ್ಕೆ ಬದಲಾಗಿ

(ಶ್ರೀ ಪಿ. ವೆಂಕಟಗಿರಿಯಪ್ಪ)

ಹೊರದೇಶಗಳಿಂದ ಗೋಧಿ ಕೊಂಡು ಕೊಂಡರೆ ಅದಕ್ಕೆ ನಾವು ಹಣ ಕೊಡಬೇಕು. ಆದ್ದರಿಂದ ಉತ್ಕೃಷ್ಟವಾಗಿರತಕ್ಕ ಜಮೀನಿನಲ್ಲಿ ಅನೇಕರು ಗೇರು ಬೀಜ, ಮಾವಿನ ತೋಟ ಮುಂತಾದವು ಮಾಡಿಕೊಂಡು ಒಳ್ಳೆಯ ಉತ್ಕೃಷ್ಟವಾಗಿರತಕ್ಕ ಜಮೀನಿನಲ್ಲಿ ಬಹಳ ಭಾಗ ಏನೂ ಬೆಳೆಯದೇ ಮುಳ್ಳುಗಿಡ ಬೆಳೆಯಲು ಆಸ್ಪದ ಮಾಡಿಕೊಟ್ಟಿದ್ದಾರೆ. ಬೇಕಾದರೆ ನನ್ನ ಜೊತೆಯಲ್ಲಿ ಬಂದರೆ ತೋರಿಸುವುದಕ್ಕೆ ಸಿದ್ಧವಾಗಿದ್ದೇನೆ. ಮಂತ್ರಿಗಳು ಸುಮ್ಮನೆ ಇಲ್ಲಿ ಕುಳಿತುಕೊಂಡು ಫೈಲ್ ನೋಡಿದರೆ ಸಾಲದು. ಒಳ್ಳೆಯ ಬಂಗಾರದಂತಹ ಧಾನ್ಯ ಬೆಳೆಯತಕ್ಕ ಜಮೀನಿನಲ್ಲಿ ಮುಳ್ಳುಗಿಡ ಬೆಳೆಯುವುದಕ್ಕೆ ಆಸ್ಪದ ಕೊಡುವುದನ್ನು ತಡೆಗಟ್ಟುವುದಕ್ಕೆ, ಹೆಚ್ಚು ಆಹಾರ ಧಾನ್ಯ ಬೆಳೆಯುವ ದೃಷ್ಟಿಯಿಂದ ಒಂದು ಕಾನೂನನ್ನೇ ತರಬೇಕೆಂದು ಈ ದಿವಸ ತಮ್ಮಲ್ಲಿ ಹೇಳಲು ಬಯಸುತ್ತೇನೆ.

ಮೈನರ್ ಇರಿಗೇಷನ್ ವಿಷಯದಲ್ಲಿ ಹೇಳುವುದಾದರೆ ಕೋಲಾರ ಜಿಲ್ಲೆಯಲ್ಲಿ ಭಾರಿ ಜಲಾಶಯಗಳು ಯಾವುವೂ ಇಲ್ಲ. ಸುಮಾರು 600 ಜೋಡಿ ಗ್ರಾಮಗಳು ಇವೆ. ಅಲ್ಲಿರತಕ್ಕ ಕೆರೆಗಳು ಬಹಳ ದುಸ್ಥಿತಿಯಲ್ಲಿ ಇವೆ. ಅವನ್ನು ರೆಸ್ಟೋರ್ ಮಾಡತಕ್ಕ ಬಗ್ಗೆ ಸರ್ಕಾರದವರು ಒಂದು ಅರ್ಡರ್ ಮಾಡಿ ಹತ್ತು ಎಕರೆಗಿಂತ ಕಡಿಮೆ ಇರತಕ್ಕ ಕೆರೆಯನ್ನು ಸರ್ಕಾರದವರೇ ರೆಸ್ಟೋರ್ ಮಾಡಿಸಿಕೊಡಬೇಕು ಇಲ್ಲದೇ ಹೋದರೆ ತಾಲ್ಲೂಕು ಬೋರ್ಡಿನವರು ಮಾಡಿಸಿ ಕೊಡಬೇಕಾದರೆ ಅದಕ್ಕೆ ಎಷ್ಟು ಹಣ ಬೇಕಾಗುತ್ತದೆಯೋ ಅಷ್ಟು ಹಣವನ್ನು ಕೊಟ್ಟು ರೆಸ್ಟೋರ್ ಮಾಡಿಸಿಕೊಡಬೇಕೆಂದು ಹೇಳುತ್ತೇನೆ.

ಈ ದಿನ ನಮ್ಮ ದೇಶದಲ್ಲಿ ಜನರು ಶ್ರೀಮಂತರಾಗುವುದಕ್ಕೂ, ಹಣಗಾರರಾಗುವುದಕ್ಕೂ ತಮ್ಮ ಒಂದು ಮುಖಂಡತ್ವವನ್ನು ಉಳಿಸಿಕೊಳ್ಳುವುದಕ್ಕೆ ಅವರು ಏನು ಭ್ರಷ್ಟಾಚಾರವನ್ನು ಬೇಕಾದರೂ ಮಾಡುವುದಕ್ಕೆ ಹಿಂದೆ ಸರಿಯುವುದಿಲ್ಲ. ಹೀಗಾಗಿ ದೇಶದಲ್ಲಿ ಅನೇಕ ಜನ ಮುಖಂಡರುಗಳು ಬೆಳೆಯುವುದಕ್ಕೆ ಪ್ರಾರಂಭವಾಗಿದೆ. ಇಂಥ ಜನರ ಬಗ್ಗೆ ಸರ್ಕಾರದವರು ತೀವ್ರವಾದ ಕಾರ್ಯ ಕ್ರಮಗಳನ್ನು ಕೂಡಲೆ ಕೈಗೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಕಡೆಯದಾಗಿ ನಮ್ಮ ಕೋಲಾರ ಜಿಲ್ಲೆಯಲ್ಲಿ ಕಳೆದ ಚುನಾವಣೆಗಳ ಕಾಲದಲ್ಲಿ ಹಣದ ಸುರಿಮಳೆಯೇ ಆಯಿತು. ನಮ್ಮ ಹಿಂದೆ ವ್ಯವಸಾಯದ ಮಂತ್ರಿಗಳಾಗಿದ್ದವರು ಶ್ರೀನಿವಾಸ ಪುರದಲ್ಲಿ ಚುನಾವಣೆಗೆ ನಿಂತರೆ ಅಲ್ಲಿ ಎಷ್ಟು ಹಣದ ಸುರಿಮಳೆಯನ್ನು ಮಾಡಿದರೂ ಚುನಾವಣೆಯಲ್ಲಿ ಜಯಗಳಿಸುವುದು ಸುಲಭವಲ್ಲ ಎಂದು ಹೇಳಿ ಅವರು ವೇಮಗಲ್ಲು ಕ್ಷೇತ್ರದಲ್ಲಿ ಚುನಾವಣೆಗೆ ನಿಂತು ಅಲ್ಲಿ ಹೊನ್ನಿನ ಮಳೆಗರೆದು ಅವರು ಚುನಾಯಿತರಾದರು. ಹೀಗೆ ಅಲ್ಲಿ ಅನೇಕರು ಅನೇಕ ರೀತಿಯಲ್ಲಿ ಕೆಲಸ ಮಾಡಿ ಚುನಾವಣೆಯಲ್ಲಿ ಗೆದ್ದು ಬಂದಿದ್ದಾರೆ. ಈ ಸಂದರ್ಭದಲ್ಲಿ ಒಂದು ಅಂಶವನ್ನು ನಾನು ಸರ್ಕಾರದವರ ಗಮನಕ್ಕೆ ತರಬೇಕಾಗಿದೆ. ಕೇಂದ್ರ ಸರ್ಕಾರದವರ ವತಿಯಿಂದ ಕೆ.ಜಿ.ಎಫ್. ಬಳಿ ಭಾರತ್ ಅರ್ತ್ ರಿಮೂವರ್ ಉದ್ಯಮಕ್ಕೆ ಸುಮಾರು ಫಲವತ್ತಾದ 500 ಎಕರೆ ಜಮೀನನ್ನು ಕೊಡುವುದಕ್ಕೆ ಪ್ರಯತ್ನಗಳು ನಡೆಯುತ್ತಿದ್ದವು. ಇಲ್ಲಿ ನಮ್ಮ ಜನರು ಕೈಗಾರಿಕೆಗಳನ್ನು ಬೆಳೆಸುವುದಕ್ಕೆ ಜಮೀನನ್ನು ಕೊಡಿ ಎಂದು ಕೇಳಿದರೆ—ಆದಕ್ಕೆ ಇಲ್ಲ ಎನ್ನುತ್ತಾರೆ. ಹೀಗೆ ತಮ್ಮ ಒಂದು ಚುನಾವಣೆಯಲ್ಲಿ ಜಯಗಳಿಸತಕ್ಕ ಬಗ್ಗೆ ಸರ್ಕಾರಕ್ಕೆ ಇಂಥ ಒಂದು ಒತ್ತಾಯವನ್ನು ತಂದಿದ್ದರು. ಅವರ ಒಂದ ಚುನಾವಣೆಯಲ್ಲಿ ಯಾರು ಯಾರು ಸಹಾಯ ಮಾಡುತ್ತಾರೋ ಅವರಿಗೆ ದುಡ್ಡು ಕೊಡತಕ್ಕದ್ದು, ಸರ್ಕಾರದವರಿಂದ ಜಮೀನನ್ನು ಕೊಡುವಂತೆ ಶಿಫಾರ್ಸು ಮಾಡುವುದು ಇಂಥ ಒತ್ತಾಯಕ್ಕೆ ನಮ್ಮ ಸರ್ಕಾರದವರು ಮಣಿಯಬಾರದು. ಆದರೆ ಈ ಸಂದರ್ಭದಲ್ಲಿ ಅದು ಹೇಗೋ ಏನೋ ನಮ್ಮ ಮುಖ್ಯ ಮಂತ್ರಿಗಳು ಅದಕ್ಕೆ ತಡೆ ಆಜ್ಞೆಯನ್ನು ಕೊಟ್ಟಿದ್ದಾರೆ. ಅವರು ತಮ್ಮ ಅದೇ ನಿಲುವನ್ನು, ಯಾರಿಂದ ಎಷ್ಟೇ ಒತ್ತಾಯಬಂದರು, ಅವರು ಎಷ್ಟೇ ದೊಡ್ಡವರಾಗಿದ್ದರೂ

ಅವರ ಶಿಫಾರಸಿಗೆ ಮುಖ್ಯ ಮಂತ್ರಿಗಳು ಹೆದರದೆ ಅದನ್ನು ಪೂರ್ಣವಾಗಿ ಪರಿಶೀಲನೆ ಮಾಡಿ, ಅಂಥವರ ಬಗ್ಗೆ ಉಗ್ರ ಕ್ರಮವನ್ನು ಕೈಗೊಳ್ಳಬೇಕೆಂದು ಹೇಳುತ್ತೇನೆ. ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಫಲವತ್ತಾದ ಭೂಮಿಯಲ್ಲಿ ಸರ್ವೆ ಮರಗಳನ್ನೂ, ಮಾವಿನ ಮರಗಳನ್ನೂ ಬೆಳೆಸುತ್ತಿದ್ದಾರೆ. ಇದನ್ನು ತಡೆಗಟ್ಟಬೇಕೆಂದು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಪಿ. ಗಂಗಾಧರ್ (ತುಮಕೂರು).—ಮಾನ್ಯ ಸಭಾಪತಿಗಳೇ, ಈಗ ಸಭೆಯ ಮುಂದೆ ಚರ್ಚೆಯಾಗುತ್ತಿರುವ ಡಿಮ್ಯಾಂಡ್ ಫಾರ್ ಗ್ರಾಂಟ್ಸ್ (ಓಟ್ ಆನ್ ಅಕೌಂಟ್) ವಿಚಾರದಲ್ಲಿ ಇದನ್ನು ನಾನು ವಿರೋಧ ಮಾಡುತ್ತಾ ಕೆಲವು ಮಾತುಗಳನ್ನು ಹೇಳಬೇಕೆಂದಿದ್ದೇನೆ.

ನಾನು ಮೊಟ್ಟ ಮೊದಲನೆಯದಾಗಿ ಈ ಸಂದರ್ಭದಲ್ಲಿ ಪೋಲೀಸ್ ಇಲಾಖೆಯ ಬಗ್ಗೆ ಕೆಲವು ವಿಚಾರಗಳನ್ನು ಈ ಮಾನ್ಯ ಸಭೆಗೆ ನಿವೇದನೆ ಮಾಡಿಕೊಳ್ಳಬೇಕೆಂದಿದ್ದೇನೆ. ನಮ್ಮ ದೇಶದಲ್ಲಿ ಹಿಂದೆ ಒಂದಾನೊಂದು ಕಾಲದಲ್ಲಿ ಏನು ಬೇಜವಾಬ್ದಾರಿ ಸರ್ಕಾರಗಳೆಂದು ನಾವು ಕರೆಯುತ್ತಿದ್ದೆವೋ, ಈ ಕಾಲದಲ್ಲೂ ಅದೇ ಮಾದರಿಯ ಸರ್ಕಾರಗಳಿದ್ದು, ಹಿಂದೆ ಆ ಬೇಜವಾಬ್ದಾರಿ ಸರ್ಕಾರಗಳಿದ್ದ ಕಾಲದಲ್ಲಿ ಏನು ಪ್ರಜೆಗಳಿಗೂ ಬಡಬಗ್ಗರಿಗೂ ತೊಂದರೆಗಳು ಅನಾನುಕೂಲಗಳು ಆಗುತ್ತಿದ್ದವೋ, ಮತ್ತು ಆಗಿದ್ದ ಸರ್ಕಾರಗಳು ಯಾವ ರೀತಿಯಲ್ಲಿ ಫ್ರೀಡಂ ಮೊವೆಂಟುಗಳನ್ನು ಹತ್ತಿಕ್ಕುತ್ತಿದ್ದವೋ ಅದೇ ಮಾದರಿಯಲ್ಲಿ ಇದು ನಮ್ಮ ಪೋಲೀಸ್ ಇಲಾಖೆ ಆ ಕೆಲಸ ಗಳೊಂದನ್ನೂ ತಪ್ಪದಂತೆ ನಡೆಸಿಕೊಂಡು ಬರುತ್ತಿದೆ. ಈ ದಿವಸ ದೇಶದಲ್ಲಿ ಈ ಪೋಲೀಸ್ ಇಲಾಖೆ ಇರತಕ್ಕದ್ದು ಏನು ದೇಶದ ಜನರಿಗೋ ಅಥವಾ ದೇಶದಲ್ಲಿರತಕ್ಕ ಬಡವರಿಗೋ ಅಥವಾ ಯಾವುದೋ ಒಂದು ಪಕ್ಷಕ್ಕೋ ಎಂಬುದೇ ಗೊತ್ತಾಗುತ್ತಿಲ್ಲ. ಅದನ್ನು ಬಿಚ್ಚಿ ಹೇಳಬೇಕೆಂದರೆ, ಈ ದಿವಸ ಪೋಲೀಸ್ ಇಲಾಖೆ ಇರತಕ್ಕದ್ದು ಕೇವಲ ಒಂದು ಕಾಂಗ್ರೆಸ್ ಪಕ್ಷದ ಬೆಂಬಲಕ್ಕಾಗಿಯೇ ವಿನಾ ಅದು ದೇಶಕ್ಕಲ್ಲ ಎಂದು ಧಾರಾಳವಾಗಿ ಹೇಳಬಹುದು. ದೇಶದಲ್ಲಿ ಎಲ್ಲಿ ಒಂದು ಸಣ್ಣ ಪುಟ್ಟ ವ್ಯಾಜ್ಯ ಉಂಟಾಗಲಿ ಅಲ್ಲಿ ಪೋಲೀಸಿನವರ ದೌರ್ಜನ್ಯವನ್ನು ಹೇಳತೀರದಾಗಿದೆ. ದೇಶದಲ್ಲಿ ಇಂದು ಯಾರು ಕಾಂಗ್ರೆಸ್ಸಿನವರು, ಯಾರು ಪೋಲೀಸಿನವರು ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಕೇವಲ ಸಣ್ಣ ಪುಟ್ಟ ವಿಚಾರಗಳಾದರೂ ಪೋಲೀಸಿನವರು ಜನರನ್ನು ಹಿಡಿದುಕೊಂಡು ಹೋಗಿ ಲಾಕಪ್ಪಿಗೆ ಹಾಕುತ್ತಿದ್ದಾರೆ. ತುಮಕೂರಿನಲ್ಲಿ ಇಂಥ ಒಂದು ಪ್ರಸಂಗ ನಡೆಯಿತು. ಅದನ್ನೀಗ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಆ ತುಮಕೂರು ಟೌನಿನಲ್ಲಿರತಕ್ಕ ಮೋಟಾರ್ ವರ್ಕರ್ಸ್ ಅಸೋಸಿಯೇಷನ್ನಿನವರು ಕಳೆದ ಚುನಾವಣೆಯಲ್ಲಿ ನನಗೆ ಅವರ ಸಹಾಯವನ್ನು ನೀಡಿದರು. ಆದರೆ ಪೋಲೀಸರಿಗೂ ಮತ್ತು ಆ ಕಾರ್ಮಿಕರಿಗೂ ಮೊದಲಿಂದಲೂ ಏನಿತ್ತೋ ಏನೋ ಆ ಸಮಾಚಾರ ನನಗೆ ಗೊತ್ತಿಲ್ಲ. ಆದರೆ ಸಾಮಾನ್ಯವಾಗಿ ಸರ್ಕಾರದವರಿಗೂ ಮತ್ತು ಎಲ್ಲ ಮಾನ್ಯ ಸದಸ್ಯರಿಗೂ ಗೊತ್ತಿರುವಂತೆ ಎಲ್ಲ ಬಸ್ಸುಗಳಲ್ಲೂ ಪ್ರಯಾಣಿಕರನ್ನು ಕರೆದುಕೊಂಡು ಹೋಗುವಾಗ ಒಬ್ಬಿಬ್ಬರು ಪ್ರಯಾಣಿಕರನ್ನು ಕ್ಲುಪ್ತವಾದುದಕ್ಕಿಂತ ಹೆಚ್ಚಿಗೆ ಕರೆದುಕೊಂಡು ಹೋಗುವುದು ಇದೊಂದು ಸಾಮಾನ್ಯವಾದ ಸಂಗತಿ. ಇದು ಕಾನೂನಿನ ದೃಷ್ಟಿಯಲ್ಲಿ ಒಂದು ತಕ್ಸೀರಾಗಬಹುದು. ಹಾಗೆ ಪೋಲೀಸಿನವರು ಅದನ್ನು ಒಂದು ತಕ್ಸೀರೆಂದು ಭಾವಿಸಿದಾಗ ಅವರು ಏನು ಮಾಡಬಹುದು—ಆ ಬಸ್ಸನ್ನು ನಿಲ್ಲಿಸಿ ಅದಕ್ಕೆ ಬೇಕಾದ ರೆಕಾರ್ಡನ್ನು ಮಾಡಿಕೊಂಡು ತಪ್ಪಿತಸ್ಥನ ಮೇಲೂ ಮತ್ತು ಬಸ್ ಮಾಲೀಕನ ಮೇಲೂ ಕೇಸನ್ನು ಹಾಕಬಹುದಾಗಿತ್ತು. ಆದರೆ ಅಲ್ಲಿದ್ದ ಪೋಲೀಸ್ ಅಧಿಕಾರಿ, ನಾನು ಈ ಸಂದರ್ಭದಲ್ಲಿ ಅವರ ಹೆಸರನ್ನು ಹೇಳಬಾರದಾದುದರಿಂದ ಹೇಳಲಿಕ್ಕೆ ಇಷ್ಟಪಡುವುದಿಲ್ಲ. ಆ ಬಸ್ಸನ್ನು ಅಲ್ಲಿ ನಿಲ್ಲಿಸಿ ಡ್ರೈವರನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಅಲ್ಲಿ ಆತನನ್ನು ಚೆನ್ನಾಗಿ ಬೆತ್ತದಿಂದ ಥಳಿಸಿಬಿಟ್ಟಿದ್ದಾರೆ. ಅನಂತರ ಆತನನ್ನು ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಈ ದಿವಸ ದೇಶದಲ್ಲಿ ಅನೇಕ ಕಾಂಗ್ರೆಸ್ಸಿನವರೂ ಹೀಗೆ ಪೋಲೀಸರಾಗಿಬಿಟ್ಟಿದ್ದಾರೆ. ಮುಂದೆ ಈ ವಿಚಾರದಲ್ಲಿ ಅಲ್ಲಿ ಒಂದು

(ಶ್ರೀ ಬಿ. ಪಿ. ಗಂಗಾಧರ್)

ದೊಡ್ಡ ಚಳುವಳಿ ನಡೆದರೂ ಹೆಚ್ಚೇನಲ್ಲ. ಹೀಗೆ ದೇಶದಲ್ಲಿ ಇಂಥ ಪೋಲೀಸ್ ಅಧಿಕಾರಿಗಳು ಹೆಚ್ಚಿದರೆ ದೇಶದಲ್ಲಿ ನಿಜವಾಗಿಯೂ ಪ್ರಜಾಪ್ರಭುತ್ವ ಉಳಿಯುತ್ತದೆಯೋ ಎಂಬುದನ್ನು ಆಲೋಚಿಸಬೇಕು ಎಂದು ನಾನು ಈ ಸಭೆಗೆ ಅರಿಕೆಮಾಡಿಕೊಳ್ಳುತ್ತಿದ್ದೇನೆ. ಹೀಗೆ ಪ್ರಜಾಪ್ರಭುತ್ವ ಉಳಿಯುವುದಕ್ಕೆ ಅವಕಾಶವಿಲ್ಲದಿರುವಾಗ ಅದು ದೇಶದಲ್ಲಿ ಬೆಳೆಯುವುದಿನ್ನೆಲ್ಲಿ ಬಂತು? ಹೀಗೆ ಪೋಲೀಸ್ ಇಲಾಖೆಯೊಂದರ ಕಷ್ಟವನ್ನೇ ತಡೆಯುವುದಕ್ಕೆ ಸಾಧ್ಯವಿಲ್ಲ ಅನ್ನುತ್ತಿರುವಾಗ ಇನ್ನು ಇದರ ಜೊತೆಗೆ ಲೇಬರ್ ಇಲಾಖೆಯನ್ನೂ ಸೇರಿಸಿಬಿಟ್ಟರೆ ಇನ್ನು ಕೇಳಬೇಕಾದುದೇ ಇಲ್ಲ. ಈ ಎರಡನ್ನೂ ಒಂದುಗೂಡಿಸಿಬಿಟ್ಟರೆ ತೋಳನು ಸಂಬಳವನ್ನೇ ಕೇಳದೆ ಕುರಿಯನ್ನು ಕಾಯುವ ಕೆಲಸವನ್ನು ಒಪ್ಪಿಕೊಂಡ ಹಾಗಾಗಿದೆ. ಪೋಲೀಸ್ ಇಲಾಖೆಯನ್ನೂ ಮತ್ತು ಲೇಬರ್ ಇಲಾಖೆ ಈ ಎರಡನ್ನೂ ಒಬ್ಬ ಮಂತ್ರಿಗಳಲ್ಲಿ ಇಟ್ಟಿರುವುದು ಜನರಿಗೆ ಉಸಿರನ್ನು ಬಿಡುವುದಕ್ಕೂ ಕೂಡ ಸಾಧ್ಯವಾಗುತ್ತಿಲ್ಲ. ನೂರಾರು ಜನರು ಯಾರು ಕಷ್ಟಜೀವಿಗಳಾಗಿ ದುಡಿಮೆಯಿಲ್ಲದೆ ಒದ್ದಾಡುತ್ತಿದ್ದಾರೋ ಅವರ ಒಂದು ಹಿತದೃಷ್ಟಿಯಿಂದ ಈ ಎರಡು ಇಲಾಖೆಗಳನ್ನೂ ಬೇರ್ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪ್ರಾಹಿಬಿಷನ್ ಮತ್ತು ಪೋಲೀಸ್ ಬಾಬುಗಳಿಗೆ ಬಂದರೆ ಈ ಎರಡಕ್ಕೂ ಬಹಳ ಹತ್ತಿರದ ಸಂಬಂಧವಿದೆ. ಇದು ನಮ್ಮ ಜಿಲ್ಲೆಯಲ್ಲೂ ಮತ್ತು ಇನ್ನಿತರ ಜಿಲ್ಲೆಗಳಲ್ಲೂ ಜಾರಿಯಲ್ಲಿದೆ. ಈ ಪ್ರೊಹಿಬಿಷನ್ ಬಗ್ಗೆ ನೇಮಕವಾಗಿರತಕ್ಕ ಪೋಲೀಸ್ ಇನ್‌ಸ್ಪೆಕ್ಟರುಗಳಿಗೂ ಮತ್ತು ಸಬ್ ಇನ್‌ಸ್ಪೆಕ್ಟರುಗಳಿಗೂ ಸಂಬಳ ಅನ್ನುವುದೇ ಬೇಕಾಗಿಲ್ಲ. ಮುಖ್ಯ ಮಂತ್ರಿಗಳು ಮನಸ್ಸು ಮಾಡಿದರೆ ಇಷ್ಟು ಹಣವನ್ನು ಉಳಿಸಬಹುದು. ಇದನ್ನು ಲಂಚ ಎನ್ನುವುದಕ್ಕಿಂತ ಸಂಬಳ ಅಂತ ಕರೆಯುವುದೇ ಲೇಸಾಗಿದೆ. ಕಾರಣ ಏನೆಂದರೆ, ಎಲ್ಲೆಲ್ಲಿ ಇಲಿಸಿಟ್ ಅರೆಕ್ ತಯಾರಾಗುತ್ತಿದೆಯೋ ಅಲ್ಲೆಲ್ಲಾ ಪೋಲೀಸಿನವರು ಮಾಮೂಲೆಂದು ಒಂದು ನಿಗದಿಯಾದ ಮೊಬಲಗನ್ನು ಗೊತ್ತುಮಾಡಿಬಿಟ್ಟಿದ್ದಾರೆ. ಅದನ್ನು ಕಾಲ ಕಾಲಕ್ಕೆ ಹೋಗಿ ವಸೂಲ್ಮಾಡಿಕೊಂಡು ಬರುವುದಷ್ಟೇ ಇವರ ಕೆಲಸ. ಇವರೇನೂ ಆ ಪ್ರೊಹಿಬಿಷನ್ ಬಗ್ಗೆ ಕಷ್ಟಪಡಬೇಕಾದ್ದಿಲ್ಲ. ಹೀಗೆ ಇವರಿಗೆ ಕನಿಷ್ಟಪಕ್ಷ ಒಂದು ತಿಂಗಳಿಗೆ ಬರತಕ್ಕ ವರಮಾನ ಒಂದು ಸಾವಿರ ರೂಪಾಯಿಗಳಿಗಿಂತ ಕಡಿಮೆಯಾಗಿರುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಅದನ್ನು ''ಸಂಬಳ'' ಅನ್ನಬೇಡಿ. ಅದನ್ನು ''ಗಿಂಬಳ'' ಅಂತ ಕರೆಯಬೇಕು.

ಶ್ರೀ ಬಿ. ಪಿ. ಗಂಗಾಧರ್.—ತಾವು ಯಾವ ರೀತಿಯಲ್ಲಾದರೂ ಕರೆಯಿರಿ. ಇವರಷ್ಟೇ ಜನರಲ್ಲ, ಇಂಥ ಕಸಬನ್ನು ಇಟ್ಟುಕೊಂಡಿರತಕ್ಕವರು, ಇವರ ಜೊತೆಗೆ ತಾಲ್ಲೂಕಿನಲ್ಲಿರುವ ತಾಹಶೀಲ್ದಾರರೂ ಕೂಡ ಅವರ ಹೆಸರನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಈ ದಿವಸ ಅವರಿಗೆ ಆಹಾರ ಧಾನ್ಯಗಳ, ಸಕ್ಕರೆ ಗಳ ಪರ್ಮಿಟ್ಟನ್ನು ಕೊಡತಕ್ಕ ಅಧಿಕಾರವಿರುವುದರಿಂದ ಅವರ ಕೈ ಚಳಕ ಕೂಡ ಬಹಳವಾಗಿದೆ. ಅವರು ಸಕಾಲಕ್ಕೆ ಸರಿಯಾಗಿ ಕೆಲಸಮಾಡಿದ ಕಂಟ್ರಾಕ್ಟರುಗಳಿಗೆ ಹಣವನ್ನು ಪಾವತಿ ಮಾಡದೆ ಕಿರುಕುಳವನ್ನು ಕೊಡುತ್ತಿದ್ದಾರೆ. ನಮ್ಮ ಜಿಲ್ಲೆಗೆ ವ್ಯವಸಾಯದ ಅಭಿವೃದ್ಧಿಗಾಗಿ 80 ಸಾವಿರ ರೂಪಾಯಿನ ಗ್ರಾಂಟ್ ಬಂದಿದ್ದರೂ, 8 ಸಾವಿರ ರೂಪಾಯಿಗಳ 8 ರೆಕಾರ್ಡುಗಳನ್ನೂ ಕೂಡ ಅವರು ಚೆಕ್‌ಅಪ್ ಮಾಡಿಲ್ಲ. ಕಂಟ್ರಾಕ್ಟರು ಕೆಲಸ ಮುಗಿಸಿದ್ದರೂ ಪದೇ ಪದೇ ಇವರ ಬಳಿ ತಿರುಗಬೇಕಾಗಿದೆ. ಇವರು ಆ ಮಾಮೂಲನ್ನು ಕೊಡದ ವಿನಾ ಅವರೇನೂ ಸ್ಥಳವನ್ನು ಬಿಟ್ಟು ಕದಲುವಂತಿಲ್ಲ. ಈಗಲಾದರೂ ಸರ್ಕಾರದವರು ಇದನ್ನು ಕೂಡಲೆ ಪರಿಶೀಲನೆ ಮಾಡಿ ಕೆಲಸ ಮಾಡಿರತಕ್ಕವರಿಗೆ ಕೂಡಲೆ ಹಣ ದೊರೆಯುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ಪೋಲೀಸಿನವರಿಗಾಗಿ ಖರ್ಚಾಗುತ್ತಿರುವ ಹಣ ಸದ್ವಿನಿಯೋಗವಾಗುತ್ತಿಲ್ಲ. ಕಾರಣ, ಅವರಿರುವುದು ದೇಶದಲ್ಲಿರತಕ್ಕ ಜನರ ಸೇವೆಗಾಗಿ ಎಂಬುದನ್ನು ಅವರು ಇನ್ನೂ ಮನಗಂಡಿಲ್ಲ.

ಇನ್ನು ವಿದ್ಯಾಭ್ಯಾಸದ ವಿಚಾರಕ್ಕೆ ಬಂದರೆ: ದೇಶದಲ್ಲಿ ಅನೇಕ ಕಡೆಗಳಲ್ಲಿ ಏಯಿಡೆಡ್ ಶಾಲೆಗಳು ಮುಂದೆ ಬರುತ್ತಿವೆ. ಆ ಶಾಲೆಗಳ ಬಗ್ಗೆ ಇರತಕ್ಕ ಆ ಒಂದು ಗ್ರ್ಯಾಂಟ್ ಇನ್ ಏಯಿಡೆಡ್ ಕೋಡಿನಿಂದ ಸರ್ಕಾರಕ್ಕೆ ಬಹಳ ಹಣ ವ್ಯಯವಾಗುತ್ತಿದೆ. ಎಲ್ಲಿಲ್ಲಿ ನೋಡಲಿ ಕೋ-ಆಪರೇಟೀವ್ ಹೈಸ್ಕೂಲುಗಳೂ, ಖಾಸಗೀ ಹೈಸ್ಕೂಲುಗಳೂ ದಿನೇ ದಿನೇ ಬೆಳೆಯುವುದಕ್ಕೆ ಪ್ರಾರಂಭವಾಗಿವೆ. ಇವುಗಳ ಮೂಲ ಉದ್ದೇಶವೇನು? ದೇಶದಲ್ಲಿರತಕ್ಕ ಬಡಜನಗಳಿಗೆ ಅಥವಾ ವಿದ್ಯಾಭ್ಯಾಸದಲ್ಲಿ ಹಿಂದುಳಿದಿರತಕ್ಕ ಜನರಿಗೆ ವಿದ್ಯಾದಾನ ಮಾಡುವುದಕ್ಕೋ ಅಥವಾ ಬೇರೊಂದು ರೂಪದಲ್ಲಿ ಹಣ ಸಂಪಾದನೆ ಮಾಡವುದಕ್ಕೋ ಅನ್ನುವುದನ್ನೀಗ ನಾವು ಪರಿಶೀಲಿಸ ಬೇಕಾಗಿದೆ. ಈ ಸಂಸ್ಥೆಗಳನ್ನು ನಡೆಸುವುದಕ್ಕೆ ಒಬ್ಬ ಸೆಕ್ರೆಟರಿಗಳು ಎಂದು ಇರುತ್ತಾರೆ. ಅವರಲ್ಲಿ ಒಂದು ಬಟವಾಡೆ ಪುಸ್ತಕ ಇರುತ್ತದೆ. ಅದರಲ್ಲಿ ಒಬ್ಬ ಶಾಲೆಯ ಉಪಾಧ್ಯಾಯನಿಗೆ 200 ರೂಪಾಯಿಗಳು ಸಂಬಳ ಎಂದಿದ್ದರೆ ಆತನಿಗೆ ಕೈಲಿ 100 ರೂಪಾಯಿಗಳನ್ನಿಟ್ಟು ಆ 200 ರೂಪಾಯಿಗಳಿಗೆ ರುಜುವನ್ನು ಹಾಕಿಸಿಕೊಳ್ಳುತ್ತಾರೆ. ಇಂಥ ವಿದ್ಯಾ ಸಂಸ್ಥೆಗಳು ಈ ದಿವಸ ಅನೇಕ ಇವೆ.

ಹೈಸ್ಕೂಲಿನಿಂದ ಹಿಡಿದುಕೊಂಡು ಪ್ರೈಮರಿ ಸ್ಕೂಲಿನವರೆಗೂ ಹಾಗೆಯೇ ಇದೆ. ಇನ್ನು ಈಗ ಕೆಲವು ಹೆಣ್ಣುಮಕ್ಕಳ ಸಮಾಜಗಳು ಎಂಬುದಾಗಿ ಷುರು ಮಾಡಿದ್ದಾರೆ. ಅಂತಹ ಸಮಾಜಗಳನ್ನು ಗಂಡಸರು ಮಾಡಿದ್ದು ಆಯಿತು. ಗಂಡಸರೇನೋ ಅವ್ಯವಸ್ಥಿತವಾದ ರೀತಿಯಲ್ಲಿ ಮಾಡಿದ್ದಾರೆ. ಇನ್ನು ಈಗ ಹೆಣ್ಣುಮಕ್ಕಳ ಸರದಿ ಬಂದಿದೆ. ಅವರು ಸಮಾಜಗಳೆಂದು ಷುರು ಮಾಡಿ ಸಣ್ಣ ಸಣ್ಣ ಮಕ್ಕಳಿಗಾಗಿ ನರ್ಸರಿ ಸ್ಕೂಲುಗಳನ್ನು ನಡೆಸುತ್ತಿದ್ದಾರೆ. ಅಲ್ಲಿನ ಉಪಾಧ್ಯಾಯರುಗಳಿಗೆ ಇಷ್ಟು, ಜವಾನನಿಗೆ ಇಷ್ಟು ಸಂಬಳ ಎಂದು ನಿಗದಿ ಮಾಡಿದ್ದರೂ ಅವರಿಗೆ ಅಷ್ಟು ಸಂಬಳ ಸರಿಯಾಗಿ ಸಲ್ಲುತ್ತಿಲ್ಲ. ಸರ್ಕಾರದವರು ಶೇಕಡ 80 ರಷ್ಟು ಆ ಸ್ಕೂಲಿನ ಮೇಂಟನೆನ್ಸ್‌ಗಾಗಿ ಗ್ರಾಂಟು ಕೊಡುತ್ತಾರೆ. ಅದರಲ್ಲಿ ಕೇವಲ 10 ರೂಪಾಯಿಗಳನ್ನು ಜವಾನನಿಗೆ ಕೊಟ್ಟು ಅವನಿಂದ 50–60 ರೂಪಾಯಿಗಳಿಗೆ ರುಜು ಮಾಡಿಸಿಕೊಳ್ಳುತ್ತಾರೆ. ಅಲ್ಲಿನ ಉಪಾಧ್ಯಾಯರುಗಳು ಅವರ ಮನೆಯ ಕೆಲಸಗಳನ್ನೂ ಸಹ ಮಾಡಿಸಿಕೊಳ್ಳುತ್ತಾರೆ. ಆದ್ದರಿಂದ ಈ ಏಡೆಡ್ ಸ್ಕೂಲುಗಳಿಗೆ ಕೊಡುವ ಹಣ ಬಹಳವಾಗಿ ದುರ್ವಿನಿಯೋಗವಾಗುತ್ತಿದೆ. ಬೇರೆ ಬೇರೆ ಕಡೆಗಳಲ್ಲಿ ಹೋಗಿ ಕೆಲಸ ಮಾಡುತ್ತಾರೆ. ಇದರಿಂದಾಗಿ ದೇಶದ ಬಡ ಮಕ್ಕಳು ಯಾವ ರೀತಿಯಲ್ಲಿ ಮುಂದುವರಿಯಬೇಕು ಎನ್ನುವುದನ್ನು ನಾವು ಇವತ್ತು ಯೋಚನೆಮಾಡಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಒಂದು ಸೂಚನೆಯನ್ನು ಕೊಡುತ್ತೇವೆ. ಈಗ ಕಾಲೇಜಿನಿಂದ ಹಿಡಿದು ಪ್ರೈಮರಿ ಸ್ಕೂಲಿನವರೆಗೂ ಬೇಕಾದಷ್ಟು ಏಡೆಡ್ ಇನ್‌ಸ್ಟಿಟ್ಯೂಷನ್ನುಗಳಿವೆ. ಕೆಲವು ಮೆಡಿಕಲ್ ಶಾಲೆಗಳು ಏನಿವೆ ಅವಕ್ಕೂ ಸರ್ಕಾರದವರು ಏಡ್ ಕೊಡುತ್ತಿದ್ದಾರೆ. ಆ ಏಡನ್ನು ಚೆಕ್‌ಮೂಲಕ ಕೊಟ್ಟರೆ ಅದು ಡೈರೆಕ್ಟಾಗಿ ಯಾರಿಗೆ ತಲುಪ ಬೇಕೋ ಅವರಿಗೆ ತಲುಪುತ್ತದೆ. ಆ ರೀತಿಯಾಗಿ ವ್ಯವಸ್ಥೆ ಮಾಡಬೇಕು. ಅದರಿಂದ ನಿಜವಾಗಿಯೂ ಅಲ್ಲಿ ಕೆಲಸ ಮಾಡತಕ್ಕ ಜನ ಸರ್ಕಾರದವರನ್ನು ಅಭಿನಂದನೆ ಮಾಡುತ್ತಾರೆ. ಈ ಸಂಸ್ಥೆಗಳನ್ನು ನಡೆಸುವವರಲ್ಲಿ ಸೇಕಡ 90 ಭಾಗ ಬರೀ ಕಾಂಗ್ರೆಸ್‌ನವರೇ ಇದ್ದಾರೆ.

2–30 P.M.

ಹಿಂದೆ ಒಂದು ಸಾರಿ ನಾನು ಡಿಸ್ಟ್ರಿಕ್ಟ್ ಕಾನ್ಸಿಲ್‌ನಲ್ಲಿ ಮಾತನಾಡುತ್ತಿರುವಾಗ ಅಲ್ಲಿ ಕಾಂಗ್ರೆಸ್ ಭಕ್ತರು ಕೂಡ ಇದ್ದರು. ಇವರ ಕಡೆಯವರ ಮೇಲೆ ಎಷ್ಟೋ ಸಾರಿ ನೋಟೀಸ್ ಕೊಟ್ಟಿದೆ. ಪ್ರತಿ ತಿಂಗಳಲ್ಲಿಯೂ ನೋಟೀಸ್ ಕೊಟ್ಟಿತ್ತು. ಅವರು ಮಾಡಿರತಕ್ಕ ವ್ಯವಹಾರ ಹೇಳಿದ್ದಕ್ಕೆ ಅಲ್ಲಿ ಬಾಯಿ ಮುಚ್ಚಿಕೊಂಡು ಕುಳಿತುಕೊಂಡರು. ಆದ್ದರಿಂದ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ಬೇಡಿಕೆ ಇಷ್ಟೇ. ವಿದ್ಯಾಭ್ಯಾಸ ಸಂಸ್ಥೆಗಳಿಗೆ ನಾವು ಕೊಡತಕ್ಕ ಗ್ರಾಂಟು ನೇರವಾಗಿ ಯಾರಿಗೆ ತಲುಪಬೇಕೋ ಅವರಿಗೆ ತಲುಪುವಂತೆ ವ್ಯವಸ್ಥೆ ಮಾಡಬೇಕು. ಆಗ ಅಲ್ಲ

(ಶ್ರೀ ಬಿ. ಪಿ. ಗಂಗಾಧರ್)

ಕೆಲಸಮಾಡತಕ್ಕ ಜನ ಇವರನ್ನು ಹರಸುತ್ತಾರೆ. ಇಲ್ಲದಿದ್ದರೆ ಇವರು ಕೊಡುವ ಹಣ ನಿಜವಾಗಿ ವ್ಯರ್ಥ ಆಗುತ್ತದೆ. ಹುಡುಗರಿಗಂತೂ ಏನೂ ಪ್ರಯೋಜನವಾಗುವುದಿಲ್ಲ. ಆ ವಿದ್ಯಾಸಂಸ್ಥೆಗಳನ್ನು ನಡೆಸತಕ್ಕ ಜನ ಸಾಹುಕಾರರಾಗುತ್ತಿದ್ದಾರೆ. ಆ ಸಂಸ್ಥೆಗಳನ್ನು ಈಗ ನಡೆಸುತ್ತಾ ಇರತಕ್ಕ ಜನ ಯಾರ್ಯಾರೆಂದರೆ, ಹಿಂದಿನಿಂದಲೂ ಕಾಂಗ್ರೆಸ್‌ನಲ್ಲಿದ್ದವರು, ಈಗಲೂ ಅವರು ಇದ್ದಾರೆ. ಅವರ ಪೈಕಿ ಎಷ್ಟು ಜನ ಹಣವನ್ನು ಗಳಿಕೆಮಾಡಿದ್ದಾರೆ. ಎಷ್ಟು ಮನೆಗಳು ಮತ್ತು ಆಸ್ತಿಮಾಡಿದ್ದಾರೆಂಬುದನ್ನು ನೋಡಿದರೆ ಅದು ನೂರಕ್ಕೆ ನೂರು ಸತ್ಯ. ಆದ್ದರಿಂದ ಇದನ್ನೂ ವ್ಯವಸ್ಥಿತವಾದ ರೀತಿಯಲ್ಲಿ ಇನ್ನೂ ವಿಚಾರಣೆ ಮಾಡಿಲ್ಲವೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ.

ಇನ್ನು ವ್ಯವಸಾಯದ ಬಗ್ಗೆ ನಾನು ಮಾತನಾಡಬೇಕಾಗಿದೆ. ಈಗ ಸಾವಿರಾರು ಎಕರೆಗಳಷ್ಟು ಜಮೀನು ಹುಚ್ಚಾಪಟ್ಟೆ ರೀತಿಯಲ್ಲಿ ವಿಲೇವಾರಿಯಾಗುತ್ತಿರುವುದು ಮಾನ್ಯಸದಸ್ಯರಿಗೆಲ್ಲರಿಗೂ ಗೊತ್ತಿದೆ. ಚುನಾವಣೆಯಾದನಂತರ ಕಾಂಗ್ರೆಸ್ಸಿಗೆ ಸಹಾಯಮಾಡಿದವರು ಏನೇನು ವೆಚ್ಚಗಳನ್ನು ಕೊಟ್ಟಿದ್ದರೋ ಅಂತಹವರಿಗೆಲ್ಲರಿಗೂ ಜಮೀನು ಸಂಪತ್ತನ್ನು ಬಾಯಿಗೆ ಬಂದ ರೀತಿಯಲ್ಲಿ ಕೊಟ್ಟಿದ್ದಾರೆ. ಅವುಗಳ ಬಗ್ಗೆ ರಿಕಾರ್ಡ್ಸ್ ಬಿಲ್ಡಪ್ ಆಗಿಲ್ಲ. ಸಾಮಾನ್ಯವಾಗಿ ಒಂದು ಜಮೀನು ಕೊಡಬೇಕಾದರೆ ಮಹಜರು, ಅಹವಾಲ್ ತಃಖ್ತೆ, ಆ ಮನುಷ್ಯನಿಗೆ ನಿಜವಾಗಿ ಜಮೀನು ಎಲ್ಲಿಯಾದರೂ ಇದೆಯೇ, ಅತನಿಗೆ ಜಮೀನು ಕೊಡುವ ಬಗ್ಗೆ ಅಜುಬಾಜು ಇರುವವರ ಅಭಿಪ್ರಾಯ ಏನಿದೆ—ಇವೆಲ್ಲ ವರದಿಗಳು ತಹಸೀಲ್ದಾರ್ ಅಸಿಸ್ಟೆಂಟ್ ಕಮೀಷನರ್ ಡೆಪ್ಯುಟಿ ಕಮೀಷನರ್ ಪರಿಶೀಲನೆಮಾಡಿ ಜಮೀನುಗಳನ್ನು ಹಂಚಿದೆ, ಎಲ್ಲಾ ಕಾನೂನುಗಳನ್ನೂ ಮೂಲೆಗೆ ತಳ್ಳಿ ಚುನಾವಣೆಯಾದ ನಂತರ ಆಫೀಸ್ ಲೇಡಶಾನ್ ಮಾಡುವ ಸಮಯದಲ್ಲಿ ಇವರಿಗೆ ಇಷ್ಟ ಬಂದ ರೀತಿಯಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಹಾಯ ಮಾಡಿದ ಎಲ್ಲ ಜನಗಳಿಗೂ ಬೇಕಾದಷ್ಟು ಜಮೀನುಗಳನ್ನು ಹಂಚಿಕೆ ಮಾಡಿದ್ದಾರೆ. ಇದರಿಂದ ದೇಶದ ಸಂಪತ್ತು ಲೂಟಿಯಾಗಿದೆ. ಹಣ ಮಾತ್ರ ಲೂಟಿ ಅಲ್ಲ.

ಶ್ರೀ ಎಸ್. ನಿಜಲಿಂಗಪ್ಪ.—ಅದರ ಬಗ್ಗೆ ಒಂದು ಪಟ್ಟಿಯನ್ನು ಕಳುಹಿಸಿಕೊಡುತ್ತೀರಾ ?

ಶ್ರೀ ಬಿ. ಪಿ. ಗಂಗಾಧರ್.—ಕಳುಹಿಸಿ ಕೊಡುತ್ತೇನೆ. ನಮ್ಮ ಟ್ರೆಜರಿಯಲ್ಲಿದ್ದ ಹಣ ಎಷ್ಟರಮಟ್ಟಿಗೆ ಲೂಟಿಯಾಗುತ್ತಿದೆಯೋ ಅದೇ ರೀತಿಯಲ್ಲಿ ನಮ್ಮ ದೇಶದ ಜಮೀನು ಸಂಪತ್ತೂ ಕೂಡ ಲೂಟಿಯಾಗುತ್ತಿದೆ. ನಮ್ಮ ದೇಶದ ಜಮೀನು ಐಶ್ವರ್ಯವೇನಿದೆ ಅದು ನಿಜವಾಗಿ ದುರ್ವಿನಿಯೋಗವಾಯಿತು. ಆದ್ದರಿಂದ ಅದರ ಬಗ್ಗೆ ನಿಖರವಾದ ಹಾಗೂ ನಿರ್ದಿಷ್ಟವಾದ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಒಂದು ವೇಳೆ ಈಗ ಮಾಡುತ್ತಿರುವ ರೀತಿಯಲ್ಲಿ ಮುಂದೆ ಬರುವ ಮಂತ್ರಿಗಳು ಅಥವಾ ಅಧಿಕಾರಿಗಳು ಸರ್ಕಾರದ ಜಮೀನು ಸಂಪತ್ತನ್ನು ದುರ್ವ್ಯಾಪಾರ ಮಾಡಿದರೆ ನಿಜವಾಗಿ ನಾವು ಮುಂದೆ ಬಹಳ ಕಷ್ಟಕ್ಕೀಡಾಗುತ್ತೇವೆ.

ಇನ್ನು ನಾಷ್ಯನಲ್ ಎಕ್ಸ್‌ಟೆನ್‌ಷನ್ ಸ್ಕೀಂ ಬಗ್ಗೆ ಅನುಕೂಲಗಳು ಜಾಸ್ತಿಯಾಗಿವೆಯೆಂದು ಹೇಳಿದ್ದಾರೆ. ನಾನು ಹೇಳಬೇಕಾದರೆ, ಅದರಿಂದ ಅನಾನುಕೂಲಗಳೇ ಹೆಚ್ಚಾಗಿವೆ. ಆದ್ದರಿಂದ ಇದನ್ನು ನ್ಯಾಷನಲ್ ಎಕ್ಸ್‌ಟೆನ್‌ಷನ್ ಸ್ಕೀಂ ಎಂಬುದಾಗಿ ಹೇಳುವುದಕ್ಕೆ ಬದಲಾಗಿ ನ್ಯಾಷನಲ್ ಈಟಿಂಗ್ ಸ್ಕೀಂ ಎಂಬುದಾಗಿ ಈಗ ಕರೆಯಬೇಕಾಗಿದೆ. ಈ ಯೋಜನೆಗಳನ್ನು ತಯಾರುಮಾಡುವುದರಿಂದ ಸರ್ಕಾರಕ್ಕೆ ಸುಮ್ಮನೆ ಹಣ ವ್ಯರ್ಥವೇ ವಿನಹ ಮತ್ತೇನೂ ಇಲ್ಲ. ಇದರಿಂದಾಗತಕ್ಕ ಅನುಕೂಲಗಳು ಜನತೆಗೆ ಏನೂ ಆಗಿಲ್ಲ. ಅದರ ಬಗ್ಗೆ ಸರ್ಕಾರದವರು ನಿರ್ದಿಷ್ಟವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಈ ಬಾಬಿಗೆ ಒದಗಿಸಿರತಕ್ಕ ಹಣ ಒಳ್ಳೆಯ ರೀತಿಯಲ್ಲಿ ಖರ್ಚಾಗುವುದಕ್ಕೆ ಏನೂ ಬೇಕೋ ಅದನ್ನು ಸರ್ಕಾರದವರು ಜಾಗ್ರತೆಯಾಗಿ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

ಇನ್ನು ನಿರುದ್ಯೋಗ ಸಮಸ್ಯೆ ಬಗ್ಗೆ ಹೇಳುವುದಾದರೆ, ಇದು ಬಹಳ ದುರ್ದೈವದ ಸಂಗತಿ. ನಮಗೆ ಸ್ವರಾಜ್ಯ ಬಂದು 20 ವರ್ಷಗಳಾದರೂ ನಮ್ಮ ದೇಶದಲ್ಲಿ ಈ ನಿರುದ್ಯೋಗ ಸಮಸ್ಯೆ ಬಹಳ ದೊಡ್ಡ ಸಮಸ್ಯೆಯಾಗಿ ಆಕಾಶದವರೆಗೂ ಬೆಳೆಗುಕೊಂಡು ಹೋದರೂ ಆಡಳಿತ ಪಕ್ಷದವರು ಈ ವಿಷಯದಲ್ಲಿ ಗಮನವನ್ನು ಕೊಡುತ್ತಾ ಇಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಏಕೋ ನಗುತ್ತಿದ್ದಾರೆ. ಅದೇನು ಅದನ್ನು ಮೂಡುವುದರಲ್ಲಿ ವಿಷಾದವೇ ? ಏನೂ ಗೊತ್ತಾಗುತ್ತಿಲ್ಲ. ಈ ನಿರುದ್ಯೋಗ ಸಮಸ್ಯೆ ವರ್ಷೇ ವರ್ಷೇ ಒಂದಲ್ಲ ಒಂದು ರೀತಿಯಲ್ಲಿ ಜಾಸ್ತಿಯಾಗುತ್ತಿದೆ. ಎಲ್ಲೆಲ್ಲಿಯೂ ಈ ನಿರುದ್ಯೋಗ ಸಮಸ್ಯೆ ಬೆಳೆಯುತ್ತಿದೆ. ಅದಕ್ಕೆ ನನ್ನ ಸಲಹೆ ಏನೆಂದರೆ, ಈ ನಿರುದ್ಯೋಗ ಸಮಸ್ಯೆಯನ್ನು ಎಜುಕೇಟೆಡ್, ಅನ್‌ಎಜುಕೇಟೆಡ್, ಸ್ಕಿಲ್ಡ್ ಅಣ್ ಎಂಪ್ಲಾಯೀಸ್ ಎಂಬುದಾಗಿ ಮೂರು ಪಂಗಡಗಳಾಗಿ ವಿಭಾಗಮಾಡಬೇಕು. ಆಮೇಲೆ ಯಾರ್ಯಾರಿಗೆ ಅದರಲ್ಲಿ ಯಾವ್ಯಾವ ರೀತಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕೋ ಆ ರೀತಿಯಲ್ಲಿ ಅವಕಾಶವನ್ನು ಮಾಡಿಕೊಡಬೇಕು. ಇದಕ್ಕಾಗಿ ನಮ್ಮಲ್ಲಿ ಹಣದ ಕೊರತೆ ಇದ್ದರೆ ಅದನ್ನು ಮೊಟ್ಟಮೊದಲನೆಯು ದಾಗಿ ತಗ್ಗಿಸಬೇಕು. ಒಟ್ಟಿನಲ್ಲಿ ಈ ನಿರುದ್ಯೋಗ ಸಮಸ್ಯೆಯನ್ನು ಪೂರ್ಣವಾಗಿ ಕೊನೆಗಾಣಿ ಸುವುದಕ್ಕೆ ತಕ್ಕ ಪ್ರಯತ್ನಗಳನ್ನು ಆದಷ್ಟು ಜಾಗ್ರತೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಬಗ್ಗೆ ಮಾತನಾಡುವುದಾದರೆ, ಈ ಬಾಬಿಗೆ ಕೊಡತಕ್ಕ ಹಣ ಬಹಳ ವ್ಯರ್ಥ ಆಗುತ್ತಿದೆ. ಕಂಟ್ರಾಕ್ಟರುಗಳು ಮತ್ತು ಅಧಿಕಾರಿಗಳು ಇವರ ಮಧ್ಯೆ ಅನೇಕ ವ್ಯವಹಾರಗಳು ನಡೆಯುತ್ತಿವೆ. ಇವತ್ತು ಸಾವಿರಾರು ಅಥವಾ ಲಕ್ಷಾಂತರ ರೂಪಾಯಿಗಳಲ್ಲಿ ಕಟ್ಟತಕ್ಕ ಅನೇಕ ಕಾಮಗಾರಿಗಳು ಕೇವಲ ಎರಡು ಮೂರು ತಿಂಗಳುಗಳಲ್ಲಿ ಹಾಳಾಗಿ ಹೋಗುತ್ತಿವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಜಿಲ್ಲೆಯೊಳಗೆ ಡಿಸೆಂಬರ್ ತಿಂಗಳಲ್ಲಿ ಒಂದು ಕಟ್ಟಡವನ್ನು ಕಟ್ಟಬೇಕೆಂದು 10 ಸಾವಿರ ರೂಪಾಯಿಗಳನ್ನು ಕೊಡಲು ಮಾರ್ಚಿ ತಿಂಗಳ ಕೊನೆಯೊಳಗೆ ಒಂದು ಆದೇಶವನ್ನು ಕೊಟ್ಟರು. ಆ ಕಟ್ಟಡದಲ್ಲಿ ಮಳೆಯಿಂದ ಅತಿಯಾಗಿ ಸೋರುತ್ತಿತ್ತು. ಆ ಕಾಮಗಾರಿ ಪೂರ್ತಿಯಾಗಿ ಜಾಗ್ರತೆ ಮಾಡದಿದ್ದರೆ ಹಣವನ್ನು ಕೊಡುವು ದಿಲ್ಲವೆಂದು ಒಂದು ಪ್ರಕಟಣೆಯನ್ನು ಮಾಡಿದರು. ಅಲ್ಲಿ ಒಂದು ಸ್ಕೂಲನ್ನು ತೆಗೆಯುತ್ತೇವೆಂದು ಹೇಳಿದ್ದರು. ಅಷ್ಟರೊಳಗೆ ಆ ಕಟ್ಟದ ಮೇಲ್ಭಾಗ ಕೆಳಗೆ ಬಂತು. ಅಂಥಾದ್ದಕ್ಕೆ ಹಣವನ್ನು ಒದಗಿಸಿದರೂ ಏನೂ ಪ್ರಯೋಜನವಾಗಿಲ್ಲ. ನಿಧಾನವಾಗಿ ಆಗತಕ್ಕ ಕೆಲಸಕಾರ್ಯಗಳಿಗೆ ಇಷ್ಟು ಹಣವನ್ನು ಮಾರ್ಚಿ ತಿಂಗಳ ಕೊನೆಯೊಳಗೆ ಖರ್ಚುಮಾಡುವುದು ಬೇಡ. ಇದರಿಂದಲೇ ದೇಶದ ಹಣನಷ್ಟವಾಗುತ್ತಿದೆ ಮತ್ತು ಈ ದೇಶದ ಹಣದಿಂದ ಆಗತಕ್ಕ ಕೆಲಸಗಳು ಸರಿಯಾಗಿ ಆಗುವುದಿಲ್ಲ.

ಕೊನೆಯದಾಗಿ, ಪೆನ್‌ಷನ್‌ದಾರರ ಬಗ್ಗೆ ಒಂದು ಮಾತನ್ನು ಹೇಳಬೇಕಾಗಿದೆ. ಹಿಂದಿನ ಕಾಲದಲ್ಲಿ ದುಡಿದಂಥ ಜನರ ಕಡೆ ಸರ್ಕಾರ ಅಷ್ಟಾಗಿ ಗಮನ ಕೊಡುತ್ತಾ ಇಲ್ಲ. ಸರ್ಕಾರದ ನೌಕರರಿಗೆ ಈಗ ಅವರ ಕಷ್ಟಗಳಿಗೆ ಸರಿಯಾಗಿ ಜೀವನ ವೆಚ್ಚ ಅತಿಯಾಗುವುದರಿಂದ ಜಾಸ್ತಿಯಾಗಿ ಹಣವನ್ನು ಕೊಡುತ್ತಿದ್ದಾರೆ. ಅದೇ ರೀತಿಯಲ್ಲಿ ಹಿಂದೆ ದುಡಿದಂಥ ಜನ ನಮ್ಮನ್ನು ವಿದ್ಯಾವಂತರನ್ನಾಗಿ ಮಾಡಿ ದೇಶಕ್ಕೋಸ್ಕರ ಕಷ್ಟಪಟ್ಟು ಜನಪ್ರಿಯರಾಗಿರುವುದರಿಂದ ಅವರ ಬಗ್ಗೆಯೂ ಸರ್ಕಾರದವರು ನಿಜವಾಗಿ ಒಳ್ಳೆಯ ರೀತಿಯಿಂದ ವರ್ತಿಸಬೇಕು. ಅವರ ಬಗ್ಗೆ ಕನಿಕರವೂ ಬೇಕು. ಅವರ ಜೀವನ ಮಟ್ಟವನ್ನೂ ಸಹ ಜಾಸ್ತಿಮಾಡಬೇಕೆಂದು ನಾನು ಸರ್ಕಾರದವರನ್ನು ಕೇಳಿ ಕೊಳ್ಳುತ್ತೇನೆ.

ಇಷ್ಟು ಹೇಳುವುದಕ್ಕೆ ನನಗೆ ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರಿಗೆ ನಾನು ಆಭಾರಿಯಾಗಿ ದ್ದೇನೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†Sri AMAREGOWDA CHANNANAGOWDA (Sindhnoor).—Mr. Speaker, Sir, The Budget presented by the Hon'ble Finance Minister looks very beautiful but actually it is not so. I would like to call it as Shylock's Budget. Government is interested more in its revenues than the welfare of the people. For example, the expenditure incurred on minor and major irrigation is stupendous. Take my own area which comes under the Tungabhadra Project. The Tungabhadra Project covers more than 2 lakhs acres including light irrigation, heavy irrigation and sugar cane cultivation. Out of 2 lakhs acres, only 40 thousand acres have been developed. Unfortunately, in 1956 water level was less, and on account of the fact that channels were not provided to the places where water was needed, water was not available. Still the penal law is set in motion and water rate is collected. So, as I said at the Outset, Government care more for their revenues than the grievances and handicaps of the people. They demand water cess from the whole area. This is borne out by the official records. As water level was less in 1956, out of 2,50,000 acres, only 45,000 acres developed. Very recently, they have commenced giving water through the field channels, to the concerned lands. Whatever be the project, Government are not entitled to the water tax until water was provided to the agriculturists and they grow crops from it. Added to this handicap, kindly see the conveniences provided to the agriculturists. Government did not provided them fertilisers. Credit facilities exist only for the bigger people and those who wield influence in offices. In these circumstances, how can peasants be expected to bring vast extents of land under irrigation and make the country self-sufficient in food? But the official records and statistics say that they have rendered lot of help to the agricultural class. But the present plight of the land in food is a living monument to the meagre help given by the Government. All the same, unfortunately Government is demanding water rate from the agriculturists; they had postponed its collection until March with a view to win the elections. For paddy lands, the peasants used to pay Rs. 3 land revenue. There was no water cess. A sum of Rs. 4 was levied for rabi crops and Rs. 6 for kharif crops. Without any change in the quantum of help given, without any improvement in the financial position of the ryot, without helping him with sufficient fertilizers, equipment, tractor, bullocks, Government is boasting that they have helped the agriculturists. Under these circumstances, all that the Government has been telling is bogus; and the collection of water cess is against their conscience. I shall read out the very resolution passed at the 1934 Session of the All-India Congress held at Lahore which is as follows:

> "The Congress is of the opinion that the financial burdens, directly or indirectly, imposed on India by the foreigner or such administration, Free India cannot be expected to bear. The Congress therefore, records its opinion for the information of the concerned and assures Independent India that it would be strictly subjected to investigation by an indepe dment tribunal."

Therefore, in the light of this Resolution, the levy of the water cess offends the constitutional spirit. Notwithstanding this, Government in season and out of season are laying emphasis on their policy of bringing out a Welfare State in the country. There is no synthetic connection between the Administration and planning. For example, take wells to be dug for irrigation purposes. Formerly, they used to give Rs. 3,000 at the maximum as loan. But, there are wells which cost Rs. 10,000 to 12,000. So, the sum of Rs. 3,000 was quite insufficient for such costly wells. For lack of funds, many wells could not be completed. Without foresight, they sanction meagre loans. This is the development policy of the Government? No doubt they are increasing the subsidy amount. But, whether it can solve the problem on hand, is the question. On the other hand, there are wells which can be dug for Rs. 2 or 3 thousands and there are instances where they have been advanced Rs. 10 thousand. Without proper investigation, if loans are indiscriminately given like this, what should happen to the financial position of the State? This is the kind of planning that we see here. I have to go on repeating that this is nothing but Shylock's budget as Government is keen more on collecting its revenues than looking to the welfare of its people. Government are seen often pleading the excuse of famines for failure of their policies. In India famines have occurred every where and they are no exception to the Mysore State. No doubt, the worthy Finance Ministry has informed us that sufficient funds have been provided to meet famine conditions. But I wonder whether Government has the requisite machinery to satisfy itself that those funds are properly utilised. I am afraid that this money does not actually reach the needy; it is going to fill the pockets of the money lender to make up his interest. It is very regretable to note that the price of paddy which was nearly Rs. 12, has shot up to Rs. 30. The greater part of India is inhabited by peasants and labourers but see the treatment they are getting. The labourers of the Hutti Gold Mines went on three months' strike demanding an increase of Rs. 5 in rent allowance. The Government could not meet even this small request of the workers. If the Hon'ble Members on the opposite side feel helpless to imprve the condition of the working class, they will do well to co-operate with the opposition parties in removing the obstacles in the way of obtaining loans in the Tahsildar's office, etc. Unless, they co-operate with the Opposition and take their advice, nothing can be done to ameliorate the condition of the masses. I would like to conclude my speech with my opening sentence that this Budget is a Shylock's Budget, more intent on increasing the revenues of the Government than helping the people.

†ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ 1967–68 ನೇ ಸಾಲಿಗೆ ಸರ್ಕಾರದ ಪರವಾಗಿ ಮಾನ್ಯ ಹಣಕಾಸಿನ ಮಂತ್ರಿಗಳು ಈಗಾಗಲೇ ಹಣಕಾಸಿನ ಮುಂಗಡ ಪತ್ರವನ್ನು ಈ ಸಭೆಯ ಮುಂದೆ ಮಂಡಿಸಿದ್ದಾರೆ. ಅವರು ಮಂಡಿಸಿರತಕ್ಕ, ಮುಂಗಡ ಪತ್ರದಲ್ಲಿ ಅವರು 1967–68 ನೇ ಸಾಲಿಗೆ ಇಟ್ಟಿರತಕ್ಕ ಹಣದಲ್ಲಿ ಎಪ್ರಿಲ್, ಮೇ, ಜೂನ್, ಮತ್ತು ಜುಲೈ ಈ ನಾಲ್ಕು ತಿಂಗಳಿಗೆ ಹೆಚ್ಚು ಕಡಮೆ 1/3 ಭಾಗಕ್ಕಿಂತ ಹೆಚ್ಚು

(ಶ್ರೀ ಎಸ್. ಪುಟ್ಟಸ್ವಾಮಿ)

ಕಣವನ್ನು ಈ ಸಭೆಯಮುಂದೆ ಇಟ್ಟಿದ್ದಾರೆ. ಈ ಬೇಡಿಕೆಗಳ ಬಗ್ಗೆ ನಾನು ಒಂದೆರಡು ವಿಷಯಗಳ ಮೇಲೆ ಪ್ರಸ್ತಾಪಮಾಡುವುದಕ್ಕೆ ಇಚ್ಛಿಸುತ್ತೇನೆ. ಈಗಾಗಲೇ ಮಾನ್ಯ ಹಣ ಕಾಸಿನ ಮಂತ್ರಿಗಳು ಮಾಡಿದಂತಹ ಬಡ್ಜೆಟ್ ಭಾಷಣದಲ್ಲಿ ಭೂಕಂದಾಯವನ್ನು ವಜಾಮಾಡ ತಕ್ಕ ವಿಚಾರ ಸರ್ಕಾರದ ಗಮನದಲ್ಲಿದೆ ಎಂದು ತಿಳಿಸಿದ್ದಾರೆ. ಕಳೆದ ಎರಡು ಮೂರು ವರ್ಷ ಗಳಿಂದ ಸರ್ಕಾರದವರು ಈ ಭೂಮಿಯನ್ನು ಪುನರ್ ಅಳತೆ ಮಾಡಿಸಿ ಭೂಮಿಯನ್ನು ಅನುಸರಿಸಿ ಕೊಂಡು ಭೂಮಿಗೆ ಅನುಗುಣವಾದ ಕಂದಾಯವನ್ನು ಪುನರ್ ವಿಮರ್ಶೆಮಾಡಿ ಹೊಸ ಕಂದಾಯದ ಒಂದು ಹೊಸರೇಟನ್ನು ಹಾಕುವುದಕ್ಕೆ ಈಗಾಗಲೇ ತೀರ್ಮಾನ ಮಾಡಿ ಜಾರಿಗೆ ಕೊಡತಕ್ಕ ಪರಿಸ್ಥಿತಿಯಲ್ಲಿ ಸರ್ಕಾರ ಇದೆ. ಸರ್ಕಾರದ ಪರವಾಗಿ ಭೂ ಕಂದಾಯವನ್ನು ವಸೂಲು ಮಾಡುವುದಕ್ಕೆ ಬಹಳ ವರ್ಷಗಳಿಂದ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮಾಧಿಕಾರಿ ಗಳು ಇದ್ದರು. ಈ ಗ್ರಾಮಾಧಿಕಾರಿಗಳನ್ನು ತೆಗೆದು ಹಾಕಿ ಸರ್ಕಾರದ ಪರವಾಗಿ ಕಂದಾಯ ವನ್ನು ವಸೂಲು ಮಾಡುವುದಕ್ಕೆ ವ್ಯವಸ್ಥೆ ಮಾಡತಕ್ಕಂಥ ಒಂದು ಕೆಲಸವನ್ನು ಸರ್ಕಾರದವರು ಅನೇಕ ವರ್ಷಗಳಿಂದ ಪರಿಶೀಲಿಸುತ್ತಿದ್ದರೂ ಕೂಡ, ಗ್ರಾಮಾಧಿಕಾರಿಗಳನ್ನು ತೆಗೆದುಹಾಕ ಬೇಕೆಂದು ತೀರ್ಮಾನವನ್ನು ಕೈಗೊಂಡರೂ ಕೂಡ ಭೂ ಕಂದಾಯವನ್ನು ವಸೂಲು ಮಾಡತಕ್ಕ ಕೆಲಸಕ್ಕೆ ಸರ್ಕಾರದವರು ನೇರವಾಗಿ ಗುಮಾಸ್ತರನ್ನು ಅಥವಾ ಕಂದಾಯವನ್ನು ವಸೂಲು ಮಾಡತಕ್ಕ ಸಿಬ್ಬಂದಿಯನ್ನು ನೇಮಕ ಮಾಡತಕ್ಕ ಕೆಲಸವನ್ನು ಇನ್ನೂ ಮಾಡದೇ ಇರತಕ್ಕದ್ದು ತುಂಬಾ ವಿಷಾದಕರ ಎಂದು ನಾನು ಹೇಳಲಿಚ್ಛಿಸುತ್ತೇನೆ. ಆ ಸಿಬ್ಬಂದಿ ವರ್ಗದವರನ್ನು ನೇಮಕ ಮಾಡತಕ್ಕ ಕೆಲಸವನ್ನು ಮುಂದಕ್ಕೆ ಹಾಕಿ, ಕಂದಾಯವನ್ನು ವಜಾ ಮಾಡತಕ್ಕ ಬಗ್ಗೆ ತೀರ್ಮಾನ ವನ್ನು ಕೈಗೊಳ್ಳುವ ವಿಷಯದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಹೇಳಿರು ವುದನ್ನು ನೋಡಿದರೆ ಬಹುಶಃ ಕಂದಾಯ ವಸೂಲು ಮಾಡತಕ್ಕ ಬಗ್ಗೆ ಸಿಬ್ಬಂದಿಯನ್ನು ನೇಮಕ ಮಾಡುವುದನ್ನು ಮುಂದಕ್ಕೆ ಹಾಕಿ ಅದನ್ನು ಕೈ ಬಿಡಬಹುದೇನೋ ಎನ್ನುವ ಶಂಕೆ ನನ್ನಲ್ಲಿ ಮೂಡಿದೆ. ಭೂ ಕಂದಾಯವನ್ನು ವಸೂಲು ಮಾಡುವುದಕ್ಕೆ ನೇಮಕ ಮಾಡತಕ್ಕ ಸಿಬ್ಬಂದಿಯನ್ನು ನೇಮಕ ಮಾಡುವುದನ್ನು ಪಂಚಾಯಿತಿಗಳಿಗೇ ವಹಿಸಿ, ಪಂಚಾಯಿತಿಯ ಕಾರ್ಯದರ್ಶಿಗಳನ್ನು ನೇಮಕಮಾಡತಕ್ಕ ಕೆಲಸವನ್ನು ಅವರಿಗೆ ವಹಿಸಬೇಕೆಂದು ಸರ್ಕಾರ ದವರು ಪರಿಯಾಲೋಚನೆ ಮಾಡುತ್ತಿದ್ದಾರೆ. ಸರ್ಕಾರದವರು ಇದನ್ನು ಆಗಿಂದಾಗ್ಗೆ ಹೇಳು ತ್ತಿದ್ದಾರೆ. ಇದನ್ನು ನೋಡಿದರೆ ಭೂಕಂದಾಯವನ್ನು ಸರ್ಕಾರದವರು ರದ್ದು ಮಾಡುವ ಸಂದರ್ಭದಲ್ಲಿ ಪಂಚಾಯಿತಿಯ ಕಾರ್ಯದರ್ಶಿಯನ್ನು ನೇಮಕ ಮಾಡುವ ಕೆಲಸವನ್ನು ಭೂ ಕಂದಾಯವನ್ನು ವಸೂಲು ಮಾಡುವುದಕ್ಕೆ ನೇಮಕ ಮಾಡತಕ್ಕ ಸಿಬ್ಬಂದಿಯನ್ನು ನೇಮಕ ಮಾಡುವುದನ್ನೂ ಮುಂದಕ್ಕೆ ಹಾಕಿ ಅದನ್ನು ಕೈ ಬಿಡಬಹುದು ಎಂದು ನನಗೆ ಹೆದರಿಕೆಯಾಗು ತ್ತದೆ. ಈಗಾಗಲೇ ಭೂ ಕಂದಾಯದಿಂದ ಬರತಕ್ಕ 7 ಕೋಟಿ ರೂಪಾಯಿಗಳಲ್ಲಿ ಶೇಕಡಾ 60 ಭಾಗ ಹಣವನ್ನು ಈಗ ಹಾಲಿ ಇರತಕ್ಕ ಕಾನೂನು ಪ್ರಕಾರ ಪಂಚಾಯಿತಿಗಳಿಗೆ ಮತ್ತು ತಾಲ್ಲೂಕು ಬೋರ್ಡ್‌ಗಳಿಗೆ ಹಂಚಿಕೆ ಮಾಡುತ್ತಿದ್ದಾರೆ. ಆ ಹಣವನ್ನು ಯಾವರೀತಿ ತುಂಬ ಬೇಕು ಎಂದು ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. ಮತ್ತು ಭೂ ಕಂದಾಯವನ್ನು ರದ್ದು ಮಾಡಿದ್ದಾದರೆ ಅದರಿಂದ ಬರತಕ್ಕ 7 ಕೋಟಿ ರೂಪಾಯಿಗಳನ್ನು ತುಂಬಲು ಭೂ ಕಂದಾಯದ ಬದಲು ವ್ಯವಸಾಯದ ಉತ್ಪನ್ನದಮೇಲೆ ಯಾವುದಾದರೂ ತೆರಿಗೆಯನ್ನು ಹಾಕಲು ಸರಕಾರದವರು ಪರಿಶೀಲನೆ ಮಾಡುತ್ತಿದ್ದಾರೆ. ಈ ವಿಷಯವನ್ನು ನಾವು ಆಗಾಗ್ಗೆ ಕೇಳುತ್ತಿ ದ್ದೇವೆ. ಈ ಸಂದರ್ಭದಲ್ಲಿ ಸರ್ಕಾರದವರು ಭೂ ಕಂದಾಯವನ್ನು ರದ್ದುಮಾಡಿ ವ್ಯವಸಾಯದ ಉತ್ಪನ್ನದ ಮೇಲೆ ತೆರಿಗೆಯನ್ನುಹಾಕಿ, ಅದನ್ನು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ರೀತಿಯಲ್ಲಿ ಹಾಕತಕ್ಕಂಥ ಒಂದು ತೀರ್ಮಾನವನ್ನು ಸರ್ಕಾರದವರು ಮಾಡುವುದಾದರೆ ಅದರಿಂದ ರೈತರಿಗೆ

ತುಂಬಾ ತೊಂದರೆಯಾಗುತ್ತದೆ. ಸರ್ಕಾರದವರು ಭೂ ಕಂದಾಯವನ್ನು ರದ್ದು ಮಾಡುವುದಾದರೆ. ಅದರಿಂದ ಬರುತ್ತಿದ್ದ ಹಣವನ್ನು ತುಂಬಬೇಕಾದರೆ ಒಂದು ಹೊಸ ಪದ್ಧತಿಯನ್ನು ಅನುಸರಿಸಿದ ಪಕ್ಷದಲ್ಲಿ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ರೀತಿಯಲ್ಲಿ ಒಂದು ತೆರಿಗೆಯನ್ನು ಹಾಕತಕ್ಕಂಥ ಒಂದು ನಿಯಮವನ್ನು ಇಟ್ಟುಕೊಂಡರೆ 100 ಕ್ಕೆ 75 ರಷ್ಟು ಜನ ರೈತರಿಗೆ ಅಥವಾ ಕೊನೆಯಪಕ್ಷ 100 ಕೆ 50 ರಷ್ಟು ಜನ ರೈತರಾಗಿದ್ದರೂ ಹೊಸ ಪದ್ಧತಿಯ ಪ್ರಕಾರ ಅಗ್ರಿಕಲ ಚರಲ್ ಇನ್‌ಕಂ ಟ್ಯಾಕ್ಸ್ ಹಾಕತಕ್ಕಂಥ ಪದ್ಧತಿಯನ್ನು ಸರ್ಕಾರದವರು ಯೋಚನೆ ಮಾಡುವ ಹಾಗೆ ಕಾಣುತ್ತದೆ. ಆಗ ಶೇಕಡ 50 ಜನರು ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ಕೊಡತಕ್ಕ ಪ್ರಮೇಯ ಬಂದು, ಅದರ ಲೆಕ್ಕವನ್ನು ಇಡುವುದಕ್ಕೆ ಸರ್ಕಾರದ ಪರವಾಗಿ ಅಧಿಕಾರಿಗಳನ್ನು ನೇಮಿಸಬೇಕಾಗುತ್ತದೆ. ಆ ಅಧಿಕಾರಿಗಳಿಂದ ರೈತರಿಗೆ ಆಗತಕ್ಕಂಥ ತೊಂದರೆಯನ್ನು ನಿವಾರಣೆ ಮಾಡತಕ್ಕ ಜವಾಬ್ದಾರಿಯನ್ನೂ ಸರ್ಕಾರದವರು ವಹಿಸಬೇಕಾಗುತ್ತದೆ. ಸರ್ಕಾರದವರು ಭೂ ಕಂದಾಯವನ್ನು ರದ್ದು ಮಾಡಿ ಅದಕ್ಕೆ ಬದಲಾಗಿ ಯಾವ ರೂಪದಲ್ಲಿ ಕಂದಾಯವನ್ನು ಹಾಕುತ್ತಾರೆಂಬುದು ನಿರ್ದಿಷ್ಟವಾಗಿ ಗೊತ್ತಿಲ್ಲ. ಅಗ್ರಿಕಲ್‌ಚರಲ್ ಇನ್‌ಕಂ ಟ್ಯಾಕ್ಸ್ ರೂಪದಲ್ಲಿ ಆ ಒಂದು ಕಂದಾಯವನ್ನು ವಿಧಿಸಬೇಕು ಎಂದು ಸರ್ಕಾರದವರು ಪ್ರಯತ್ನ ಮಾಡಿದ ಪಕ್ಷದಲ್ಲಿ ಅದರಿಂದ ರೈತರಿಗೆ ತೊಂದರೆಯಾಗುತ್ತದೆ. ಆದ್ದರಿಂದ ವ್ಯವಸಾಯವನ್ನೇ ನಂಬಿಕೊಂಡು ಜೀವನ ಮಾಡತಕ್ಕವರಿಗೆ ಕಂದಾಯದ ಹೊರೆಯನ್ನು ತಪ್ಪಿಸುತ್ತೇವೆ ಎನ್ನುವ ಒಂದು ಮಾತಿನಲ್ಲಿ ಇನ್ನೂ ಹೆಚ್ಚಿನ ಕಷ್ಟಗಳು ಮತ್ತು ತೊಂದರೆಗಳು ಬಂದ ಪಕ್ಷದಲ್ಲಿ ಅದನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರದವರು ಯಾವ ಯೋಚನೆಯನ್ನು ಮಾಡದೇ ಇದ್ದ ಪಕ್ಷದಲ್ಲಿ ಅದನ್ನು ಸರ್ಕಾರದವರು ತೀವ್ರವಾಗಿ ಯೋಚನೆ ಮಾಡಬೇಕೆಂದು ನಾನು ಸೂಚನೆ ಮಾಡಬಯಸುತ್ತೇನೆ.

ಇನ್ನು ನಮ್ಮ ಮೈಸೂರು ರಾಜ್ಯದಲ್ಲಿ ತಯಾರಾಗತಕ್ಕಂಥ ರೇಷ್ಮೆಗೆ ಒಳ್ಳೆಯ ಹೆಸರು ಇದೆ. ಇಡೀ ಇಂಡಿಯಾದೇಶದಲ್ಲೇ ಮೈಸೂರು ರೇಷ್ಮೆ ಎಂದು ಪ್ರಖ್ಯಾತಿಯನ್ನು, ಒಂದು ಪ್ರಾಶಸ್ತ್ಯವನ್ನು ಪಡೆದಿದೆ ಎಂದು ಹೇಳುತ್ತಾರೆ. ಮೈಸೂರಿನಲ್ಲಿ ರೇಷ್ಮೆಗೆ ಸರ್ಕಾರದವರು ಆಗಾಗ್ಯೆ ಒಂದು ರೀತಿಯ ಸೌಲಭ್ಯವನ್ನು ಕೊಟ್ಟುಕೊಂಡು ಬಂದಿದ್ದಾರೆ. ಆದರೆ ಈಗ ರೇಷ್ಮೆ ಇಲಾಖೆಯನ್ನು ಕೈಗಾರಿಕಾ ಇಲಾಖೆಗೆ ಸೇರಿಸಿದ್ದಾರೆ. ಇದರಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಗಳಿಗೆ ಸರ್ಕಾರದವರು ನೆರವನ್ನು ಕೊಟ್ಟ ರೀತಿಯಲ್ಲಿ ಸಣ್ಣ ಪುಟ್ಟ ಕೈಗಾರಿಕೆಗಳ ಪ್ರಗತಿಗೆ ಪ್ರಾಮುಖ್ಯತೆಯನ್ನು ಕೊಟ್ಟಂತೆ ನನಗೆ ಭಾಸವಾಗುವುದಿಲ್ಲ.

ಅನೇಕ ಸಂದರ್ಭಗಳಲ್ಲಿ ರೇಷ್ಮೆ ವ್ಯವಸಾಯವನ್ನು ನಂಬಿ, ರೇಷ್ಮೆ ಕೈಗಾರಿಕೆಯಲ್ಲಿ ತೊಡಗಿರತಕ್ಕ ಜನಗಳು ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ಇಲಾಖೆಯವರಿಗೆ ಮನವಿಗಳನ್ನು ಆಗಾಗ್ಗೆ ಸಲ್ಲಿಸಿದ್ದಾರೆ. ರೇಷ್ಮೆ ಕೈಗಾರಿಕೆಯಲ್ಲಿ ಒಂದು ಹಂತದವರೆಗೂ ಅದನ್ನು ವ್ಯವಸಾಯ ಎಂದು ಕರೆಯಬೇಕು. ಹಿಪ್ಪನೇರಳೆ ಸೊಪ್ಪನ್ನು ಬೆಳೆಯತಕ್ಕ ಒಂದು ಹಂತವನ್ನು ವ್ಯವಸಾಯ ಇಲಾಖೆಗೆ ವರ್ಗ ಮಾಡಿ. ಇಂದು ವ್ಯವಸಾಯಕ್ಕೆ ಯಾವ ರೀತಿಯಲ್ಲಿ ಸುಧಾರಿಸಿದ ಬೀಜ, ಪೈರು, ಇವುಗಳನ್ನು ಒದಗಿಸತಕ್ಕ ಜವಾಬ್ದಾರಿಯನ್ನು ಹೊತ್ತುಕೊಂಡಿದೆಯೋ ಅದೇ ರೀತಿಯಲ್ಲಿ ಹಿಪ್ಪನೇರಳೆ ವ್ಯವಸಾಯದಲ್ಲಿ ಕೂಡ ವಹಿಸಿ ಡಿಮಾನ್‌ಸ್ಟ್ರೇಷನ್ ಫಾರಂಗಳನ್ನು ಮಾಡಿ ಸುಧಾರಿತ ರೀತಿಯಲ್ಲಿ ಸೊಪ್ಪನ್ನು ಬೆಳೆಯತಕ್ಕ ಕಾರ್ಯಕ್ರಮವನ್ನು ವ್ಯವಸಾಯ ಇಲಾಖೆಗೆ ಸೇರಿಸಬೇಕು. ರೇಷ್ಮೆ ಗೂಡುಗಳನ್ನು ಬೆಳೆಯುತಕ್ಕ ಹಂತದವರೆಗೂ ರೇಷ್ಮೆ ಇಲಾಖೆಗೆ ಸೇರಿರುವ ಆ ಹಂತವನ್ನು ವ್ಯವಸಾಯ ಇಲಾಖೆಗೆ ಸೇರಿಸಿ ವ್ಯವಸಾಯಕ್ಕೆ ಎಷ್ಟೊಂದು ಪ್ರಾಶಸ್ತ್ಯವನ್ನು ಕೊಡುತ್ತಿದ್ದಾರೆಯೋ ಅಷ್ಟು ಪ್ರಾಶಸ್ತ್ಯವನ್ನು ರೇಷ್ಮೆ ಹುಳ ಸಾಕತಕ್ಕ ಹಿಪ್ಪನೇರಳೆ ಸೊಪ್ಪನ್ನು ಬೆಳೆಯತಕ್ಕ ವ್ಯವಸಾಯಕ್ಕೆ ಕೊಡಬೇಕೆಂದು ಸರ್ಕಾರದಲ್ಲಿ ಅನೇಕ ಸಂದರ್ಭಗಳಲ್ಲಿ ಮನವಿ ಮಾಡಿಕೊಂಡಿದ್ದರೂ ಕೂಡ ಆ ಮನವಿಯನ್ನು

(ಶ್ರೀ ಎಸ್. ಪುಟ್ಟಸ್ವಾಮಿ)

ಸರ್ಕಾರದವರು ಪರಿಶೀಲಿಸಿಲ್ಲ, ಅದು ಅವರ ಗಮನದಲ್ಲಿ ಬಂದಿಲ್ಲ ಎಂದು ಹೇಳುವುದಕ್ಕೆ ವಿಷಾದ ಪಡುತ್ತೇನೆ.

ಅಧ್ಯಕ್ಷರು.—ನನಗೆ ಒಂದು ನೋಟ್ ಬಂದಿದೆ. ಅದನ್ನು ಸಭೆಯ ಗಮನಕ್ಕೆ ತರುತ್ತೇನೆ. The member may kindly resume his seat.

"ಒತ್ತಾಯದ ಮೇಲೆ ಮಾತನಾಡುವವರು ಹೆಚ್ಚು ವೇಳೆ ಉಪಯೋಗಿಸುತ್ತಿದ್ದಾರೆ. ಸಭ್ಯ ರೀತಿಯಿಂದ ನಡೆದುಕೊಳ್ಳುವವರಿಗೆ ಕಷ್ಟವಾಗುತ್ತದೆ. ಕಾರಣ ದಯಮಾಡಿ ವಿಚಾರಿಸಬೇಕಾಗಿ ಕೇಳುತ್ತೇನೆ."

The House will now stand adjourned to reassemble after half-an-hour.

The House adjourned for Recess at Three of the Clock and reassembled at Thirty Minutes past Three of the Clock.

BUSINESS OF THE HOUSE

[Mr. SPEAKER—in the Chair.]

Mr. SPEAKER.—How long this debate is to go on? I suppose it can be finished to-day or at the latest, to-morrow.

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಹುಲಿಯೂರು ದುರ್ಗ).—ನಾಳೆ ಸಾಯಂಕಾಲದ ಒಳಗಾಗಿ ನಮ್ಮ ಮುಂದೆ ಇರುವ ಬೇಡಿಕೆಗಳನ್ನು ಪಾಸ್ ಮಾಡಿ, ನಾಳೆ ಸಾಯಂಕಾಲ ಅಪ್ರೋಪ್ರಿಯೇಷನ್ ಬಿಲ್ಲನ್ನು ಮಂಡಿಸಬಹುದು. 29ನೇ ತಾರೀಖು ಅಪ್ರೋಪ್ರಿಯೇಷನ್ ಬಿಲ್ಲನ್ನು ಚರ್ಚೆಗೆ ತೆಗೆದುಕೊಂಡು ಪಾಸ್ ಮಾಡಬಹುದು. 30ನೇ ತಾರೀಖು ಶ್ರವಣಬೆಳಗೊಳದಲ್ಲಿ ಮಹಾಮಸ್ತಕಾಭಿಷೇಕವಿದೆ. ಅನೇಕ ಜನ ಸದಸ್ಯರು ಅಲ್ಲಿಗೆ ಹೋಗುವುದಕ್ಕೆ ಇಷ್ಟಪಡುತ್ತಾರೆ. ಆ ದಿನ ಅಧಿವೇಶನವಿಲ್ಲದಿರುವಂತೆ ಅವಕಾಶ ಮಾಡಿ ಕೊಟ್ಟರೆ 31ನೇ ತಾರೀಖು ಎರಡು ಮಸೂದೆಗಳನ್ನು ಪಾಸ್ ಮಾಡಬಹುದು. ಖಾಸಗಿ ನಿರ್ಣಯಗಳನ್ನು ನಾವು ಮುಂದೆ ಸೇರಿದಾಗ ಚರ್ಚೆಗೆ ತೆಗೆದುಕೊಳ್ಳಬಹುದು. ನನ್ನ ಸಲಹೆ ಈ ರೀತಿ ಇದೆ ಸ್ವಾಮಿ.

Mr. SPEAKER.—I suppose it is agreeable to the House. The debate will go on, on Vote on account to-day and tomorrow and by tomorrow it will be passed. The Appropriation Bill can be introduced tomorrow and there will be debate on 29th instant and it will be passed. On the 30th instant there is *Mahamastakabhisheka*. There will be no sitting on the 30th and the Hon'ble Member from that Constituency will make arrangements in this connection. On 31st instant there will be a sitting and two Bills that have been introduced will be taken up.

Sri L. SRIKANTIAH (Nanjangud).—It is better to close on the 29th itself since it may not be possible for members to attend the Assembly on the 31st.

MR. SPEAKER.—We have agreed to a certain thing. I cannot go on revising it. The Hon'ble Member may get into touch with some of the representatives atleast.

BUDGET ESTIMATES FOR 1967-68

VOTING ON DEMANDS FOR GRANTS

(*Vote on Accounts*)—Debate—(*Contd.*)

†ಶ್ರೀ ಎಚ್. ಬಿ. ಜ್ವಾಲನಯ್ಯ (ಹಾಸನ).—ಸನ್ಮಾನ್ಯ ಸಭಾಪತಿಗಳೇ, ಸರ್ಕಾರ 1967–68ನೇ ವರ್ಷದ ಆಯವ್ಯಯ ಪತ್ರವನ್ನು ಈ ಸಭೆಯ ಮುಂದೆ ಏನು ಮಂಡಿಸಿ ಅದಕ್ಕೆ ಅನುಮತಿಯನ್ನು ಕೇಳುತ್ತಿದೆ, ಅದರ ಬಗ್ಗೆ ನಾನು ನಾಲ್ಕು ಮಾತುಗಳನ್ನು ಹೇಳಬಯಸುತ್ತೇನೆ. ಈ ಆಯವ್ಯಯದಲ್ಲಿ ವ್ಯವಸಾಯಕ್ಕೆ ಪ್ರಾಮುಖ್ಯತೆಯನ್ನು ನಾವು ಕೊಟ್ಟಿದ್ದೇವೆ ಎಂಬುದಾಗಿ ಅವರು ಹೇಳುತ್ತಿದ್ದಾರೆ. ಆದರೆ ವ್ಯವಸಾಯಕ್ಕೆ ಇಲ್ಲಿಯವರೆಗೂ ಕೊಟ್ಟುಕೊಂಡು ಬಂದಿರುವ ಪ್ರಾಮುಖ್ಯತೆ ಏನಿದೆ ಅದರ ಅಭಿವೃದ್ಧಿ ಏನಿದೆ ಅದರ ಬಗ್ಗೆ ನಾವು ಸ್ವಲ್ಪ ಯೋಚಿಸಬೇಕಾಗಿದೆ. ಮುಂಚಿನಿಂದಲೂ ಕೂಡ ವ್ಯವಸಾಯಕ್ಕೆ ಪ್ರಾಮುಖ್ಯತೆ ಇಲ್ಲ. ನಮ್ಮ ದೇಶದಲ್ಲಿ ಹೆಚ್ಚಿನ ಆಸಕ್ತಿಯನ್ನು ವ್ಯವಸಾಯಕ್ಕೆ ಕೊಡಬೇಕಾದ್ದು ಕರ್ತವ್ಯ ಮಾತ್ರ ಅದ್ಯ ಧರ್ಮ. ಆದರೆ ಇಲ್ಲಿಯವರೆಗೂ ಅವರು ಮಾಡಿರುವ ವ್ಯವಸ್ಥೆಯಲ್ಲಿ ವ್ಯವಸಾಯದ ಬಗ್ಗೆ ಅಷ್ಟಾಗಿ ಗಮನವನ್ನು ತೆಗೆದುಕೊಳ್ಳದೆ ಇದ್ದುದರಿಂದ ಇಲ್ಲಿಯವರೆಗೂ ದೇಶದಲ್ಲಿ ಆಹಾರ ಅಭಾವ ಹೆಚ್ಚಾಯಿತು, ಆಹಾರದ ಅಭಾವಕ್ಕೆ ಪ್ರಕೃತಿಯ ವಿಕೋಪವೇ ಕಾರಣವೆಂದು ಹೇಳುತ್ತಿದ್ದಾರೆ. ಇದು ಸರಿಯಾದುದಲ್ಲ.

[MR. CHAIRMAN (DR. R. NAGAN GOWDA) in the Chair.]

ವಿಜ್ಞಾನವು ನಮ್ಮ ಸಹಾಯಕ್ಕೆ ಬರುವಂತೆ, ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿಕೊಂಡಿದ್ದೇ ಆದರೆ ಕೇವಲ 30 ಅಂಗುಲ 40 ಅಂಗುಲ ಮಳೆಯಾಗುವ ನಮ್ಮ ದೇಶದಲ್ಲಿ ಹೆಚ್ಚಿನ ಆಹಾರವನ್ನು ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾಗುತ್ತಿತ್ತು. ನಮ್ಮಲ್ಲಿ ಯಾವಾಗಲೂ ಹರಿಯುವಂಥ ಜೀವ ನದಿಗಳಿಗೆ ಕೊರತೆ ಇಲ್ಲ, ಭೂಮಿಯ ಗರ್ಭದಲ್ಲಿನ ಜಲನಿಧಿಗೆ ಕೊರತೆ ಇಲ್ಲ, ಅದನ್ನು ಉಪಯೋಗಿಸಿಕೊಳ್ಳುವ ರೀತಿಯಲ್ಲಿ ಸರಿಯಾದ ಕ್ರಮವನ್ನು ಅನುಸರಿಸದೇ ಇದ್ದುದೇ ಇಲ್ಲಿಯವರೆಗೆ ಆಹಾರಾಭಾವದ ಕಷ್ಟಕ್ಕೆ ಕಾರಣವಾಯಿತು ಎಂದರೆ ತಪ್ಪಾಗಲಾರದು. ನಮ್ಮಲ್ಲಿರುವ ನದಿಗಳ ನೀರನ್ನು ಇಲ್ಲಿರುವ ಕೆರೆಗಳಿಗೆ ತುಂಬಿಕೊಳ್ಳುವುದಕ್ಕೆ ವ್ಯವಸ್ಥೆಯನ್ನು ಮಾಡಿಕೊಂಡಿದ್ದರೆ, ನಮ್ಮಲ್ಲಿ ಹೆಚ್ಚಾಗಿ ಉತ್ಪತ್ತಿಯಾಗುವ ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಂಡು ನದಿಗಳ ನೀರನ್ನು ಕೆರೆಗಳಲ್ಲಿ ತುಂಬಿಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದರೆ ಇಲ್ಲಿಯವರೆಗೆ ಅಕ್ಕಿಯ ಅಭಾವ ಬರುವುದಕ್ಕೆ, ಆಹಾರ ಅಭಾವ ಬರುವುದಕ್ಕೆ ಅವಕಾಶ ಇರುತ್ತಿರಲಿಲ್ಲ. ಒಂದೊಂದು ಗ್ರಾಮಕ್ಕೂ ಎರಡೆರಡು ನೀರಾವರಿ ಬಾವಿಗಳನ್ನು ಮಾಡಿಸಿದ್ದರೆ ನಮ್ಮ ಆಹಾರ ಪರಿಸ್ಥಿತಿ ಸುಧಾರಣೆಯಾಗುತ್ತಿತ್ತು.

ಈಗ ಆಹಾರದ ಉತ್ಪಾದನೆಗೆ ಬೇಕಾಗಿರತಕ್ಕ ಬಹು ಮುಖ್ಯವಾಗಿ ಬೇಕಾಗಿರತಕ್ಕ ಇತರ ವಿಷಯಗಳನ್ನೂ ಕೂಡ ನಾವು ಯೋಚಿಸಬೇಕಾಗಿದೆ. ಆಹಾರವನ್ನು ಹೆಚ್ಚಾಗಿ ಬೆಳೆಯುವುದಕ್ಕೆ ನೀರು ಬೇಕೆ ಬೇಕು. ಎರಡನೆಯದಾಗಿ, ರೈತನಿಗೆ ಹಣವನ್ನು ಸಕಾಲದಲ್ಲಿ ವ್ಯವಸಾಯಕ್ಕೋಸ್ಕರ ಬೇಕಾದ ಸಾಮಗ್ರಿಗಳನ್ನು ಕೊಳ್ಳುವುದಕ್ಕೋಸ್ಕರವಾಗಿ ಒದಗಿಸಿಕೊಡಬೇಕಾದುದು ಆದ್ಯ ಕರ್ತವ್ಯವಾಗಿದೆ. ಈಗ ಇಷ್ಟು ಕೋಟಿ ರೂಪಾಯಿಗಳನ್ನು ಕೇಂದ್ರ ಬ್ಯಾಂಕಿನಿಂದ ವ್ಯವಸಾಯಾಭಿವೃದ್ಧಿಗಾಗಿ ಸೊಸೈಟಿಗಳಿಗೆ ಕೊಡುತ್ತಿದ್ದೇವೆಂದು ಹೇಳುತ್ತಾರೆ. ನಿಜವಾಗಿ ಆ ಹಣ ರೈತನಿಗೆ ಸಿಕ್ಕಬೇಕಾದರೆ ಎಷ್ಟು ಕಷ್ಟವಿದೆ ಎನ್ನುವುದನ್ನು ಯೋಚಿಸಬೇಕಾಗಿದೆ.

(ಡಾ. ನಾಗನಗೌಡ)

ರೈತನಾದವನು 500 ರೂಪಾಯಿಗಳನ್ನು ಸೊಸೈಟಿಗಳ ಮುಖಾಂತರ ಪಡೆಯಬೇಕಾದರೆ ಅವನು ಕೊಡಬೇಕಾದ ರಿಕಾರ್ಡುಗಳು, ಅವನು ಅಲೆಯಬೇಕಾದ ವಿಧಾನ ಇವುಗಳನ್ನೆಲ್ಲ ನೋಡಿದರೆ ರೈತನ ಸ್ಥಿತಿ ಚಿಂತಾಜನಕವಾಗಿದೆ. ಅವನಿಗೆ ಆಹಾರವನ್ನು ಹೆಚ್ಚು ಬೆಳೆಯಬೇಕು ಎನ್ನುವ ಆಸಕ್ತಿ ಕಡಮೆಯಾಗಿರುವುದಕ್ಕೆ ಸರ್ಕಾರವೇ ಕಾರಣ. ಇಲ್ಲಿಯವರೆಗೂ ಸೆಂಟ್ರಲ್ ಬ್ಯಾಂಕುಗಳಲ್ಲಿ ಇರುವಂಥ ಸಾಲದ ಮೊತ್ತ ಕೋಟ್ಯಾಂತರ ರೂಪಾಯಿಗಳಾಗಿವೆ. ಸಾಲವನ್ನು ಎಷ್ಟು ಕೊಟ್ಟರೂ ಕೂಡ ಬಾಕಿ ಬರದೆ ಇರಬೇಕಾದರೆ ಆ ಹಣ ಹೇಗೆ ವಿನಿಯೋಗವಾಯಿತು ಎನ್ನುವುದನ್ನು ನಾವು ಪರ್ಯಾಲೋಚಿಸಬೇಕಾಗಿದೆ. ರೈತನಿಗೆ ಸಕಾಲದಲ್ಲಿ ಸಲ್ಲಬೇಕಾದ ಹಣ ಅವನು ಗೊಬ್ಬರ ಕೊಳ್ಳುವುದಕ್ಕೋಸ್ಕರವಾಗಿ, ಉತ್ತಮವಾದ ಬೀಜವನ್ನು ಕೊಂಡುಕೊಳ್ಳುವುಕ್ಕೋಸ್ಕರವಾಗಿ, ಉಪಕರಣಗಳನ್ನು ಕೊಂಡುಕೊಳ್ಳುವುದಕ್ಕೋಸ್ಕರವಾಗಿ ಸಿಕ್ಕಿದ್ದರೆ ಆ ಹಣವನ್ನು ಅವನು ಸರಿಯಾಗಿ ವಿನಿಯೋಗಿಸುತ್ತಿದ್ದ.

ರೈತನಿಗೆ ಸಕಾಲದಲ್ಲಿ ಬರಬೇಕಾದ ಹಣ ಬರದೇ ಹೋದರೆ ಸಮಯ ಆದಮೇಲೆ ಬಂದ ಹಣ ಇತರ ವಿಧಾನದಲ್ಲಿ ವೆಚ್ಚವಾಗಿ ಅವನ ಆವಶ್ಯಕತೆಗಳನ್ನು ಪೂರೈಸಲಿಕ್ಕೆ ಆಗುವುದಿಲ್ಲ. ಆದ್ದರಿಂದ ಸಕಾಲದಲ್ಲಿ ಹಣವನ್ನು ಸುಲಭರೀತಿಯಲ್ಲಿ ರೈತನಿಗೆ ನೇರವಾಗಿ ಹೋಗುವಂತೆ ಮಾಡಬೇಕಾಗಿದೆ.

ಚೇರ್ಮನ್‌ರವರು.—ಯಾವರೀತಿಯಾಗಿ ರೈತನಿಗೆ ಏರ್ಪಾಡು ಮಾಡಬೇಕು ಎಂದು ಸೂಚನೆ ಕೊಡುತ್ತೀರಾ ?

ಶ್ರೀ ಹೆಚ್. ಬಿ. ಜ್ವಾಲನಯ್ಯ.—ರೈತನ ಆಧಾರದ ಮೇಲೆ ಏನು ದುಡ್ಡು ಕೊಡುತ್ತೀರೋ ಅದರಲ್ಲಿ ರಿಜಿಸ್ಟ್ರರ ಆಫೀಸಿನಲ್ಲಿ, ತಾಲ್ಲೂಕು ಆಫೀಸಿನಲ್ಲಿ ಒದಗಿಸುವ ರಿಕಾರ್ಡು ಏನು ಇದೆ ಅದನ್ನು ಒದಗಿಸುವುದರಲ್ಲಿ ಎಷ್ಟೋ ಹೋಗುತ್ತದೆ. ಅವನ ಜೊತೆಗೆ ಷಧಾರಿಗಳು ಇಲ್ಲದೇ ಹೋದರೆ ರಿಕಾರ್ಡುಗಳು ಸಿಕ್ಕುವುದಿಲ್ಲ. ಸರ್ಕಾರ ಅವನ ಹೆಸರಿನಲ್ಲಿ ಅಬಾದು ಮಾಡುವ ಜಮೀನು ಪಹಣಿ ರಿಕಾರ್ಡ್‌ನಲ್ಲಾಗಲಿ ಖಾತೆ ಮೇಲಾಗಲಿ ನೇರವಾಗಿ ಸಾಲ ಕೊಡುವ ರೀತಿಯಲ್ಲಿ ಸೊಸೈಟಿಗಳಿಗೆ ಆದೇಶ ಕೊಡಬೇಕು. ಅಲ್ಪಾವಧಿ ಸಾಲ ಕೊಡುವ ಸೊಸೈಟಿಗಳು ಏನು ಇವೆ ಒಂದು ಸೊಸೈಟಿಗೆ 100 ಜನ ಸದಸ್ಯರು ಇದ್ದರೆ 25 ಜನ ಸದಸ್ಯರು ಮರು ಪಾವತಿ ಮಾಡದೇ ಇದ್ದರೆ 75 ಜನರಿಗೂ ದುಡ್ಡು ಕೊಡದೇ ಇರುವ ಪರಿಸ್ಥಿತಿ ಇದೆ. ಸೆಂಟ್ರಲ್ ಬ್ಯಾಂಕಿನವರು ಇಂತಹ ಸಂದರ್ಭದಲ್ಲಿ ದುಡ್ಡು ಕೊಡುತ್ತಾ ಇಲ್ಲ. ಆದುದರಿಂದ 25 ಜನ ಸದಸ್ಯರು ಕೊಡಲಿಲ್ಲ ಎಂದರೆ 75 ಜನಕ್ಕೂ ಸಾಲ ಕೊಡದೇ ಇರುವ ರೀತಿ ಮಾಡುವುದು ಸಮಂಜಸವಲ್ಲ. ಇದನ್ನು ಸರಿಪಡಿಸಬೇಕು.

ಹಾರ್ಟಿಕಲ್ಚರ್ ವಿಷಯ, ಇದರ ಬಗ್ಗೆ ಮಲೆನಾಡು ಪ್ರದೇಶದಲ್ಲಿ ಅನೇಕ ಭೂಮಿಯಲ್ಲಿ ಪೈನ್‌ಆಪಲ್ ಬೆಳೆಯುವುದಕ್ಕೆ ಅತ್ಯುತ್ತಮ ವಾತಾವರಣ ಇದೆ ಎಂದು ಹೇಳುತ್ತೇನೆ; ಸಾವಿರಾರು ಎಕರೆ ಜಮೀನಿನಲ್ಲಿ ಹಾರ್ಟಿಕಲ್‌ಚರ್ ಡಿಪಾರ್ಟ್‌ಮೆಂಟ್ ಮುಖಾಂತರ ಪ್ರಯೋಗವನ್ನು ಮಾಡಿ ಉತ್ತಮ ದರ್ಜೆಯ Fine Apple ಅನಾನಸನ್ನು ಬೆಳೆದರೆ ಆರ್ಥಿಕ ಪರಿಸ್ಥಿತಿ ಮತ್ತು ಆಹಾರ ಪರಿಸ್ಥಿತಿ ಉತ್ತಮವಾಗುವುದರಲ್ಲಿ ಸಂಶಯ ಇಲ್ಲ.

ಅರಣ್ಯ ಇಲಾಖೆ:—ಅರಣ್ಯ ಇಲಾಖೆಯಲ್ಲಿ ಮೊನ್ನೆ ತಾನೇ ಹೇಳಿದ್ದೇನೆ. ರಬ್ಬರ್ ಪ್ಲಾಂಟೇಷನ್ನಿಗೆ ಬೇಕಾದಂಥ ಅಮೂಲ್ಯವಾದ 50ಸಾವಿರ ಎಕರೆ ಜಮೀನು ಈಗಾಗಲೇ ಇದ್ದು ಕೇವಲ 2 ಸಾವಿರ ಎಕರೆ ಜಮೀನಿನಲ್ಲಿ ರಬ್ಬರ್ ಪ್ಲಾಂಟೇಷನ್ ಮಾಡುವುದಕ್ಕೋಸ್ಕರ ಸರ್ಕಾರ ಪ್ರಯತ್ನ ಮಾಡುತ್ತಿದೆ ಎಂದು ಹೇಳಿದ್ದೀರಿ. ಇದು ಸರಿಯಾದ ಮಾರ್ಗವಲ್ಲ. 50ಸಾವಿರ ಎಕರೆ ಮಾಡುವುದಕ್ಕೆ ಸಾಧ್ಯ ಇಲ್ಲದಿದ್ದರೆ ಮಾಡುವುದಕ್ಕೆ ಸಾಧ್ಯವಾದ ಕಂಪನಿಗಳಿಗೆ

ಕೊಟ್ಟು ಬೇಗ ರಬ್ಬರ್ ಪ್ಲಾಂಟೇಷನ್ ಬೆಳೆಸಿ ದೇಶದ ಆರ್ಥಿಕ ಸಂಪತ್ತು ಬೆಳೆಯಿಸುವುದಕ್ಕೆ ಅವಕಾಶವಾಗುತ್ತದೆ. ಮಲೆನಾಡು ಭೂಮಿಯ ಮಣ್ಣಿನ ಸಾರ ಮಳೆಯಲ್ಲಿ ಕೊಚ್ಚಿಹೋಗುತ್ತದೆ. ಕಾಡುಗಳಲ್ಲಿ ಬರಗಾಲದಲ್ಲಿ ಹುಲ್ಲಿಗೂ ಕಷ್ಟವಾಗುತ್ತದೆ. ಇದರ ಬಗ್ಗೆ ಸರ್ಕಾರ ಹೆಚ್ಚಿನ ಗಮನ ತೆಗೆದುಕೊಳ್ಳಬೇಕು.

ಚೇರ್ಮನ್ ಅವರು.—ಏನು ಮಾಡಬೇಕೆಂದು ಹೇಳುತ್ತೀರಾ ?

ಶ್ರೀ ಹೆಚ್. ಬಿ. ಜ್ವಾಲನಯ್ಯ.—ಹೆಚ್ಚು ಸಾರ ಕೊಚ್ಚಿಕೊಂಡು ಹೋಗುವುದನ್ನು ತಡೆಗಟ್ಟಲು 10-12 ಯೂಕಲಿಪ್ಟಸ್ ಸರ್ವೆ ಗಿಡಗಳನ್ನು ನೆಟ್ಟು ಕೊಚ್ಚಿಕೊಂಡು ಹೋಗದಹಾಗೆ ಬೆಳೆಸುವುದು ಅತ್ಯುತ್ತಮ. ಸಾಫ್ಟ್ ಉಡನ್ನು ಮ್ಯಾಚ್ ಇಂಡಸ್ಟ್ರೀಗೆ ಬೇಕಾದಷ್ಟು ಕಡಿದು ಉಪಯೋಗಿಸುತ್ತಿದ್ದಾರೆ. ಜಂಗಲ್ ಉಡ್ ಹೀಗೆ ಕಡಿದು ಉಪಯೋಗಿಸುತ್ತಿದ್ದಾರೆ. ಆದರೆ ರೀ-ಪ್ಲಾಂಟೇಷನ್ ಮಾಡುತ್ತಾ ಇಲ್ಲ. ಈ ರೀತಿ ಮಾಡುತ್ತಾ ಹೋದರೆ ಕೆಲವೇ ವರ್ಷಗಳಲ್ಲಿ ವನವೆಲ್ಲಾ ಹಾಳಾಗಿ ಹೋಗುತ್ತದೆ. ಗಿಡಗಳು ನಿರ್ನಾಮವಾಗಿ ಮಳೆ ಅಭಾವಕ್ಕೆ ಕಾರಣವಾಗುತ್ತದೆ ಎಂದು ಅನೇಕರು ಹೇಳುತ್ತಾರೆ. ಆದುದರಿಂದ ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸಿ ರೀ ಪ್ಲಾಂಟೇಷನ್ ಮಾಡುವ ಕಾರ್ಯಕ್ರಮವನ್ನು ಕೈಗೊಳ್ಳಬೇಕು.

ಕಮ್ಯೂನಿಟಿ ಡೆವಲಪ್‌ಮೆಂಟ್ ಬ್ಲಾಕ್ಸ್ ವಿಚಾರ: ಇದರ ಬಗ್ಗೆ ಎರಡು ಮಾತು ಹೇಳುವುದಾದರೆ, ನ್ಯಾಷನಲ್ ಡೆವಲಪ್‌ಮೆಂಟ್ ಬ್ಲಾಕ್ಸ್ ಡೂಪ್ಲಿಕೇಟ್ ಆಗಿದೆ ಎಂದು ಹೇಳಿದರೆ ತಪ್ಪಾಗಲಾರದು. ನಮ್ಮ ದೇಶದಲ್ಲಿ ಪಿ. ಡಬ್ಲ್ಯು. ಡಿಪಾರ್ಟ್‌ಮೆಂಟ್, ಹೆಲ್ತ್ ಡಿಪಾರ್ಟ್‌ಮೆಂಟ್, ಮೆಡಿಕಲ್ ಡಿಪಾರ್ಟ್‌ಮೆಂಟ್, ಎಜುಕೇಷನ್ ಡಿಪಾರ್ಟ್‌ಮೆಂಟ್ ಇಷ್ಟು ಇವೆ. ಸ್ಪೆಷಲೈಸ್ಡ್ ಡಿಪಾರ್ಟ್‌ಮೆಂಟ್ ಇವೆ. ಆದರೆ ಮತ್ತೊಂದು ಸಣ್ಣ ಸರ್ಕಾರ ರಚನೆ ಮಾಡಿ ಹೆಚ್ಚಿಗೆ ಹಣವನ್ನು ಖರ್ಚುಮಾಡುವುದಕ್ಕೆ ಅವಕಾಶವಾಗಿದೆ. ಅದಕ್ಕೆ ಬದಲಾಗಿ ಎಕ್ಸ್‌ಟೆನ್‌ಷನ್ ಬ್ಲಾಕ್ ತೆಗೆದು ನೇರವಾಗಿ ಸ್ಪೆಷಲೈಸ್ಡ್ ಡಿಪಾರ್ಟ್‌ಮೆಂಟ್ ಏನು ಇವೆ ಅವುಗಳ ಮುಖಾಂತರವಾದರೂ ಹಣವನ್ನು ಖರ್ಚುಮಾಡಿದರೆ ನಿಜವಾಗಿಯೂ ವೆಚ್ಚವು ಕಡಿಮೆಯಾಗುತ್ತದೆ. ಕೆಲಸ ಉತ್ತಮವಾಗುತ್ತದೆ ಎಂದು ಹೇಳುವುದರಲ್ಲಿ ಸಂಶಯ ಇಲ್ಲ.

ಮೈಸೂರು ಸ್ಟೇಟ್ ಎಲೆಕ್ಟ್ರಿಸಿಟಿ ಬೋರ್ಡ್ ಎನ್ನುವುದು : ಇದೆ ಮೈಸೂರು ಸರ್ಕಾರದವರು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಾ ಇದ್ದಾರೆ. ಈ ಬೋರ್ಡಿಗೆ ಮಾರಾಟ ಮಾಡುತ್ತಿದ್ದಾರೆ. ಕೇವಲ ಕಾರ್ಪೊರೇಷನ್ ಮಾಡುವುದರಿಂದ ಕೇಂದ್ರ ಸರ್ಕಾರಕ್ಕೆ ಇದರ ಮೇಲೆ ಬರುವ ತೆರಿಗೆಯನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಇದರಿಂದ ಕಾರ್ಪೊರೇಷನ್ ಇದಕ್ಕೆ ಹೇರಳವಾದ ಹಣವನ್ನು ಸಾಲದ ರೂಪದಲ್ಲಿ ಕೊಟ್ಟಿದ್ದಾರೆ. ಸಾಲದ ರೂಪದಲ್ಲಿ ಕೊಟ್ಟಿರುವ ಹಣ ಬೇಕಾದಷ್ಟು ಕಟ್ಟಡಗಳು ವಗೈರೆಗೆ ಖರ್ಚಾಗಿದೆ. ಟ್ರಾನ್ಸ್‌ಮಿಷನ್ ಲೈನ್, ಮೆಷಿನರಿ ಮುಂತಾದುವಕ್ಕೆ ಖರ್ಚು ಮಾಡಿದ್ದೇವೆ ಎಂದು ಸರ್ಕಾರ ಹೇಳಿದೆ. ಈಗ ಜನತೆಗೆ ಪ್ರತಿವರ್ಷದಲ್ಲೂ ಕೂಡ ವಿದ್ಯುಚ್ಛಕ್ತಿ ರೇಟು ಹೆಚ್ಚಾಗಿ ಹೋಗುತ್ತಾ ಇದೆ. ಅದಕ್ಕೆ ಒಂದು ಮಿತಿ ಇಲ್ಲದಂತೆ ಇದೆ. ಸಾಧಾರಣವಾಗಿ ಮನುಷ್ಯನ ಜೀವನ ನಿಜವಾಗಿಯೂ ಕಷ್ಟ ಪರಿಸ್ಥಿತಿಯಲ್ಲಿರುವಾಗ ವಿದ್ಯುಚ್ಛಕ್ತಿ ರೇಟು ಹೀಗೆ ಹೆಚ್ಚಾಗುತ್ತಾ ಇದ್ದರೆ ಅವನಿಗೆ ಬಹಳ ತೊಂದರೆಯಾಗುತ್ತವೆ. ಆದುದರಿಂದ ಅದನ್ನು ತಡೆಹಿಡಿಯುವುದಕ್ಕೆ ಪ್ರಯತ್ನ ಮಾಡಬೇಕು. ಎಷ್ಟು ಲಕ್ಷ ಜನ ಕಿಲೋವಾಟ್ಸ್ ಉತ್ಪತ್ತಿಯಾಗಿವೆ ಅದರಿಂದ ಕಡಿಮೆ ದರದಲ್ಲಿ ಒದಗಿಸಲಿಕ್ಕೆ ಪ್ರಯತ್ನ ಮಾಡಬೇಕು. ಇಲ್ಲದೇ ಇದ್ದರೆ ಜನತೆಗೆ ಅದರಿಂದ ಉತ್ತಮ ಅಭಿವೃದ್ಧಿ ಆಗಲಾರದು.

ಕೋ-ಅಪರೇಷನ್ ಡಿಪಾರ್ಟ್‌ಮೆಂಟ್ : ಇನ್ನು ಕೋ-ಅಪರೇಷನ್ ಡಿಪಾರ್ಟ್‌ಮೆಂಟ್ ಇವೆ. ಅವುಗಳ ಬಗ್ಗೆ ಆಯವ್ಯಯ ಪಟ್ಟಿಯಲ್ಲಿ ಹೇಳಬೇಕಾದರೆ ಎಷ್ಟು ಸೊಸೈಟಿಗಳನ್ನು ಪ್ರಾರಂಭ

(ಶ್ರೀ ಹೆಚ್. ಬಿ. ಜ್ವಾಲನಯ್ಯ)

ಮಾಡಿದ್ದೀರಿ ಮತ್ತು ಎಷ್ಟು ಸೊಸೈಟಿಗಳನ್ನು ಮುಚ್ಚಿದ್ದೀರಿ ಎಂದು ಹೇಳಬೇಕಾಗಿತ್ತು. ಈ ಸೊಸೈಟಿಗಳ ಮುಖಾಂತರ ಹಣ ವಿನಿಯೋಗಿಸುವ ಸರಿಯಾದ ಡೇಟ್ ವ್ಯವಸ್ಥೆ ಇಲ್ಲ. ಸರ್ಕಾರದಿಂದ ತೆಗೆದುಕೊಂಡಿರುವ ಹಣ ಮತ್ತು ಅದರ ವಿನಿಯೋಗದ ಬಗ್ಗೆ ಲೆಕ್ಕ ಪತ್ರಗಳ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸುತ್ತಾ ಇಲ್ಲ. ಎಷ್ಟೋ ಸಂಸ್ಥೆಗಳಲ್ಲಿ ಭ್ರಷ್ಟಾಚಾರ ಇರುವುದನ್ನು ಆಯಾಯ ಕ್ಷೇತ್ರದ ಜನರು ಸರ್ಕಾರದ ಗಮನಕ್ಕೆ ತಂದರೂ ಕೂಡ ಏತಕ್ಕೆ ಕಣ್ಣು ಮುಚ್ಚಿ ಕೊಂಡು ಇದೆ ಎಂಬುದನ್ನು ನೋಡಿದರೆ ಆಶ್ಚರ್ಯವಾಗಿ ಕಾಣುತ್ತದೆ. ಸೊಸೈಟಿಗಳ ದುರಾಡಳಿತ ನಿಲ್ಲಿಸುವುದಕ್ಕೆ ಸರ್ಕಾರಕ್ಕೆ ಶಕ್ತಿ ಸಾಮರ್ಥ್ಯ ಇಲ್ಲ ಎಂದು ಹೇಳಬೇಕಾಗಿದೆ.

ಮೇಜರ್ ಮತ್ತು ಮಿನಿಮಮ್ ಪ್ರಾಜೆಕ್ಟ್: ಬಗ್ಗೆ ಹೇಳುವುದಾದರೆ ಸರ್ಕಾರ ಹೆಚ್ಚಿನ ಆಸಕ್ತಿ ವಹಿಸಿ ತಕ್ಷಣ ಸಣ್ಣ ನೀರಾವರಿಯೋಜನೆಯನ್ನು ಕೈಗೊಂಡು ರೈತನ ಅಭಿವೃದ್ಧಿ ಯಾಗುವಂತೆ ಗಮನ ಕೊಡಬೇಕು. ಇದರಿಂದ ದೇಶಕ್ಕೂ ಕೂಡ ಆಹಾರದ ಕೊರತೆಯನ್ನು ಹೋಗಲಾಡಿಸುವುದಕ್ಕೆ ಪರಿಣಾಮಕಾರಿಯಾಗುತ್ತದೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳು ಏನು ಇದೆ ಅದನ್ನು ನಿಧಾನ ಮಾಡಿದರೂ ಸಹ ಈ ಸಣ್ಣ ನೀರಾವರಿಯ ಕಾರ್ಯಕ್ರಮವನ್ನು ಕೈಗೊಂಡು ಹೆಚ್ಚಿನ ಹಣವನ್ನು ಖರ್ಚು ಮಾಡಬೇಕಾಗಿತ್ತು. ಪ್ರತಿ ಗ್ರಾಮದಲ್ಲೂ ಕೂಡ ನೀರಾವರಿ ಬಾವಿಗಳನ್ನು ಹೆಚ್ಚಿಸಬೇಕು. ಹಾಸನ ಜಿಲ್ಲೆಯ, ಹೊಳೇನರಸಿಪುರದಲ್ಲಿ, ಅರಕಲಗೂಡಿನಲ್ಲಿ ಲಿಫ್ಟ್ ಇರಿಗೇಷನ್ ಸೊಸೈಟಿಗಳು ಇವೆ. ಹಳ್ಳದಲ್ಲಿ ಇರುವ ನೀರನ್ನು ಇತರ ಜಮೀನುಗಳಿಗೆ ನೀರಿನ ಸರಬರಾಜು ಮಾಡುತ್ತಾ ಇರುವುದರಿಂದ ಅಲ್ಲಿ ಅತ್ಯುತ್ತಮ ಬೆಳೆ ಬರುತ್ತಿದೆ. ಅದೇ ಪ್ರಯೋಗ ಎಲ್ಲಾ ಕಡೆ ಮಾಡಿದರೆ ಆಹಾರದ ಸಮಸ್ಯೆ ಬೇಗ ಪರಿಹಾರ ವಾಗುತ್ತದೆ. ದೊಡ್ಡ ದೊಡ್ಡ ಪ್ರಾಜೆಕ್ಟುಗಳಿಗೆ ಹೆಚ್ಚು ಹೆಚ್ಚು ಖರ್ಚು ಮಾಡುವುದರ ಬದಲಿಗೆ ಮೈನರ್ ಇರಿಗೇಷನ್ನಿಗೆ ಹೆಚ್ಚು ಖರ್ಚು ಮಾಡಬೇಕು ಎಂದು ಹೇಳುತ್ತೇನೆ.

ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ವಿಚಾರ: ಇಂಡಸ್ಟ್ರೀಸ್ ಡೆವಲಪ್‌ಮೆಂಟ್ ಕಾರ್ಪೊ ರೇಷನ್ ಎಂದು ಒಂದು ಸಂಸ್ಥೆಯನ್ನು ಸರ್ಕಾರ ರಚನೆ ಮಾಡಿದೆ. ಆ ಸಂಸ್ಥೆ ಅಲಂಕಾರಿಕ ಸಂಸ್ಥೆಯಾಗಿದೆ, ಎಂದು ಹೇಳಿದರೆ ತಪ್ಪಾಗಲಾರದು. ಹೆಚ್ಚಿನ ಹಣವನ್ನು ಕೊಡದಿದ್ದರೆ ಅದರಿಂದ ಏನೂ ಪ್ರಯೋಜನವಾಗಲಾರದು. ನಾನು ಹೇಳುವುದು ಏನೆಂದರೆ, ದೇಶದಲ್ಲಿ ಕೈಗಾರಿಕೆ ಬೆಳೆಯಬೇಕು. ವ್ಯವಸಾಯ ಕೈಗಾರಿಕೆ ಸಮತೋಲನ ಮಾಡಬೇಕು. ಹಾಗೆ ಮಾಡದಿದ್ದರೆ ದೇಶದಲ್ಲಿ ತೊಂದರೆಯಾಗಬಹುದು ಆದ್ದರಿಂದ ಹಣವನ್ನು ಮತ್ತಷ್ಟು ಹೆಚ್ಚಿಸ ಬೇಕಾಗಿದೆ. ಸಣ್ಣ ಮತ್ತು ಮೀಡಿಯಮ್ ವರ್ಗದ ಕೈಗಾರಿಕೆಗಳನ್ನು ಸರ್ಕಾರ ಬೆಳೆಸಬೇಕು. ಅದಕ್ಕೆ ಏಜೆನ್ಸಿ ಇದೆ. ಹಣ ಕೊಡದೇ ಕೆಲಸ ಮಾಡಿ ಎಂದರೆ ಹೇಗೆ ಆಗುತ್ತದೆ Mysore State Industrial Financing Co-operative Bank ಎಂಬುದು ಒಂದು ಸಂಸ್ಥೆ ಇದೆ. ವಿಶ್ವೇಶ್ವರಯ್ಯ ಸ್ಕೀಂ ಪ್ರಕಾರ ಹಿಂದೆ ಇದ್ದಂಥ ಸೊಸೈಟಿಗೆ ಬರಬೇಕಾದಂಥ ಹಣ ಬರಲಿಲ್ಲ ಎಂದು ಹೇಳುವ ಬದಲು ಸರ್ಕಾರ ಇನ್ನೂ ಹೆಚ್ಚಿನ ಕೋಟಿ ರೂಪಾಯಿಗಳ ಹಣವನ್ನು ಕೊಟ್ಟು ಸಣ್ಣ ಮತ್ತು ಮೀಡಿಯಮ್ ಕೈಗಾರಿಕೆಗಳಿಗೆ ಹೆಚ್ಚಿನ ರೀತಿಯಲ್ಲಿ ಸಹಾಯವಾಗುವಂತೆ ಪ್ರಯತ್ನ ಪಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಆರ್ಥಿಕ ಮಂತ್ರಿಗಳು ಸ್ಟುಡಿಯೋ ಮತ್ತು ಕನ್ನಡ ಚಿತ್ರಪಟಗಳ ಬಗ್ಗೆ ಪ್ರಸ್ತಾಪಿಸಿದ್ದಾರೆ. ಮೈಸೂರು ಸಂಸ್ಥಾನದ ಮುಖ್ಯಮಂತ್ರಿಗಳು ಹೇಳಿದರು. ಸ್ಟುಡಿಯೋ ಅತ್ಯಾವಶ್ಯಕ ಎಂದು ಮತ್ತು ಇಂಡಿಯಾ ದೇಶದಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರಿ ಬಿಟ್ಟರೆ ಎರಡನೆಯ ಇಂಡಸ್ಟ್ರಿ ಫಿಲಂ ಇಂಡಸ್ಟ್ರಿ. ಇದು ಇಂದು ಹೆಚ್ಚಿನ ಆರ್ಥಿಕ ಪ್ರಗತಿಗೆ ಅತ್ಯಾವಶ್ಯಕ ಎಂದು ಹೇಳಿದ್ದಾರೆ. ಮದ್ರಾಸ್ ಮತ್ತು ಬೊಂಬಾಯಿ ಪ್ರಾಂತದಲ್ಲಿ ಫಿಲಂ ಇಂಡಸ್ಟ್ರಿಯಿಂದ ಬರುತ್ತಾ ಇರುವ ಹಣ ಡೈರೆಕ್ಟ್ ಅಂಡ್ ಇಂಡೈರೆಕ್ಟ್ ಇನ್‌ಕಂನಲ್ಲಿ ಟೆಕ್ಸ್‌ಟೈಲ್ ಇಂಡಸ್ಟ್ರಿ ಸೆಕೆಂಡ್ ಬರುತ್ತದೆ.

ಇನ್ನು ಮೈಸೂರು ಪ್ರದೇಶದಲ್ಲಿ ಉತ್ತಮವಾದ ಸೀನರಿ ಇದೆ. ಮತ್ತು ಅತ್ಯುತ್ತಮ ವಾತಾವರಣ ಇದೆ. ಆದುದರಿಂದ ಸರ್ಕಾರ ಒಂದು ಸ್ಟುಡಿಯೋ ಮಾಡಬೇಕು. ಸರ್ಕಾರ ಸ್ಟುಡಿಯೋ ಬಗ್ಗೆ ಇಷ್ಟೊಂದು ತಡ ಏತಕ್ಕೆ ಮಾಡುತ್ತಾ ಇದ್ದಾರೆ ಎಂಬುದು ನೋಡಿದರೆ ಒಂದು ರೀತಿಯಲ್ಲಿ ನಮ್ಮೆಲ್ಲರಿಗೂ ಸಂಶಯಕ್ಕೆ ಕಾರಣವಾಗಿದೆ. ನಮ್ಮ ಆರ್ಥಿಕ ಮಂತ್ರಿಗಳು ಇಲ್ಲಿ ತಯಾರಾಗುವ ಚಿತ್ರಗಳಿಗೆ 50 ಸಹಸ್ರ ರೂಪಾಯಿಗಳನ್ನು ಸಬ್ಸಿಡಿ ರೂಪದಲ್ಲಿ ಕೊಡುತ್ತೇವೆಂದು ಹೇಳಿದ್ದಾರೆ. ಇಲ್ಲಿಯವರೆಗೆ ಅಂಥ ಒಂದು ಕನ್ನಡ ಚಿತ್ರಕ್ಕಾದರೂ ಕೊಟ್ಟಿಲ್ಲ. ಸರ್ಕಾರ ತಕ್ಷಣ ತಾನೇ ಒಂದು ಸ್ಟುಡಿಯೋ ಪ್ರಾರಂಭ ಮಾಡಬೇಕು, 5 ಫ್ಲೋರ್ ಮಾಡಬೇಕು.

ಶ್ರೀ ರಾಮಕೃಷ್ಣ ಹೆಗಡೆ (ಹಣಕಾಸಿನ ಮಂತ್ರಿಗಳು).—ಮಾನ್ಯ ಸದಸ್ಯರು ಏನು ಹೇಳುತ್ತಾ ಇದ್ದಾರೆ ಅದು ಸರಿಯಾದ ತಿಳುವಳಿಕೆಯಿಂದ ಹೇಳುತ್ತಾ ಇಲ್ಲ. ಈ ಸ್ಕೀಮು ಕಳೆದ ವರ್ಷ ಏಪ್ರಿಲ್ ತಿಂಗಳಿನಿಂದ ಜಾರಿಗೆ ಬಂತು. ಏಪ್ರಿಲ್‌ನಿಂದ ಮಾರ್ಚಿಯವರೆಗೆ ಒಂದು ವರ್ಷದಿಂದ ಯಾರು ಯಾರು ಕನ್ನಡ ಫಿಲಂ ತಯಾರು ಮಾಡಿದ್ದಾರೋ ಅಂತಹ ಫಿಲಂಗಳಲ್ಲಿ ಒಂದಕ್ಕೆ ಷರತ್ತುಗಳಿಗೆ ಒಳಪಟ್ಟಂಥ ಫಿಲಂಗಳಿಗೆ ಸಬ್ಸಿಡಿ ಕೊಡಬೇಕು ಎಂದು ತೀರ್ಮಾನವಾಗಿದೆ, ಈ ಒಂದು ವರ್ಷ ಮುಗಿಯುವುದರೊಳಗೆ ಕೊಡಬೇಕು ಎಂದು ಹೇಳಿದರೆ ಆಗುವುದಿಲ್ಲ. ಒಂದು ವರ್ಷ ಮುಗಿದ ಮೇಲೆ ಕೊಟ್ಟೇ ಕೊಡುತ್ತೇವೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಒಂದು ಚಿತ್ರವನ್ನು ತೆಗೆಯಬೇಕಾದರೆ ಅದರ ಕಷ್ಟ ಹೇಳುವುದಕ್ಕಾಗುವುದಿಲ್ಲ. ಅದೂ ಕನ್ನಡ ಚಿತ್ರ ತೆಗೆಯಬೇಕಾದರೆ ಬಹಳ ಕಷ್ಟ ಇದೆ.

ಶ್ರೀ ರಾಮಕೃಷ್ಣ ಹೆಗಡೆ.—ತಮಗೆ ಅದರ ಬಗ್ಗೆ ಅನುಭವವಿದೆ, ಹೇಳಿ.

ಶ್ರೀ ಎಚ್. ಬಿ. ಜ್ವಾಲನಯ್ಯ.—ನಮ್ಮಲ್ಲಿ 'ಎ' ಕ್ಲಾಸ್ ಸೆಂಟರ್‌ಗಳಿಲ್ಲ. ಆಂಧ್ರ ಮತ್ತು ಮದ್ರಾಸುಗಳಲ್ಲಿ ''ಎ'' ಕ್ಲಾಸ್‌ನ ಸೆಂಟರ್‌ಗಳಿವೆ. ಹಿಂದಿ ಚಿತ್ರಗಳನ್ನು 'ಎ' ಕ್ಲಾಸ್ ಸೆಂಟರ್ ಇರುವ ಕಡೆ ತೆಗೆಯುತ್ತಾರೆ. ನಮ್ಮಲ್ಲಿ 'ಎ' ಕ್ಲಾಸ್ ಸೆಂಟರ್ ಇಲ್ಲದಿರುವುದರಿಂದ ಚಿತ್ರ ನಿರ್ಮಾಪಕನಿಗೆ ಬಹಳ ಕಷ್ಟವಾಗುತ್ತಿದೆ. ಮೈಸೂರು ಸರ್ಕಾರದವರು ತಮ್ಮ ವತಿಯಿಂದ ಒಂದು ಸ್ಟುಡಿಯೋವನ್ನು ಸ್ಥಾಪಿಸುವುದಕ್ಕೆ ಮೊದಲು ಐದು ಫ್ಲೋರ್ ಇರುವ ಒಂದು ಕಟ್ಟಡವನ್ನು ನಿರ್ಮಿಸಿ, ಅದರಲ್ಲಿ ಲ್ಯಾಬೋರೇಟರಿಯನ್ನು ಮತ್ತು ಸೌಂಡ್ ರೆಕಾರ್ಡಿಂಗನ್ನು ಜೋಡಿಸಬೇಕು. ಅಲ್ಲದೆ ಚಾಮರಾಜೇಂದ್ರ ಪಾಲಿಟೆಕ್ನಿಕ್‌ನಲ್ಲಿರುವ ಸಿನಿಮಟೋಗ್ರಫಿ ಸೆಕ್ಷನ್ನನ್ನು ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟರೆ, ಅಲ್ಲಿರುವ ವಿದ್ಯಾರ್ಥಿಗಳಿಗೂ ಸಹ ಅದರ ಬಗ್ಗೆ ಉತ್ತಮ ವಾತಾವರಣ ದೊರಕಿಸಿಕೊಟ್ಟಂತೆ ಆಗುತ್ತದೆ. ಈ ಮೂಲಕ ಕನ್ನಡ ಚಿತ್ರಗಳು ಹೆಚ್ಚು ಬರುವುದಕ್ಕೆ ಅವಕಾಶವಾಗುತ್ತದೆ. ಈಗ ಇಲ್ಲಿ ಹೆಚ್ಚಿನ ಲ್ಯಾಬೋರೇಟರಿಯ ಅನುಕೂಲಗಳು ಇಲ್ಲದಿರುವುದರಿಂದ ಕನ್ನಡ ಚಿತ್ರ ತೆಗೆಯುವವರು ಬೊಂಬಾಯಿ, ಮದ್ರಾಸಿಗೆ ಹೋಗಬೇಕಾಗಿದೆ. ಚಿತ್ರಗಳನ್ನು ತೆಗೆಯುವವರಿಗೆ ಹೆಚ್ಚಿನ ಹಣ ಸಹಾಯವನ್ನು ಕೊಡಬೇಕು. ಕನ್ನಡ ಚಿತ್ರಗಳನ್ನು ತೆಗೆಯಲು ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರದವರು ಕೊಡುತ್ತಾರೆಂದು ನಂಬಿದ್ದೇನೆ. ಉತ್ತಮ ಚಿತ್ರಗಳನ್ನು ತೆಗೆದವರಿಗೆ ಮತ್ತು ಉತ್ತಮ ಕಲಾವಿದರಿಗೆ ಬಹುಮಾನಗಳನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಇನ್ನು ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಬೇಕೆಂದು ಸಣ್ಣ ಸಣ್ಣ ಇಲಾಖೆಗಳಲ್ಲಿ ಅಧಿಕಾರಿಗಳನ್ನು ನೇಮಿಸಿದ್ದೀರಿ. ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡಲು ಇರುವ ಅಡ್ಡಿ ಆತಂಕಗಳೇನು ? ಎಲ್ಲಾ ಇಲಾಖೆಗಳಲ್ಲೂ ಸಹ ಒಬ್ಬೊಬ್ಬ ಅಧಿಕಾರಿಯನ್ನು ಏತಕ್ಕೆ ನೇಮಕ ಮಾಡಬಾರದು ? ಕನ್ನಡ ಟೈಪ್‌ರೈಟರನ್ನು ಕಂಡುಹಿಡಿದವರಿಗೆ ಸರ್ಕಾರದವರು ಯಾವ ಪ್ರೋತ್ಸಾಹವನ್ನೂ ಕೊಟ್ಟಿಲ್ಲ. ಅದನ್ನು ಕಂಡುಹಿಡಿದ ಶ್ರೀಮಾನ್ ಅನಂತ ಸುಬ್ಬರಾಯರು ಇವತ್ತಿನ ದಿವಸ ಬೀದಿ ಭಿಕ್ಷುಕರಾಗಿದ್ದಾರೆ. 30 ವರ್ಷ ಅವರು ಶ್ರಮಪಟ್ಟು ಕಂಡುಹಿಡಿದಿದ್ದಕ್ಕೆ, ಆ ಟೈಪ್‌ರೈಟರ್ ಮೇಲೆ ಅವರ ಹೆಸರೂ ಕೂಡ ಇಲ್ಲ. ಇವತ್ತಿನ ದಿವಸ ಒಂದು ಕನ್ನಡ

(ಶ್ರೀ ಎಚ್.ಬಿ. ಜ್ವಾಲನಯ್ಯ)

ಟ್ರೈಪ್‌ರೈಟರನ್ನು ಕೊಂಡುಕೊಳ್ಳಬೇಕಾದರೆ 1,300 ರೂಪಾಯಿಗಳಾಗುತ್ತದೆ. ಈ ಹಣದಲ್ಲಿ ಯಂತ್ರವನ್ನು ಕಂಡುಹಿಡಿದವರಿಗೆ ಯಾವ ಲಾಭವೂ ಬರುತ್ತಿಲ್ಲ.

ಇನ್ನು ಸರ್ಕಾರದವರು ಓವರ್‌ಡ್ರಾಫ್ಟ್ ಪಡೆಯುವುದಕ್ಕೆ ರಿಜರ್ವ್ ಬ್ಯಾಂಕ್‌ನವರು ಒಪ್ಪಿಗೆ ಕೊಡುತ್ತಿಲ್ಲ. ಅದನ್ನು ನಾನು ಸ್ವಾಗತಿಸುತ್ತೇನೆ. ಇದರಿಂದ ಸರ್ಕಾರದವರು ಓವರ್‌ಡ್ರಾಫ್ಟ್ ತೆಗೆದುಕೊಳ್ಳದೆ, ತಮ್ಮ ಮಿತಿಯೊಳಗೆ ಕೆಲಸ ಮಾಡಲು ಅನುಕೂಲವಾಗುತ್ತದೆ. ಈ ಬಡ್ಜೆಟ್‌ನಲ್ಲಿ 50 ಲಕ್ಷ ರೂಪಾಯಿಗಳ ಉಳಿತಾಯವನ್ನು ತೋರಿಸಿದ್ದಾರೆ. ನನಗೆ ಈ ವಿಚಾರದಲ್ಲಿ ಸಂಶಯ ಕಾಣುತ್ತದೆ. ಏಕೆಂದರೆ ಸರ್ಕಾರದವರು ಮತ್ತೆ ಕೋಟ್ಯಾಂತರ ರೂಪಾಯಿಗಳನ್ನು ಸಾಲ ತೆಗೆಯಬೇಕೆಂದಿದ್ದಾರೆ. ಇದು ಕೇವಲ ಬುಕ್ ಅಜೆಸ್ಟ್‌ಮೆಂಟ್ ಎಂದು ಕಾಣುತ್ತದೆ. ಈ ಬಜೆಟ್ ಕೇವಲ ಕಾಗದದ ಮೇಲಿನ ಬಡ್ಜೆಟ್ ಎಂದು ಹೇಳಬಹುದು. ಆಯಾ ಇಲಾಖೆಗಳಲ್ಲಿ ಏನು ಒಂದು ಅಂಕಿಅಂಶಗಳನ್ನು ತೋರಿಸಿದ್ದಾರೆ. ಅವೆಲ್ಲಾ ತೋರಿಕೆಗೆ ಎಂದು ಹೇಳಿದರೆ ತಪ್ಪಾಗಲಾರದು.

ಇನ್ನು ಖಾದಿ ಬೋರ್ಡಿನ ವಿಚಾರ ತೆಗೆದುಕೊಂಡರೆ, ಮೊನ್ನೆ ಮಾನ್ಯ ಮುಖ್ಯಮಂತ್ರಿಗಳೇ ಖಾದಿ ಬೋರ್ಡಿನ ಆಡಳಿತದ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿದರು. ಈ ಖಾದಿ ಬೋರ್ಡಿಗೆ ವರ್ಷಕ್ಕೆ ಲಕ್ಷಗಟ್ಟಲೆ ಹಣವನ್ನು ಕೊಡಬೇಕು. ಈ ರೀತಿ ಹಣ ಪೋಲಾಗುತ್ತಿದ್ದರೂ ಸಹ ಆ ಬೋರ್ಡಿಗೆ ಹಣವನ್ನು ಕೊಡುವುದು ನೋಡಿದರೆ ಆಶ್ಚರ್ಯವಾಗಿ ಕಾಣುತ್ತದೆ. ಈ ರೀತಿ ದೇಶದ ಹಣ ಪೋಲಾಗುವುದನ್ನು ತಡೆಗಟ್ಟಬೇಕು.

ಇನ್ನು ಪಾನನಿರೋಧವನ್ನು ಜಾಗ್ರತೆ ತೆಗೆದುಹಾಕಬೇಕು. ಕಂದಾಯವನ್ನು ತೆಗೆದುಹಾಕಬೇಕು. ಕಂದಾಯವನ್ನು ರದ್ದು ಮಾಡಿದರೆ ಸರ್ಕಾರಕ್ಕೆ ಎಂಟು ಕೋಟಿ ರೂಪಾಯಿಗಳಷ್ಟು ನಷ್ಟವಾಗಬಹುದು. ಪಾನನಿರೋಧವನ್ನು ತೆಗೆದುಹಾಕಿ, ಮತ್ತೊಮ್ಮೆ ಸೇಂದಿ ಮಾರಾಟಕ್ಕೆ ಅವಕಾಶ ಕೊಟ್ಟರೆ ಅದರಿಂದ 10-15 ಕೋಟಿ ರೂಪಾಯಿಗಳ ವರಮಾನ ಸರ್ಕಾರಕ್ಕೆ ಬರುತ್ತದೆ. ಈ ಹಣವನ್ನು ಕಂದಾಯ ರದ್ದು ಮಾಡುವುದರಿಂದ ಆಗುವ ನಷ್ಟಕ್ಕೆ ಸರಿದೂಗಿಸಬಹುದು. ಈ ರೀತಿ ಕಂದಾಯ ರದ್ದು ಮಾಡಿದರೆ ಅದರಿಂದ ಬಡವರಿಗೆ, ರೈತರಿಗೆ ಅನುಕೂಲವಾಗುತ್ತದೆ. ಆದ್ದರಿಂದ ಕಂದಾಯ ರದ್ದು ಮಾಡಬೇಕು, ಪಾನನಿರೋಧವನ್ನು ತೆಗೆದುಹಾಕಬೇಕೆಂದು ಮತ್ತೊಮ್ಮೆ ಹೇಳಿ, ನನಗೆ ನಾಲ್ಕು ಮಾತುಗಳನ್ನು ಈ ಸಂದರ್ಭದಲ್ಲಿ ಹೇಳಲು ಅವಕಾಶ ಕೊಟ್ಟಿದ್ದಕ್ಕೆ ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಬಿ. ನಂಜಪ್ಪ (ಗಂಡಸಿ).—ಅಧ್ಯಕ್ಷರೇ, ಈ ದಿವಸ ನಮ್ಮ ದೇಶದ 1967–68ನೇ ಇಸವಿಯ ಆಯವ್ಯಯ ಅಂದಾಜನ್ನು ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಈ ನಮ್ಮ ಆಯವ್ಯಯ ಪಟ್ಟಿಯಲ್ಲಿ ನೀರಾವರಿಯ ಬಗ್ಗೆ ಹೆಚ್ಚು ಮುತುವರ್ಜಿಯಿಂದ ಹೆಚ್ಚು ಹಣವನ್ನು ಒದಗಿಸಿದ್ದಾರೆ. ನೀರಾವರಿ ಸೌಕರ್ಯವನ್ನು ಜನಗಳಿಗೆ ಹೆಚ್ಚು ಹೆಚ್ಚು ಒದಗಿಸಿಕೊಡಬೇಕೆಂದು ಅನೇಕ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಇದು ಸ್ವಾಗತಾರ್ಹ. ಇದರಲ್ಲಿ ಮುಖ್ಯವಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ನಮಗೆ ಆದಷ್ಟು ಜಾಗ್ರತೆ ಅನುಕೂಲ ಸಿಗಬೇಕಾದರೆ ಸಣ್ಣ ಸಣ್ಣ ಕೆರೆಗಳನ್ನು, ಅದರಲ್ಲೂ 10 ಎಕರೆಯೊಳಗಿರುವಂತಹದನ್ನು ತಾಲ್ಲೋಕ್ ಬೋರ್ಡ್ ಆಡಳಿತಕ್ಕೆ ಒಪ್ಪಿಸಿ, ಅವರು ರಿಪೇರಿ ಮಾಡಿಸುವುದಕ್ಕೆ ಸಾಕಾದಷ್ಟು ಹಣವನ್ನು ಒದಗಿಸಬೇಕು. ಈಗ ಸಣ್ಣ ಸಣ್ಣ ಕೆರೆಗಳನ್ನು ರಿಪೇರಿ ಮಾಡಿಸಲು ಹೆಚ್ಚು ಹಣವನ್ನು ಒದಗಿಸುತ್ತಿಲ್ಲ. ಇದಕ್ಕೆ ಮೊದಲು ಹೆಚ್ಚಿನ ಆದ್ಯತೆಯನ್ನು ಕೊಟ್ಟರೆ ಒಂದು ವರ್ಷದಲ್ಲಿ ಇದರ ಲಾಭವನ್ನು ಪಡೆಯಬಹುದು. ಆದ್ದರಿಂದ ಸರ್ಕಾರದವರು ಮೊಟ್ಟಮೊದಲು ಕೆರೆಗಳನ್ನು ರಿಪೇರಿ ಮಾಡಿಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಹಾಸನ ಜಿಲ್ಲೆಯಲ್ಲಿರುವ ಯಗಚಿ ಪ್ರಾಜೆಕ್ಟನ್ನು ತೆಗೆದುಕೊಂಡರೆ ಹಾಸನದ ಕೆಲವು ಭಾಗಗಳನ್ನು,

ಆಲೂರಿನ ಕೆಲವು ಭಾಗಗಳನ್ನು ನೀರಾವರಿಗೆ ಒಳಪಡಿಸಬಹುದು. ಯಗಚಿ ನದಿಯ ನೀರನ್ನು ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗುವ ವಿಚಾರ ನಡೆಯುತ್ತಿದೆ. ಯಗಚಿ ಅಣೆಕಟ್ಟೆಯಿಂದ ಹಾಸನ ತಾಲ್ಲೂಕಿನ ಕೆಲವು ಭಾಗಗಳು ಮತ್ತು ಚೆನ್ನರಾಯಪಟ್ಟಣದ ಕೆಲವು ಭಾಗಗಳಿಗೆ ನೀರನ್ನು ಒದಗಿಸಬಹುದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಈ ಯಗಚಿ ನದಿಯ ನೀರನ್ನು ಚಿತ್ರದುರ್ಗಕ್ಕೆ ತೆಗೆದುಕೊಂಡು ಹೋಗುವ ಬದಲು ಇಲ್ಲಿಯೇ ಉಪಯೋಗಿಸುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ.

ಇನ್ನು ಸಾರಿಗೆ ವಿಚಾರ ತೆಗೆದುಕೊಂಡರೆ, ಸಾಮಾನ್ಯವಾಗಿ ಪಿ. ಡಬ್ಲ್ಯು. ಡಿ. ಯವರು ಟೇಕನ್ ಓವರ್ ರೋಡ್ಸ್ ಎಂದು ತೆಗೆದುಕೊಂಡು, 10 ವರ್ಷವಾದರೂ ರಿಪೇರಿ ಕಾಣದೆ ಉಳಿದಿವೆ. ಜಿಲ್ಲಾ ಬೋರ್ಡ್‌ನವರು ಮತ್ತು ತಾಲ್ಲೋಕ್ ಬೋರ್ಡ್‌ನವರು ಅಲ್ಲಲ್ಲಿ ಸ್ವಲ್ಪ ರಸ್ತೆಗಳ ರಿಪೇರಿಯನ್ನು ಮಾಡಿಸಿದರೂ ಸಹ ಈ ಟೇಕನ್ ಓವರ್ ರೋಡ್ಸ್‌ಗೆ ಸಾಕಷ್ಟು ಹಣವನ್ನು ಒದಗಿಸದೆ ರಿಪೇರಿಯಾಗಿಲ್ಲ. ಆದಷ್ಟು ಜಾಗ್ರತೆ ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಬೇಕು. ಈ ರೀತಿ ಜಾಗ್ರತೆ ವ್ಯವಸ್ಥೆ ಮಾಡಿಸಿದರೆ ಸಾಮಾನು ಸಾಗಾಣಿಕೆಗೆ ಅನುಕೂಲ ವಾಗುತ್ತದೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡಿ ಹೇಳುತ್ತೇನೆ.

ಇನ್ನು ವ್ಯವಸಾಯಗಾರರಿಗೆ ಅಂದರೆ, ನಮ್ಮ ರೈತಾಪಿ ವರ್ಗದವರಿಗೆ ಹಣವನ್ನು ಸೊಸೈಟಿಗಳ ಮುಖಾಂತರವಾಗಿ ಸರ್ಕಾರದವರು ಕೊಡಿಸುತ್ತಿದ್ದಾರೆ. ಅಪೆಕ್ಸ್ ಬ್ಯಾಂಕ್ ಮೂಲಕ ಹಣ ಕೊಡಲು ವ್ಯವಸ್ಥೆ ಮಾಡಿದ್ದಾರೆ. ಈ ಸೊಸೈಟಿಗಳು ಫಲಕಾರಿಯಾಗಿ ಕೆಲಸ ಮಾಡದಿರುವುದಕ್ಕೆ ಅನೇಕ ಕಾರಣಗಳು ಇವೆ. ಅದರ ಬಗ್ಗೆ ನಮ್ಮ ಹಾಸನದ ಮಹಾಶಯರೂ ಹೇಳಿದರು. ಅವರು ಹೇಳಿದ ಕೆಲವು ವಿಚಾರಗಳನ್ನು ನಾವು ಒಪ್ಪಿಕೊಳ್ಳಲೇ ಬೇಕಾಗಿದೆ. ವ್ಯವಸಾಯಗಾರರಿಗೆ ಸಕಾಲದಲ್ಲಿ ಹಣ ಪಾವತಿಯಾಗದೇ ಹೋದರೆ, ಅವರು ಬೀಜ, ಗೊಬ್ಬರ ಇವನ್ನು ಕೊಂಡುಕೊಳ್ಳುವುದಕ್ಕಾಗುವುದಿಲ್ಲ. ಸಕಾಲದಲ್ಲಿ ಹಣವನ್ನು ಒದಗಿಸುವುದಕ್ಕೆ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ವಿವಿಧ ಬಾಬುಗಳಲ್ಲಿ ವಿವಿಧ ರೀತಿಯಲ್ಲಿ ಹಣವನ್ನು ಕೊಡುತ್ತಿದ್ದಾರೆ. ಇದಕ್ಕೆ ಬದಲು ರೈತ ವರ್ಗದ ಕುಟುಂಬದವರಿಗೆ ಅನುಕೂಲವಾಗುವಂತೆ ಒಂದೇ ಒಂದು ಏಜನ್ಸಿ ಮುಖಾಂತರ ಸಾಲವನ್ನು ಕೊಡುವುದಕ್ಕೆ ತಕ್ಕ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೇಗೆಂದರೆ, ಒಬ್ಬ ರೈತ ಅವನ ಕುಟುಂಬದ ಧಡೂತಿ ಎಷ್ಟು ಇದೆ ಎನ್ನುವುದನ್ನು ನೋಡಿಕೊಂಡು ಹಣವನ್ನು ಕೊಡುವುದರಲ್ಲಿ ಮಿತಿ ಮಾಡಬೇಕು. ಈಗ ವ್ಯಾಪಾರಸ್ಥರುಗಳಿಗೆ ಷೆಡ್ಯೂಲು ಬ್ಯಾಂಕುಗಳವರು ಹೇಗೆ ಸಾಲ ಕೊಡುತ್ತಾರೆಯೋ ಅದೇ ರೀತಿ ರೈತರುಗಳಿಗೂ ಅನುಕೂಲ ವಾಗುವಂತೆ ಅವನ ಕುಟುಂಬದವರಿಗೆ ಸಕಾಲದಲ್ಲಿ ಹಣ ಕೊಡುವ ವ್ಯವಸ್ಥೆ ಮಾಡಿ ರೈತನಿಗೆ ಸಿಗುವಂತೆ ಮಾಡಿದರೆ ಅದರಿಂದ ವ್ಯವಸಾಯ ಮಾಡುವುದಕ್ಕೂ ಅನುಕೂಲವಾಗುತ್ತದೆ.

4-00 P.M.

ಇನ್ನು ಸ್ಕೂಲು ಬಿಲ್ಡಿಂಗುಗಳ ವಿಚಾರ: ಹಳ್ಳಿಗಳಲ್ಲಿ ಒಂದು ಕಟ್ಟಡ ಕಟ್ಟಬೇಕಾದರೆ ಪಾಪ್ಯುಲರ್ ಕಂಟ್ರಿಬ್ಯೂಷನ್ನು ಒಂದು ಸಾವಿರ ಚಿಲ್ಲರೆ ರೂಪಾಯಿಗಳು ಕೊಡಬೇಕೆಂದು ಸರಕಾರ ಹೇಳಿ ಅನಂತರ ಸರಕಾರದವರು ತಮ್ಮ ಭಾಗವನ್ನು ಕೊಡುತ್ತಾರೆ. ಹಿಂದೆ ಇದಕ್ಕಾಗಿ ಅಂದಾಜು 3,300 ರೂಪಾಯಿಗಳು ಎಂದು ಇತ್ತು. ಈಗ ಅದು ಇನ್ನೂ ಹೆಚ್ಚಾಗಿದೆ. ಸುಮಾರು ನಾಲ್ಕು ಸಾವಿರದವರೆಗೂ ಹೋಗುತ್ತದೆ. ಇದೂ ಅಲ್ಲದೆ ತಾಲ್ಲೂಕು ಬೋರ್ಡು ಗಳವರು ಒಂದು ಶಾಲೆಗಾಗಿ ಒಂದು ಸಾವಿರಕ್ಕೆ ಮೇಲ್ಪಟ್ಟು ಕೊಡುವುದಕ್ಕೆ ಸಾಧ್ಯವಿಲ್ಲ. ಇದರಿಂದ ಈಗ ಅನೇಕ ಕಡೆಗಳಲ್ಲಿ ಪಂಚಾಯತಿಯವರೂ ಒಂದು ಸಾವಿರದವರೆಗೆ ಕೊಡಬೇಕೆಂದೂ ಬಂದಿದೆ. ಅನೇಕ ಪಂಚಾಯತಿಗಳಲ್ಲಿ ಹಣಕಾಸಿನ ಪರಿಸ್ಥಿತಿ ಅಷ್ಟು ಚೆನ್ನಾಗಿಲ್ಲ. ಆದ್ದರಿಂದಾಗಿ ಎಷ್ಟೋ ಕಡೆಗಳಲ್ಲಿ ಪಂಚಾಯತಿಗಳು ಹಣ ಕೊಡುವುದಕ್ಕೆ ಅಸಮರ್ಥವಾಗಿವೆ.

(ಶ್ರೀ ಬಿ. ನಂಜಪ್ಪ)

ಆದುದರಿಂದ ಸರ್ಕಾರ ಟೌನುಗಳಲ್ಲಿ ಹಾಗೂ ಸಿಟಿಗಳಲ್ಲಿ ಸ್ವಂತ ಜವಾಬುದಾರಿಯಿಂದ ಸ್ಕೂಲು ಬಿಲ್ಡಿಂಗುಗಳನ್ನು ಕಟ್ಟಿಕೊಡುತ್ತಿದ್ದಾರೆ. ಇದೇ ರೀತಿ ಹಳ್ಳಿಗಳ ಕಡೆಗಳಲ್ಲಿಯೂ ಸರಕಾರದವರೇ ಸ್ಕೂಲು ಬಿಲ್ಡಿಂಗುಗಳನ್ನೂ ಕಟ್ಟಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಪಾನನಿರೋಧದ ಬಗ್ಗೆ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ಈಗ ಹೇಳುತ್ತಿದ್ದಾರೆ. ಈ ಬದಲಾವಣೆಗಳನ್ನು ಮಾಡುವುದಕ್ಕೆ ಬದಲಾಗಿ ಪಾನನಿರೋಧವನ್ನು ತಪ್ಪಿಸುವುದೇ ಸರಿಯಾಗಿದೆ ಎಂದು ಸಾಮಾನ್ಯವಾಗಿ ಏಳೆಂಟು ವರ್ಷಗಳಿಂದಲೂ ಇದರ ಬಗ್ಗೆ ಸತತ ಹೋರಾಟಗಳು ನಡೆಯಿತು. ಹಿಂದೆ ಎಷ್ಟು ಪರ್ಸೆಂಟು ಜನ ಕುಡಿಯುತ್ತಿದ್ದರೋ ಈಗ ಅದರ ಪರ್ಸೆಂಟೇಜು ಹೆಚ್ಚಾಗಿದೆ. ಸುಮಾರು ಶೇಕಡಾ 20 ರಿಂದ 25 ಪರ್ಸೆಂಟಿನಷ್ಟು ಕುಡಿಯುವವರೇ ಜಾಸ್ತಿಯಾಗಿದ್ದಾರೆ. ಇದರಿಂದ ನೋಡಿದರೆ ದೇಶದಲ್ಲಿರುವ ಜನ ಹೆಚ್ಚು ಪಾನಪ್ರಿಯರಾಗುತ್ತಿದ್ದಾರೆ. ಆದುದರಿಂದ ಜಾಸ್ತಿಯಾಗಿ ಜನ ಕುಡಿಯಬೇಕೆಂದು ಹೋಗುವವರಿಗೆ ಪಾನ ಮಾಡಲು ಅವಕಾಶಗಳನ್ನು ಕೊಡಬಹುದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ಮಾಡಬೇಕೆಂದು ಸರಕಾರ ತಕ್ಕ ಕ್ರಮಗಳನ್ನು ಮಾಡಿದ್ದಾರೆ. ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಧ್ಯೇಯೋದ್ದೇಶಗಳು ಉತ್ತಮವಾದವು. ಇದರಿಂದ ಸಾಮಾನ್ಯ ರೈತಾಪಿ ಜನರು ಒಂದೇ ಆಫೀಸಿಗೆ ಬಂದು ಎಲ್ಲ ಕೆಲಸ ಕಾರ್ಯಗಳನ್ನೂ ಮಾಡಿಕೊಳ್ಳಬಹುದು ಮತ್ತು ಅನೇಕ ಕಡೆಗಳಲ್ಲಿ ಸುತ್ತುವುದು ತಪ್ಪುತ್ತದೆ ಎಂದು ಈ ಯೋಜನೆ ಮಾಡಿದ್ದಾರೆ. ಇದರ ಉದ್ದೇಶವೂ ಘನವಾದುದು ಮತ್ತು ಇದರಿಂದ ಕೆಲಸಗಳೂ ಚೆನ್ನಾಗಿ ಆಗುತ್ತವೆ ಎಂದು ಮಾಡಿದ್ದರೂ ಕೆಲವರು ಇದು ಡೂಪ್ಲಿಕೇಷನ್ ಆಫ್ ವರ್ಕ್ ಆಗುತ್ತದೆ, ಅದರಿಂದ ಇವನ್ನು ತೆಗೆಯಬೇಕೆಂದು ಮತ್ತು ಈ ಕೆಲಸಗಳನ್ನು ಬೇರೆ ಬೇರೆ ಇಲಾಖೆಗಳಿಗೆ ವರ್ಗಾಯಿಸಬೇಕು ಎಂದೂ ಹೇಳಿದರು. ಹಾಗೆ ಮಾಡುವುದಕ್ಕಿಂತ ಈ ಯೋಜನೆಯನ್ನು ಇನ್ನೂ ಹೆಚ್ಚಾಗಿ ಕೆಲಸ ಮಾಡುವ ಹಾಗೆ ಇದಕ್ಕೆ ಉತ್ತೇಜನ ಕೊಡಬೇಕೆಂದು ನಾನು ಸರಕಾರದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಭೂಕಂದಾಯವನ್ನು ಈಗಾಗಲೇ ರದ್ದು ಮಾಡಬೇಕೆಂದು ತಿಳಿಸಿದ್ದಾರೆ. ಇದನ್ನು ರದ್ದು ಮಾಡಿದರೆ ಸರಕಾರಕ್ಕೆ ಇದರಿಂದ ಬರುವ ಸುಮಾರು ಎಂಟು ಕೋಟಿಯಷ್ಟು ಹಣವನ್ನು ಬೇರೆ ವಿಧದಲ್ಲಿ ಪಡೆಯಬಹುದು ಎಂದು ಹೇಳಿ ಮುಂದೆ ರೈತಾಪಿ ಜನರ ಮೇಲೆ ಹೇರಿ ಅದನ್ನು ವಸೂಲು ಮಾಡುವುದಕ್ಕೆ ಹೋದರೆ ಇದರ ಉದ್ದೇಶ ಸಾಧನೆಯಾಗುವುದಿಲ್ಲ. ಆದುದರಿಂದ ರೈತಾಪಿ ಜನಕ್ಕೆ ತೊಂದರೆಯಾಗದಂತೆ ಇದನ್ನು ತೆಗೆದು ಹಾಕುವುದು ಸರಿಯಾಗಿದೆ. ಹಿಂದೆ ರೈತರು ಸಲೀಸಾಗಿ ಅವರ ಕಂದಾಯವನ್ನು ಅಲ್ಲಿದ್ದ ಶ್ಯಾನುಭೋಗರು ಅಥವಾ ಪಟೇಲರುಗಳಿಗೆ ಕೊಡುತ್ತಿದ್ದರು. ಈಗ ಇದನ್ನು ತೆಗೆದು ಅಗ್ರಿಕಲ್ಚರು ಇನ್‌ಕಂಟ್ಯಾಕ್ಸ್ ಅಥವಾ ಇನ್ನಾವುದಾದರೂ ವಾಟರು ಟ್ಯಾಕ್ಸು ಎಂದು ವಸೂಲು ಮಾಡಬೇಕು ಎಂದರೆ ಅದು ಇಲ್ಲದ ಕರಪ್‌ಷನ್ನಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಮತ್ತು ರೈತರಿಗೆ ಇಲ್ಲದ ಕಿರುಕುಳಗಳನ್ನು ಕೊಟ್ಟಂತಾಗುತ್ತದೆ. ಕಂದಾಯ ಮಾಫಿ ಮಾಡುತ್ತೇವೆಂದು ಹೇಳಿ ಇನ್ನಾವುದೋ ರೀತಿಯಲ್ಲಿ ಇನ್‌ಡೈರೆಕ್ಟ್ ಟ್ಯಾಕ್ಸನ್ನು ಅಗ್ರಿಕಲ್ಚರಿಗೆ ಸಂಬಂಧಪಟ್ಟಂತೆ ತರಬಹುದು ಎಂದು ಸರಕಾರ ಮಾಡಿದರೆ ಇದರಿಂದ ರೈತಾಪಿ ಜನರ ಮೇಲೆ ಹೆಚ್ಚು ಹೊರೆ ಹೊರಿಸುವಂತೆ ಮಾಡುವುದು ಸರಿಯಲ್ಲ. ಕಂದಾಯವನ್ನು ಸಂಪೂರ್ಣವಾಗಿ ತೆಗೆದು ಅದರಿಂದ ನಷ್ಟವಾಗುವ ಹಣವನ್ನು ಪಾನನಿರೋಧದಿಂದ ಬರುವ ಹಣದಿಂದ ಸರಿದೂಗಿಸಬೇಕು ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

†ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೇ ನಮ್ಮ ಮುಂದೆ ಇರತಕ್ಕ ಆಯವ್ಯಯದ ಪಟ್ಟಿಯಲ್ಲಿ ಅನೇಕ ನ್ಯೂನತೆಗಳು ಇವೆ. ಅದರ ಸಲುವಾಗಿ ನಾನು ಕೆಲವು ವಿಚಾರಗಳನ್ನು ಇಲ್ಲಿ ಹೇಳಬೇಕಾಗಿದೆ. ಮಾನ್ಯ ಆಹಾರ ಮಂತ್ರಿಗಳು ನಮ್ಮ ದೇಶದಲ್ಲಿ ದವಸ್ಸಕ್ಕಿ ಹಾಗೂ ಇತರ ಕಾಳುಕಡ್ಡಿಗಳು ಸಾಕಷ್ಟು ಇವೆ ಎಂದು ಹೇಳಿ ಇಲ್ಲಿ ಅಂಕೆ ಅಂಶಗಳನ್ನು ಕೊಟ್ಟರು. ಇದು ಎಷ್ಟು ಮಟ್ಟಿಗೆ ನಿಜ ಎನ್ನುವುದನ್ನು ಸ್ವಲ್ಪ ಆಲೋಚನೆ ಮಾಡಬೇಕು. ಅದರ ರಾಗಿ ಬೆಳೆ ಯುವುದರಲ್ಲಿ ನಮ್ಮ ದೇಶದಲ್ಲಿ ಅಭಾವದ ಪರಿಸ್ಥಿತಿ ಇದೆ, ಜೋಳ ನೋಡಿದರೆ ಒಂದು ಕ್ವಿಂಟಾಲಿಗೆ 85 ರೂಪಾಯಿಗಳವರೆಗೆ ಏರಿದೆ. ಅದೂ ಕೂಡ ನಾವು ಕೇಳಿದಷ್ಟು ಕೊಡುವ ಸ್ಥಿತಿಯಲ್ಲಿಲ್ಲ. ಇಂಪೋರ್ಟು ಮಾಡಿದ ಮೇಲೂ ಬೇಕಾದಷ್ಟು ಇವೆ ಎಂದು ಇಲ್ಲಿ ಪಟ್ಟಿ ಕೊಟ್ಟರು. ಟೌನು ಹಾಗೂ ಸಿಟಿಗಳಲ್ಲಿ ಒಂದು ರೀತಿಯಾಗಿ ಹಂಚುತ್ತಾರೆ. ಹಳ್ಳಿಗಳಲ್ಲಿ ಬೇರೆ ರೀತಿಯಾಗಿ ಗೋಧಿ ಕೊಡುತ್ತಾರೆ. ಮೈಸೂರಿನಲ್ಲಿ ಕೋರ್ಸ್‌ಗ್ರೈನ್ಸ್ ಸಾಕಾದಷ್ಟು ಇದೆ ಎಂದು ಹೇಳುವುದು ಸತ್ಯಕ್ಕೆ ದೂರವಾದ ಮಾತು. ಈಗ equitable distribution ನಂತೆ ಆಹಾರ ಪದಾರ್ಥ ಗಳನ್ನು ಹಂಚಬೇಕೆಂದು ಒಂದು ಕಡೆ ಹೇಳಿದ್ದಾರೆ. ಪ್ರತಿಯೊಬ್ಬ ಮನುಷ್ಯನಿಗೂ ಒಬ್ಬ ವ್ಯಕ್ತಿಗೆ ಸುಮಾರು 5 ರಿಂದ 8 ಕೆ. ಜಿ. ವರೆಗೆ ಕೊಡುತ್ತಾರೆಂದು ಹೇಳಿ ಇಲ್ಲಿ ಅನೇಕ ಅಂಕೆ ಅಂಶಗಳನ್ನು ಕೊಟ್ಟಿರುವಂತೆ ಪರಿಶೀಲನೆ ಮಾಡಿ ನೋಡಿದರೆ ಎರಡು ಕೆ. ಜಿ. ಯಷ್ಟು ಒಬ್ಬ ವ್ಯಕ್ತಿ ಕೊಡಲು ಆಗುತ್ತಿಲ್ಲ ಎನ್ನುವುದು ವ್ಯಕ್ತವಾಗುತ್ತದೆ. ಉದಾಹರಣೆಯಾಗಿ ನಮ್ಮ ದೊಡ್ಡಬಳ್ಳಾಪುರದಲ್ಲೇ ನೋಡಿದರೆ ಒಬ್ಬ ವ್ಯಕ್ತಿಗೆ ಒಂದು ಕೆ. ಜಿ. ಕೂಡ ಕೊಟ್ಟಿಲ್ಲ ಮತ್ತು ಕೊಡಲೂ ಸಾಧ್ಯವಾಗಲಿಲ್ಲ. ಹಳ್ಳಿಗಳಲ್ಲಿ ಮೈಲೋ ಜೋಳ ಕೊಡತಕ್ಕದ್ದು ಪಟ್ಟಣಗಳಲ್ಲಿರುವವರಿಗೆ ಸೋಜಿ ಮತ್ತು ಉತ್ತಮತರವಾದ ಅಕ್ಕಿ ಕೊಡತಕ್ಕದ್ದು ಎಂದು ವ್ಯತ್ಯಾಸ ಮಾಡಿ ವಿತರಣೆ ಮಾಡುವುದು ನ್ಯಾಯವೇ? ಇದರಲ್ಲಿರುವ ಅಂಕೆ ಅಂಶಗಳನ್ನು ನೋಡುವುದಾದರೆ ಆಹಾರ ಪದಾರ್ಥಗಳಲ್ಲಿ ವ್ಯತ್ಯಾಸ, ತೂಕದಲ್ಲಿ ವ್ಯತ್ಯಾಸ, ಹಳ್ಳಿಗಳವರಿಗೇ ಒಂದು ರೀತಿ ಪಟ್ಟಣದವರಿಗೇ ಒಂದು ರೀತಿಯ ವ್ಯತ್ಯಾಸ ಮಾಡಿ ಮಾಡುವ ನೀತಿ ಯಾರಿಗೂ ಅನುಕೂಲವಾಗುವುದಿಲ್ಲ ಎನ್ನುವುದನ್ನು ಮಾನ್ಯ ಮಂತ್ರಿಗಳು ಗಮನಿಸಬೇಕು. ಇವೊತ್ತು ಹಳ್ಳಿಗಳಲ್ಲಿರುವ ರೈತನ ಸ್ಥಿತಿ ಹೇಗಿದೆ ಎಂದರೆ, ರಾಗಿ ಬೆಳೆಗೆ ರೋಗ ಬಂದು ಅವನಿಗೆ ಬರುವ ಫಸಲೂ ಬಾರದೇ ನಷ್ಟವಾಗಿದೆ. ಅಲ್ಲಿ ಅಕ್ಕಿ ಬೆಳೆಯೂ ಇಲ್ಲ, ರಾಗಿಯೂ ಇಲ್ಲ. ಇಂತಹ ಪರಿಸ್ಥಿತಿ ಇದೆ. ಹಳ್ಳಿ ಗಳಲ್ಲಿರುವ ಜನರ ಪರಿಸ್ಥಿತಿ ಈ ರೀತಿ ಇರುವಾಗ ಎಲ್ಲ ಜನರಿಗೂ ಸಮಾನವಾದ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ಹಂಚುವುದರ ಕಡೆಗೆ ನೀವು ಆಲೋಚನೆ ಮಾಡಬೇಕು. ಜನವರಿ ಒಂದನೇ ತಾರೀಖಿನಿಂದ ಗ್ರಾಮಾಂತರಗಳಿಗಾಗಿ ಕೊಡತಕ್ಕ ಆಹಾರಪದಾರ್ಥಗಳು ಸಾಗಿಸಿರು ವುದನ್ನು ಗಮನಿಸಿದರೆ ಒಂದೊಂದು ತಾಲ್ಲೂಕಿಗೆ ಕೇವಲ ಹತ್ತು ಟನ್ನುಗಳಷ್ಟು ಕೂಡ ಕೊಟ್ಟಿಲ್ಲ. ಇದನ್ನು ಸರಕಾರ ಗಮನಿಸಬೇಕು. ಇದರಿಂದ ಯಾವ ರೀತಿಯಾದ ಈಕ್ವಿಟಬಲ್ ಡಿಸ್ಟ್ರಿಬ್ಯೂಷನ್ ಮಾಡಿದಂತಾಗುತ್ತದೆ ಮತ್ತು ಇದನ್ನು ಹೇಗೆ ಕಾರ್ಯರೂಪಕ್ಕೆ ತರಬಹುದು ಎನ್ನುವುದನ್ನು ಸರಕಾರ ಯೋಚನೆ ಮಾಡಬೇಕು ಎಂದು ತಮ್ಮ ಮೂಲಕ ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಇನ್ನು ಲ್ಯಾಂಡ್‌ರೆವಿನ್ಯೂ ವಿಚಾರ ಈಗಿರತಕ್ಕ ಒಂದು ಪದ್ಧತಿಯ ಪ್ರಕಾರ ಇದನ್ನು ತರುವುದು ಸರಿಯಲ್ಲ ಎಂದರೆ ಬೇರೆ ಯಾವುದೋ ಒಂದು ಪದ್ಧತಿ ತರುತ್ತೇವೆ ಎನ್ನುವ ಅಭಿಪ್ರಾಯ ಬರುವಂತೆ ಅರ್ಥವಾಗುತ್ತದೆ. ಇಂತಹ ಒಂದು ಸಂಶಯ ಇರುವ ಸಂದರ್ಭದಲ್ಲಿ ನೀರಾವರಿಯ ಕೆಳಗೆ ಇರುವ ಜಮೀನುಗಳಮೇಲೆ ಮತ್ತೆ ಯಾವುದೋ ರೀತಿಯಲ್ಲಿ ಕಂದಾಯ ಹಾಕುವುದರಿಂದ ಸರಕಾರ ರೈತರಿಗೆ ಉಪಕಾರ ಮಾಡಿದಂತಾಯಿತೇ! ಇದರಿಂದ ಉಪಕಾರ ಮಾಡುತ್ತೇವೆ ಎಂದು ಹೇಳಿ ಅಪಕಾರ ಮಾಡಿದಂತಾಗುವುದಿಲ್ಲವೇ? ಜನತೆಗೆ ಇದರಿಂದ ಮಧ್ಯವರ್ತಿ ಜನರಿಗೆ ಹೆಚ್ಚು ಹಣ ಖರ್ಚುಮಾಡಬೇಕಾಗಿ ಬರುತ್ತದೆ ಮತ್ತು ಸರಕಾರಕ್ಕೂ ಕಷ್ಟವಾಗುತ್ತದೆ ಎಂದು ಇದನ್ನು ಸರಕಾರದವರು ಗಮನಿಸಬೇಕು. ಒಂದು ವರ್ಷದಲ್ಲಿ

(ಶ್ರೀ ಟಿ. ರಾಮೇಗೌಡ)

ಕಂದಾಯ ತೆಗೆಯಬೇಕು ಎಂದು ಇದ್ದರೆ ಕಂದಾಯ ಕೇಳದಂತೆ ಈ ವ್ಯವಸ್ಥೆ ಇರಬೇಕು, ಏನಾದರೂ ಮಾಡಿ ಅಗ್ರಿಕಲ್ಚರಲ್ ಟ್ಯಾಕ್ಸ್ ಹಾಕುವ ವಿಚಾರ ಇದ್ದರೆ ಖಂಡಿತವಾಗಿ ಅದು ಸಾಧ್ಯವಿಲ್ಲ ಮತ್ತು ಅದು ಸಾಧುವಾದುದು ಅಲ್ಲ ಎಂದು ಹೇಳಲು ಇಚ್ಛೆಪಡುತ್ತೇನೆ. ಇದನ್ನು ಮಾಡಲು ಕೆಲವು ಕಾಲ ಬೇಕಾಗುತ್ತದೆಂದು ಹೇಳಿರುವುದರಿಂದ ಈ ವರ್ಷ ಕಂದಾಯ ವಜಾ ಆಗುವುದಿಲ್ಲ ಎಂದು ಅರ್ಥವಾಗುತ್ತದೆ. ಲೆಕ್ಕ ಪತ್ರ ಇಡುವ ಕ್ರಮ ನೋಡಿದರೆ ಕಂದಾಯ ವಸೂಲ್ಮಾಡುವುದಕ್ಕೆ ಒತ್ತಾಯ ಬರುತ್ತದೆ ಎಂಬ ಭಯ ರೈತರಿಗೆ ಇದೆ. ಸರಕಾರ ಹಿಂದು ಮುಂದು ಆಲೋಚನೆ ಮಾಡದೆ ಒಂದೇ ಮನಸ್ಸಿನಿಂದ ರೈತನಿಗೆ ಸಹಾಯ ಮಾಡುವುದಕ್ಕಾಗಿ ಕಂದಾಯ ವಸೂಲ್ಮಾಡುವುದಿಲ್ಲ, ಬೇರೆ ಹೊಣೆ ರೈತನ ಮೇಲೆ ಹಾಕುವುದಿಲ್ಲ, ಇನ್‌ಡೈರೆಕ್ಟ್ ಟ್ಯಾಕ್ಸ್ ಹಾಕುವುದಿಲ್ಲ ಎಂದು ಸ್ಪಷ್ಟವಾಗಿ ಹೇಳುವುದು ಉತ್ತಮ ಎಂದು ನನಗೆ ಅನಿಸುತ್ತದೆ.

ಇನ್ನು ನೀರಾವರಿ ವಿಚಾರ: ಈಗ ಇರತಕ್ಕ ಕೆರೆಗಳಲ್ಲಿ ನೂರಕ್ಕೆ ಎಪ್ಪತ್ತೈದು ಭಾಗ ಕೆರೆಗಳಲ್ಲಿ ಹೂಳು ಬಿದ್ದು ಎರಡು ಮೂರು ತಿಂಗಳುಗಳಿಗೆ ಸಾಕಾಗುವಷ್ಟು ನೀರು ಸಹ ನಿಲ್ಲದೆ ಹೋಗುತ್ತವೆ. ಇದನ್ನು ಸರಕಾರ ಗಮನಿಸಬೇಕೆಂದು ಹೇಳುತ್ತೇನೆ. ಹೊಸ ಕೆರೆಗಳನ್ನು ಕಟ್ಟಲು ಅವಕಾಶವಿಲ್ಲ ಹಳೇ ಕೆರೆಗಳನ್ನು ಸರಿಯಾಗಿ ಆಬಾದು ಕಾಮಗಾರಿ ಮಾಡತಕ್ಕಂಥ ವ್ಯವಸ್ಥೆಯಿಲ್ಲ. ಡೀ-ಸಿಲ್ಟ್ ಮಾಡತಕ್ಕದ್ದಕ್ಕೆ ಬಹಳ ಖರ್ಚು ಬರುತ್ತದೆ ಎಂದು ಸರಕಾರ ತೀರ್ಮಾನಕ್ಕೆ ಬಂದಿರುವುದರಿಂದ ನೀರಾವರಿ ವ್ಯವಸ್ಥೆ ಅವ್ಯವಸ್ಥೆಯಾಗಿದೆ ಎನ್ನತಕ್ಕಂಥಾದ್ದನ್ನು ಹೇಳಲು ಇಚ್ಛೆಪಡುತ್ತೇನೆ. ಬೆಂಗಳೂರು ನಗರಕ್ಕೆ ಕಾವೇರಿ ನದಿಯಿಂದ ನೀರು ಒದಗಿಸಬೇಕೆಂದು ಇರುವುದರಿಂದ ಬೆಂಗಳೂರು ಜಿಲ್ಲೆಯಲ್ಲಿ ಕಾವೇರಿ ನದಿಯ ಟ್ರಿಬ್ಯೂಟರಿಗಳಿಗೆ ಅಣೆಕಟ್ಟು ಹಾಕಬಾರದು ಎಂದು ಅಪ್ಪಣೆ ಮಾಡಿದ್ದಾರೆ. ಇದರಿಂದ ಬೆಂಗಳೂರು ಜಿಲ್ಲೆಯಲ್ಲಿ ಯಾವ ನೀರಾವರಿ ಯೋಜನೆ ಕಂಡುಬರುವುದಿಲ್ಲ. ಕಳೆದ ಹತ್ತು ವರ್ಷಗಳಿಂದ ಕೆರೆಯ ಹೂಳು ತೆಗೆಸುವುದನ್ನು ಸಹ ನಿಲ್ಲಿಸಿ ಬಿಟ್ಟಿದ್ದಾರೆ. ಸಣ್ಣ ಸಣ್ಣ ಕೆರೆಗಳಲ್ಲಿ ಹೂಳು ತೆಗೆಸಿದ್ದರೆ ನೀರು ನಿಂತು ವ್ಯವಸಾಯಕ್ಕೆ ಅನುಕೂಲವಾಗುತ್ತಿತ್ತು. ರೆಸ್ಟೋರೇಷನ್ ಕಾರ್ಯ ಸಹಾ ನಿಧಾನವಾಗಿದೆ. ದೊಡ್ಡ ದೊಡ್ಡ ಕೆರೆಗಳ ಸ್ಥಿತಿ ಉತ್ತಮವಾಗುತ್ತಿಲ್ಲ. ನೀರಾವರಿ ಯೋಜನೆ ಆಶಾದಾಯಕವಾಗಿದೆ ಎಂದು ಭಾಷಣದಲ್ಲಿ ಹೇಳಿರುವುದು ಸರಿಯಲ್ಲ ಎಂದು ಹೇಳಬಯಸುತ್ತೇನೆ. ಈ ವರ್ಷ ಸ್ವಲ್ಪ ಮಟ್ಟಿಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನವರು ನೀರಾವರಿ ಬಾವಿಗಳಿಗೆ ಹಣ ಕೊಟ್ಟಿದ್ದಾರೆ. ಸಾಲ ಕೊಡುವ ವಿಧಾನದಲ್ಲಿ ಇನ್ನೂ ಸ್ವಲ್ಪ ಸಡಿಲವಾಗಬೇಕು. ಕಂದಾಯದ 500 ಭಾಗ ಲೆಕ್ಕ ತೆಗೆದು ಹಣ ಕೊಡತಕ್ಕಂಥ ವ್ಯವಸ್ಥೆಯಿದೆ. ಇದನ್ನು ಒಂದು ಸಾವಿರ ರೂಪಾಯಿಯವರೆಗೆ ಮಾಡಬೇಕು. ಅಲ್ಲದೆ ಹಣವನ್ನು ಎರಡು ಕಂತುಗಳಲ್ಲಿ ಕೊಡುವ ಹಾಗೆ ಮಾಡಿದರೆ ಅನುಕೂಲವಾಗುತ್ತದೆ. ಇದರಲ್ಲಿ ಅನುಸರಿಸುವ ಪ್ರೊಸೀಜರ್ ಕೂಡ ಅನುಕೂಲವಾಗಿಲ್ಲ. ಅದನ್ನು ಸ್ವಲ್ಪ ಮಟ್ಟಿಗೆ ಸಡಲಿಸಿ ಹೆಚ್ಚು ಬಾವಿಗಳಿಗೆ ಅನುಕೂಲವಾಗಿರುವ ರೀತಿಯಲ್ಲಿ ಕೊಡಬೇಕು ಎಂದು ಹೇಳುತ್ತೇನೆ.

ಈ ಪಂಚವಾರ್ಷಿಕ ಯೋಜನೆಯಲ್ಲಿ ಒಂದು ಲಕ್ಷ ಪಂಪ್ ಸೆಟ್‌ಗಳನ್ನು ಒದಗಿಸುತ್ತೇವೆ, ಹಾಗೂ ವಿದ್ಯುತ್ ಶಕ್ತಿ ಒದಗಿಸುತ್ತೇವೆ ಎಂಬ ಆಶಾದಾಯಕವಾದ ಒಂದು ಮಾತು ಹೇಳಿದ್ದಾರೆ. ಆದರೆ ಈಗ ನಡೆದುಕೊಂಡು ಬಂದಿರುವುದನ್ನು ನೋಡಿದರೆ ಖಂಡಿತವಾಗಿ ಬಹಳ ನಿಧಾನವಾಗುತ್ತಿದೆ. ಹೆಚ್ಚೆಚ್ಚು ಸಂಖ್ಯೆಯಲ್ಲಿ ಬಾವಿಗಳಿಗೆ ವಿದ್ಯುತ್ ಶಕ್ತಿ ಒದಗಿಸತಕ್ಕಂಥ ವ್ಯವಸ್ಥೆಯಾಗಬೇಕು. ಐದು ವರ್ಷಗಳಲ್ಲಿ ಕೊಡತಕ್ಕಂಥ ಪಂಪ್ ಸೆಟ್ಸ್ ಎರಡು ವರ್ಷಗಳಲ್ಲಿ ಕೊಡುವ ವ್ಯವಸ್ಥೆಯಾಗಬೇಕು ಎಲ್ಲಾ ನೀರಾವರಿ ಯೋಜನೆಯ ಬಾವಿಗಳಿಗೆ ಪಂಪ್ ಸೆಟ್ಸ್ ಮತ್ತು ವಿದ್ಯುತ್ ಶಕ್ತಿ ಒದಗಿಸಿ ಕೊಟ್ಟರೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ.

ಐದು ವರ್ಷಗಳಲ್ಲಿ ಪ್ರತಿಯೊಂದು ಹಳ್ಳಿಗೂ ವಿದ್ಯುತ್ ಶ್ಚಕ್ತಿ ಕೊಡುತ್ತೇವೆಂದು ಸಂಕ್ಷೇಪದ ವಿಷಯ ತಿಳಿಸಿದ್ದಾರೆ. ಆದರೆ ನಮ್ಮ ದೊಡ್ಡಬಳ್ಳಾಪುರ ತಾಲ್ಲೂಕಿನಲ್ಲಿ ಹೋಬಳಿ ಹೆಡ್ ಕ್ವಾರ್ಟರ್ಸ್‌ಗೆ ವಿದ್ಯುತ್‌ಚ್ಛಕ್ತಿ ದೊರೆತಿಲ್ಲ. ಪ್ರತಿಯೊಂದು ಹಳ್ಳಿಗೆ ಕೊಡುತ್ತೇವೆಂದು ಹೇಳುವುದನ್ನು ನಂಬುವುದಕ್ಕಾಗುವುದಿಲ್ಲ. ಆದುದರಿಂದ ಹಳ್ಳಿಗಳಿಗೆ ವಿದ್ಯುತ್‌ಚ್ಛಕ್ತಿ ಒದಗಿಸಿ ಅನುಕೂಲ ಮಾಡಿಕೊಡುತ್ತಿರುವಾಗ ಹಾಗೆ ಅದೇ ರೀತಿಯಲ್ಲಿ ಹಳ್ಳಿಗಳಿಗೆ ವಿದ್ಯುತ್‌ಚ್ಛಕ್ತಿ ಕೊಟ್ಟು ನೀರಾವರಿ ಭಾವಿಗಳಿಗೆ ಅನುಕೂಲ ಮಾಡಿ ಕೊಟ್ಟರೆ ಹೆಚ್ಚು ಆಹಾರ ಉತ್ಪತ್ತಿಯಾಗುತ್ತದೆಂದು ಹೇಳಲು ಇಚ್ಛಿಸುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಯ ಬಗ್ಗೆ ಹೇಳುವುದಾದರೆ, ಈ ಇಲಾಖೆಗೆ ಹಣ ಬೇಕಾದಷ್ಟು ಇರಬಹುದು. ಆದರೆ ಕೇವಲ 10–15 ಸಾವಿರ ರೂಪಾಯಿ ಕೆಲಸಗಳ ಮಂಜೂರಾತಿಗಾಗಿ ದೊಡ್ಡ ದೊಡ್ಡ ಅಧಿಕಾರಿಗಳ ಕಡೆಗೆ ಕಾಗದಗಳು ಹೋಗಬೇಕು. ಇದಲ್ಲದೆ ಸಣ್ಣ ಸಣ್ಣ ಕೆಲಸ ಕಾರ್ಯಗಳು ನಡೆಯದೆ ನಿಂತು ಹೋಗಿವೆ. ಎಗ್ಸಿಕ್ಯೂಟಿವ್ ಎಂಜಿನಿಯರ್ ಅವರಿಗೆ 20 ಸಾವಿರ ರೂಪಾಯಿ ಕೆಲಸಗಳ ಮಂಜೂರಾತಿ ಮಾಡತಕ್ಕಂಥ ಅಧಿಕಾರ ಕೊಡಬೇಕು ಎಂದು ಕಳೆದ ಐದು ವರ್ಷಗಳಿಂದ ಈ ಮಾನ್ಯ ಸಭೆಯಲ್ಲಿ ಒತ್ತಾಯ ಮಾಡಿದ್ದೇವೆ. ಇದು ಮಂಜೂರಾಗಿಲ್ಲ, ಇದರಿಂದ ಕಷ್ಟವಾಗಿದೆ. ಇದಲ್ಲದೆ ಸ್ಪಿಲ್‌ಓವರ್ ವರ್ಕ್ಸ್ ಬಗ್ಗೆ ಕ್ರಮ ತೆಗೆದುಕೊಂಡು ಹಣ ತೋರಿಸಿರುವುದು ಸಂತೋಷ. ಆದರೆ ಹಣ ಖರ್ಚುಮಾಡತಕ್ಕಂಥ ವಿಧಾನ ಸಂತೋಷಕರವಾಗಿಲ್ಲ. ನಮ್ಮ ತಾಲ್ಲೂಕಿನಲ್ಲಿ ಕಳೆದ ಐದು ವರ್ಷಗಳಿಂದ 5 ಕೆರೆಗಳ ಕೆಲಸ ಸಂಪೂರ್ಣವಾಗಿ ಆಗದೆ ನಿಂತು ಹೋಗಿದೆ. ಸ್ಪಿಲ್‌ಓವರ್ ವರ್ಕ್ಸ್ ಐದು ವರ್ಷ ಹತ್ತು ವರ್ಷವಾದರೂ ನಿಂತು ಹೋಗಿರುವುದರಿಂದ ಹೊಸ ಕೆಲಸಗಳ ಮಂಜೂರಾತಿಗೆ ಅನಾನುಕೂಲವಾಗಿದೆ. ನೀರಾವರಿ ಕಾಮಗಾರಿಗಳು ಏನೂ ಆಗುತ್ತಿಲ್ಲ ಎಂದು ಒತ್ತಾಯ ಪೂರ್ವಕ ಹೇಳುತ್ತೇನೆ. ಸಣ್ಣ ಸಣ್ಣ ಕೆರೆಗಳ ವಿಚಾರದಲ್ಲಿ ಹೆಚ್ಚು ಗಮನ ಕೊಡಬೇಕು ಎಂದು ಹೇಳುತ್ತೇನೆ. ದೇಶದಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಈ ಯೋಜನೆಗಳಿಂದ ದೇಶಕ್ಕೆ ಹೆಚ್ಚು ಪ್ರಯೋಜನವಾಗುತ್ತದೆ ಎಂಬುದನ್ನು ಕೇಳಿ ಸಂತೋಷವಾಯಿತು. ಆದರೆ ಹಳ್ಳಿಯ ಮಟ್ಟದಲ್ಲಿ ತಾಲ್ಲೂಕ ಮಟ್ಟದಲ್ಲಿ ಸರಿಯಾದ ರೀತಿಯಲ್ಲಿ ಕೆಲಸವಾಗುತ್ತಿಲ್ಲ ಎಂಬುದನ್ನು ಸರಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಇದಕ್ಕೆ ಸರಕಾರ ಗಮನ ಕೊಡಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

ಶ್ರೀ ಚುರ್ಚಿಹಾಳ್‌ಮಠ (ಮುಂಡರಗಿ).—ಸಭಾಪತಿಯವರೇ, ಇಂದು 1967-68ನೇಯ ವರ್ಷ ಆಯುವ್ಯಯಪಟ್ಟಿಯನ್ನು ನಮ್ಮ ರಾಜ್ಯದ ಹಣಕಾಸಿನ ಮಂತ್ರಿಗಳಾದ ರಾಮಕೃಷ್ಣ ಹೆಗಡೆಯವರು ಪರಿಸ್ಥಿತಿಗನುಗುಣವಾಗಿ ಯೋಗ್ಯವಾಗಿ ಸಮರ್ಪಕವಾಗಿ ನೀಡಿದ್ದಾರೆಂಬ ವಿಷಯವನ್ನು ಸ್ವಾಗತಿಸಿ ಅದರ ಬಗ್ಗೆ ನಾಲ್ಕು ಮಾತುಗಳನ್ನು ಹೇಳುತ್ತಿದ್ದೇನೆ ಹತ್ತು ವರ್ಷಗಳ ಪ್ರಗತಿಯನ್ನು ನಾವು ನೋಡಿದಾಗ ಅಂಕಿಸಂಖ್ಯೆಗಳ ರೀತಿಯಲ್ಲಿ ಸಾಕಷ್ಟು ಪ್ರಗತಿಯಾಗಿದೆ ಎಂಬುದು ಸ್ಪಷ್ಟವಾಗುತ್ತದೆ, ಮತ್ತು ಆಹಾರದ ಸ್ವಾವಲಂಬನೆ ವಿಷಯದಲ್ಲಿ ಸಾಕಾದಷ್ಟು ಹೆಚ್ಚಳವಾಗಿದೆ ಎಂಬುದು ವಿಶೇಷ ಗಮನಾರ್ಹವಾಗಿದೆ. 1957-58ರಲ್ಲಿ 3 ಲಕ್ಷ ಟನ್ ಆಹಾರ ಧಾನ್ಯಗಳ ಉತ್ಪನ್ನವಿದ್ದುದು ಮುಂದೆ 1966-67ರಲ್ಲಿ 47ಲಕ್ಷ ಟನ್ನಿಗೆ ಹೆಚ್ಚಿದೆ. ಹೀಗೆ ಹೆಚ್ಚು ಉತ್ಪತ್ತಿಯನ್ನು ಮಾಡಿ ಆಹಾರದ ಕೊರತೆಯನ್ನು ನೀಗಲಾಗಿದೆ. ಆದರೂ ಕೂಡ ಕೊರತೆ ಪೂರ್ತಿಯಾಗಿ ನಿವಾರಣೆಯಾಗಿಲ್ಲವೆಂಬ ಕೂಗಿದೆ. ಕಾರಣ ಆಹಾರದ ಬೆಳೆಹೆಚ್ಚಿದಂತೆಲ್ಲಾ ಜನಸಂಖ್ಯೆಯೂ ಬೆಳೆಯುತ್ತಲೇ ಇದೆ. ಇದಕ್ಕೆ ಕಡ್ಡಾಯವಾಗಿ ಫ್ಯಾಮಿಲಿ ಪ್ಲಾನಿಂಗ್ ಯೋಜನೆಯನ್ನು ಕಾರ್ಯರೂಪಕ್ಕೆ ತಂದರೆ ನಾವು ಬೆಳೆಯುತ್ತಿರುವ ಆಹಾರ ನಮಗೆ ಸಾಲಬಹುದು ಎಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

(ಶ್ರೀ ಚೌರ್ಡಿಹಾಳ್‌ಮಠ)

ಇನ್ನು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ನೀತಿಯನ್ನು ಮತ್ತು ಇಲಾಖೆಯನ್ನು ಸ್ವಾಗತಿಸಿ ಬರೀ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದಾಕ್ಷಣ ನೀರಾವರಿ ಯೋಜನೆಗಳು ಯಶಸ್ವಿಯಾಗುತ್ತವೆಂದು ನಾವು ತಿಳಿಯುದಕ್ಕಾಗುವಂತಿಲ್ಲ. ಏಕೆಂದರೆ ಅನೇಕ ಕಡೆಗಳಲ್ಲಿ ಬಾವಿಗಳಿವೆ, ವಿದ್ಯುಚ್ಛಕ್ತಿಯಿದೆ. ಆದರೆ ನಾವು ನೀರಾವರಿ ಮಾಡಿ ಕೊಳ್ಳುವಷ್ಟು ನೀರು ಸಿಕ್ಕದಿರುವ ಉದಾರಣೆಗಳು ಸಾಕಾದಷ್ಟಿವೆ. ಬಾವಿಗಳಿಗೆ ಕೊಡುತ್ತಿರುವ ಸಾಲಭ್ಯ, ಪಂಪುಗಳಿಗೆ ಕೊಡುತ್ತಿರುವ ಸಾಲ ಮುಂತಾದುವುಗಳ ಅಂಕಿಅಂಶ ನೋಡಿದರೆ ಸರಕಾರ ಅನೇಕ ಕಡೆ ಸಹಾಯಮಾಡಿರುವುದು ಕಂಡುಬರುವುದು. ನಮ್ಮ ಮುಂಡರಗಿ ಮತ್ತು ನರಗುಂದ ತಾಲ್ಲೂಕು ವಿಶೇಷ ಬರಗಾಲ ಪ್ರದೇಶ, 30 ವರ್ಷಗಳಲ್ಲಿ 22ವರ್ಷ ಬರಬಂದಿದೆ, ಅಲ್ಲಿ ಸುದೈವದಿಂದ 12 ತಿಂಗಳೂ ಸತತವಾಗಿ ಹರಿಯುವ ಸಾಕಾದಷ್ಟು ಹಳ್ಳಗಳಿವೆ ಅದಕ್ಕೆ ಸರಕಾರದವರು ಪಂಪುಗಳನ್ನು ಒದಗಿಸಿ ಆ ನೀರನ್ನು ಜನರಿಗೆ ಪೂರೈಸಲು ಸಾಧ್ಯವಿದೆ, ಇದನ್ನು ಗಮನಿಸುವುದು ಅವಶ್ಯ. ಅಲ್ಲದೆ ಈಗ ತೆಗೆದಿರುವ ಬಾವಿಗಳಲ್ಲಿ ನೀರೇ ಸಿಕ್ಕದೆ ರೈತರಿಗೆ ನೀರಾವರಿ ಯೋಜನೆಗಳಿಗೆ ಬಹಳ ಅನಾನುಕೂಲವಾಗಿದೆ. ಇದಕ್ಕಾಗಿ ಬೋರಿಂಗ್ ಮೆಷೀನುಗಳನ್ನು ಸರಕಾರ ಒದಗಿಸಿ ಹೆಚ್ಚು ನೀರು ದೊರೆಯುವಂತೆ ವ್ಯವಸ್ಥೆ ಮಾಡಿದರೆ ಈ ಯೋಜನೆ ಯಶಸ್ವಿಯಾಗಬಲ್ಲದು ಎಂದು ಹೇಳಬಯಸುತ್ತೇನೆ. ಮತ್ತು ವಿದ್ಯುಚ್ಛಕ್ತಿ ಎಲ್ಲಾ ಕಡೆಯೂ ಬಂದಿದೆ. ನಮ್ಮ ತಾಲ್ಲೂಕಿನ ದಕ್ಷಿಣಕ್ಕೆ ತುಂಗಭದ್ರಾ ನದಿ ವಿಪುಲವಾಗಿ ಹರಿಯುತ್ತದೆ. ಸಿಂಗಟಾಲೂರ ಗ್ರಾಮದ ಹತ್ತಿರ ಲಿಫ್ಟ್ ಇರಿಗೇಷನ್ ಮಾಡಿದರೆ 10 ರಿಂದ 15 ಸಾವಿರ ಎಕರೆ ಗಳವರೆಗೆ ನೀರಾವರಿ ಆಗುತ್ತದೆ ಎಂಬ ಅಂದಾಜಿದೆ. ಇದಕ್ಕೆ ಅವಕಾಶ ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಇನ್ನು ಬೇಸಾಯಗಾರರಿಗೆ ಸಕಾಲದಲ್ಲಿ ಸಾಕಷ್ಟು ಬೀಜ, ಗೊಬ್ಬರ ಒದಗಿಸುತ್ತಿಲ್ಲ ಎಂಬ ಮಾತು ಇದುವರೆಗಿತ್ತು. ಇದನ್ನು ನೀಗಿಸಲು ಸರಕಾರ ಈಗ ಹೊಸ ಯೋಜನೆ ಮಾಡಿರುವುದು ಕೇಳಿ ಸಂತೋಷವಾಗಿದೆ. ಗೊಬ್ಬರವನ್ನು ರೈತರಿಗೆ ಹೆಚ್ಚುಹೆಚ್ಚಾಗಿ ಒದಗಿಸಿದರೆ ಉಪಯೋಗವಾಗಬಲ್ಲದು. ಇಂಥ ಮುಂದುವರೆದ ಕಾಲದಲ್ಲಿ ರಸ್ತೆ, ದವಾಖಾನೆ ಮೊದಲಾದುವುಗಳು ಹಿಂದುಳಿದ ಪ್ರದೇಶಗಳಿಗೊದಗಬೇಕಾದ್ದು ಬಹಳ ಅವಶ್ಯ. ನಮ್ಮ ತಾಲ್ಲೂಕಿನ ಅನೇಕ ಹಳ್ಳಿಗಳಿಗೆ ಬಂಡಿಯಲ್ಲಿ ಹೋಗುವುದಕ್ಕೆ ಕೂಡ ಸರಿಯಾದ ಅವಕಾಶವಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ತೀವ್ರಗತಿಯಲ್ಲಿ ಇಲ್ಲಿಗೆ ಅನುಕೂಲತೆಗಳನ್ನೊದಗಿಸಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಬರದೂರಿಂದ ಹಳ್ಳಿಗುಡಿ, ಬೆಳಧಡಿಯಿಂದ ಸೊರಟೂರು, ಹಮ್ಮಿಗಿ ಇಂದಾ ಡಂಬಳ, ಬಿದರಹಳ್ಳಿಇಂದಾ ಚಿಕ್ಕವಡ್ಡಟ್ಟಿ, ಗ್ರಾಮಗಳಿಗೆ 20 ವರ್ಷಗಳಿಂದಲೂ ರಸ್ತೆ ಸುಧಾರಿಸಿಲ್ಲಾ, ಇದನ್ನು ತೀವ್ರಗತಿಯಿಂದ ಸುಧಾರಿಸಬೇಕೆಂದು ಸೂಚಿಸುತ್ತೇನೆ. ಅನೇಕ ಕಡೆಗಳಿಗೆ ಹೆಲ್ತ್ ಯೂನಿಟ್ಟುಗಳನ್ನು ಮಂಜೂರುಮಾಡಿದ್ದಾರೆ. ಅವುಗಳಿಗೆ ಬೇಕಾದ ಕಟ್ಟಡಗಳಿಗೆ ಶಂಖುಸ್ಥಾಪನೆ, ಅಡಿಗಲ್ಲು ಹಾಕುವ ಸಮಾರಂಭ ಮುಂತಾದ ಕಾರ್ಯಗಳಾಗಿ ಬಹಳ ವರ್ಷಗಳಾದರೂ ಕಟ್ಟಡವಾಗಿಲ್ಲ, ದವಾಖಾನೆ ತೆರೆಯುವ ಕೆಲಸ ಕಾರ್ಯಗತವಾಗಿಲ್ಲ. ಲಕ್ಕುಂಡಿ, ಮತ್ತು ಇನ್ನೂ ಅನೇಕ ಕಡೆ ಇಂಥ ಉದಾಹರಣೆಗಳಿವೆ. ಅಲ್ಲದೆ ಅನೇಕ ಕಡೆ ಎಸ್. ಟಿ. ಬಸ್ಸು ಓಡಾಡುವ ಜಾಗದಲ್ಲಿ ವಸತಿ ಸೌಕರ್ಯವಿಲ್ಲ, ಪ್ರವಾಸಿಗರಿಗೆ ಬೇಕಾದ ಸ್ಟ್ಯಾಂಡ್ ಕಟ್ಟಡವಾಗಿಲ್ಲ, ಈ ಸಂಬಂಧವಾದ ಕೆಲಸ ಮಂಜೂರಾಗಿದ್ದರೂ ಕಾರ್ಯಗತವಾಗಿಲ್ಲ. ಮುಂಡರಗಿ, ಲಕ್ಕುಂಡಿ, ನರೇಗಲ್ ಮುಂತಾದ ಕಡೆಗಳಲ್ಲಿ ಈ ಕೆಲಸ ತೀವ್ರವಾಗಿ ಆಗಬೇಕು. ಕೊರ್ಲಹಳ್ಳಿ, ಶೀರನಹಳ್ಳಿ, ಕಕ್ಕೂರ್ ಹೊರತಾದ ಗ್ರಾಮಗಳು ತುಂಗಭದ್ರಾ ಮುಳುಗಡೆಯಲ್ಲಿ ಹೋದವುಗಳನ್ನು ತೀವ್ರ ಅಕ್ವಯರ್ ಮಾಡಿ ಹೊಸನಿವೇಶನ ವ್ಯವಸ್ಥೆಯಾಗಬೇಕು. ಹಿಂದೂಸ್ಥಾನ ದಲ್ಲಿ ನಮ್ಮದೇ ಆದ ಸರಕಾರದ ಆಡಳಿತವಿರುವ ವೇಳೆಯಲ್ಲಿ ಪರರಾಷ್ಟ್ರದ ಅಲೋಪತಿ ವೈದ್ಯಕೀಯ

ವ್ಯವಸಾಯಕ್ಕೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತಿರುವ ನಮ್ಮ ದೇಶದಲ್ಲಿ ಇಲ್ಲೇ ಹುಟ್ಟಿಬೆಳೆದ ಆಯುರ್ವೇದಕ್ಕೆ ಅಷ್ಟೊಂದು ಪ್ರೋತ್ಸಾಹವಿಲ್ಲ. ಈಗ ನಾಲ್ಕನೆಯ ಪಂಚವಾರ್ಷಿಕ ಯೋಜನೆಯಲ್ಲಿ 73 ಲಕ್ಷ ರೂಪಾಯಿ ಮಂಜೂರಾಗಿರುವುದು ಕೂಡ ಹಾಗೆಯೋ ಉಳಿಯದೆ ಯೋಗ್ಯ ರೀತಿ ಖರ್ಚುಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ. ಹೊಸದಾಗಿ ಕಾಲೇಜುಗಳನ್ನು ಸ್ಥಾಪಿಸಿ ನಡೆಸುವುದಕ್ಕಿಂತ ಇರುವ ಕಾಲೇಜುಗಳಿಗೇ ಪ್ರೋತ್ಸಾಹ ಕೊಟ್ಟು ಅವು ಸರಿಯಾಗಿ ನಡೆಯುಂತೆ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಸೂಚಿಸುತ್ತೇನೆ.

ಇವುಗಳನ್ನೆಲ್ಲಾ ನಾವು ಗಮನಕ್ಕೆ ತೆಗೆದುಕೊಂಡು ಕೆಲಸ ಮಾಡಬೇಕಾಗಿದೆ. ನಾವು ಈ ಸಭೆಯಲ್ಲಿ ಬೇರೆ ಬೇರೆ ಸ್ಥಾನಮಾನಗಳನ್ನು ಹೊಂದಿದ್ದೇವೆ. ಆಡಳಿತ ಪಕ್ಷ, ವಿರೋಧ ಪಕ್ಷದಲ್ಲಿ ಏನೇ ಭಿನ್ನಾಭಿಪ್ರಾಯಗಳಿದ್ದರೂ ಕಲ್ಯಾಣ ರಾಜ್ಯ ಸ್ಥಾಪನೆ ಮಾಡಬೇಕು ಎನ್ನುವುದು ಏಕೈಕ ಗುರಿಯಾಗಿರುವುದರಿಂದ ನಾವೆಲ್ಲರೂ ಒಂದಾಗಿ ಅದನ್ನು ಸ್ಥಾಪನೆ ಮಾಡಲಿಕ್ಕೆ ನಾವುಗಳು ಮಾಡತಕ್ಕ ರಚನಾತ್ಮಕ ಟೀಕೆಗಳನ್ನು ಸರ್ಕಾರ ಗಮನಿಸುತ್ತದೆ ಎಂದು ನಂಬಿ ಈ ಸಭೆಯ ಮುಂದೆ ಮಂಡಿಸಿರತಕ್ಕ ಈ ಆಯವ್ಯಯ ಪತ್ರವನ್ನು ನಾನು ಸಹಾನುಭೂತಿ ಪೂರ್ವಕವಾಗಿ ಸ್ವಾಗತಿಸುತ್ತೇನೆ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತಾ ಇದ್ದೇನೆ.

4-30 P.M.

[Mr. SPEAKER in the Chair]

†ಶ್ರೀ ಕೆ. ರತ್ನಕುಮಾರ ಶೆಟ್ಟಿ (ಮೂಡಬಿದ್ರಿ).—ಮಾನ್ಯ ಅರ್ಥಿಕ ಮಂತ್ರಿಗಳು ಮಂಡಿಸಿದ ಈ ಭಾಷಣದ ಬಗ್ಗೆ ನಾನು ಕೆಲವು ವಿಚಾರಗಳನ್ನು ಹೇಳಲಿಕ್ಕೆ ಇದ್ದೇನೆ. ನಾವು ಹೊಸಬರಾಗಿ ಈ ವಿಧಾನ ಸಭೆಗೆ ಸದಸ್ಯರಾಗಿ ಬಂದಿದ್ದೇವೆ. ನಮಗೆ ಅನುಭವ ಕಡಿಮೆ ಇದ್ದರೂ ಕೆಲವು ವಿಚಾರಗಳನ್ನು ನಾವು ಹೇಳಲಿಕ್ಕೆ ಇದ್ದೇವೆ. ಪ್ರಸ್ತುತ ಈ ಕಾಂಗ್ರೆಸ್ ಸರ್ಕಾರದಿಂದ ನಮ್ಮ ಕೃಷಿಯ ಅಭಿವೃದ್ಧಿಗೆ, ಅದರಲ್ಲೂ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಹಾನಿಯಾಗಿದೆ ಎಂದು ತಿಳಿಸುತ್ತೇನೆ. ಈ ವಿಚಾರದಲ್ಲಿ ಒಂದು ಪುಸ್ತಕ ಬರೆದಿದ್ದೆ, ಅದನ್ನು ಸನ್ಮಾನ್ಯ ಅಧ್ಯಕ್ಷರ ಸಮ್ಮುಖದಲ್ಲಿ ಈ ದಿನ ಅರ್ಪಿಸಿದ್ದೇನೆ. ಆ ಪುಸ್ತಕದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿ ಯಾವ ರೀತಿಯಲ್ಲಿ ಇತ್ತು, ಈಗಿನ ಪರಿಸ್ಥಿತಿ ಏನಾಗಿದೆ, ಮುಂದೆ ಏನಾಗಬಹುದು ಎಂಬ ವಿಚಾರವನ್ನು ತಿಳಿಸಿದ್ದೇನೆ. ಅರ್ಥಿಕ ಮಂತ್ರಿಗಳ ಭಾಷಣದಲ್ಲಿ ಕೃಷಿ ಅಭಿವೃದ್ಧಿಗೆ ಬಹಳ ಸಹಾಯ ಇದೆ ಅಂತ ಹೇಳಿ ತಿಳಿಸಿದ್ದಾರೆ, ಅದನ್ನು ನಾನು ಖಂಡಿತ ಒಪ್ಪುವುದಿಲ್ಲ. ಏಕೆ ಎಂಬ ವಿಚಾರವನ್ನು ಕೇಳುವುದಾದರೆ, 1957 ನೇ ಇಸವಿಯಲ್ಲಿ ಭೂಸುಧಾರಣೆಯ ಕಾನೂನನ್ನು ತರುತ್ತೇನೆ. ಅದರಿಂದ ಬಂದ ಭೂಮಿಯನ್ನು ಒಕ್ಕಲುಗಳಿಗೆ ಹಂಚುತ್ತೇವೆ ಎಂದು ಹೇಳಿ ಈ ಕಾಂಗ್ರೆಸ್ ಸರ್ಕಾರ ಘೋಷಣೆಯನ್ನು ಮಾಡಿತು. ಅದರ ಪರಿಣಾಮವಾಗಿ ಅಹಾರದ ಅಭಾವ ಉಂಟಾಗಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ತೊಂದರೆಯಾಗಿದೆ ಎಂದು ತಿಳಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಕೃಷಿ ಪ್ರಾಧಾನ್ಯವಾದ ಜಾಗ. ಅದು ಕೃಷಿಗೆ ಸಂಬಂಧಪಟ್ಟ ಜಾಗವೇಹೊರತು ಇನ್ನಾವ ಉದ್ಯಮ ಅಥವಾ ಕಾರ್ಖಾನೆಗಳನ್ನು ಸ್ಥಾಪಿಸುವುದಕ್ಕೆ ಸಂಬಂಧಪಟ್ಟ ಸ್ಥಳ ಅದು ಅಲ್ಲ ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಭೂಸುಧಾರಣೆ ಜಾರಿಗೆ ಬಂದ ನಂತರ ಬಹಳ ಅನಾಹುತವಾದಂತಹ ಪರಿಸ್ಥಿತಿ ಉಂಟಾಗಿದೆ ಎಂದು ಅನಿಸುತ್ತಾ ಇದೆ. ಭೂಸುಧಾರಣಾ ಕಾನೂನು ಜಾರಿಗೆ ಬರುತ್ತದೆ ಎಂಬ ಹೆದರಿಕೆಯಿಂದ ದಕ್ಷಿಣ ಕನ್ನಡ ಜಿಲ್ಲೆಯ ಭೂಮಾಲೀಕರು ಗುಲ್ಲನ್ನು ಎಬ್ಬಿಸಿ ಕೆಲವು ಹಳ್ಳಿಗಳಲ್ಲಿ ಅಡಿಕೆ ತೋಟಗಳನ್ನು ಮಾಡಿದ್ದಾರೆ ಮತ್ತು ಇನ್ನು ಕೆಲವು ಕಡೆ ಆ ಗದ್ದೆಗಳಿಂದ ಮಣ್ಣನ್ನು ತೆಗೆದು ಹೆಂಚಿನ ಕಾರ್ಖಾನೆಗಳಿಗೆ ರವಾನಿಸಿದ್ದಾರೆ. ಆ ರೀತಿ ಮಾಡಿ ಅ ಭೂಮಿಯಲ್ಲಿ ಆಗುತ್ತಿದ್ದ ಕೃಷಿಯನ್ನು ನಾಶ ಮಾಡಿದ್ದಾರೆ. ಅಷ್ಟೆ ಅಲ್ಲದೆ ಮಂಗಳೂರು, ಉಡುಪಿ ಇಂತಹ ಕಡೆಗಳಲ್ಲಿ ಗದ್ದೆ ಇದ್ದ ಕಡೆಗಳಲ್ಲಿ ಕಟ್ಟಡಗಳನ್ನು ಕಟ್ಟಿದ್ದಾರೆ.

(ಶ್ರೀ ಕೆ. ರತ್ನಕುಮಾರ ಶೆಟ್ಟಿ)

ಕೃಷಿ ಆಗುತ್ತಿದ್ದ ಫಲವತ್ತಾದ ಗದ್ದೆ ಜಾಗ ನಾಶವಾದುದು ಮಾತ್ರವಲ್ಲದೆ ಅಲ್ಲಿ ಬರುತ್ತಿದ್ದ ಫಸಲು ನಷ್ಟವಾಯಿತು. ಕೆಲವು ಸಂದರ್ಭಗಳಲ್ಲಿ ಗದ್ದೆಯನ್ನು ಕಳೆದುಕೊಂಡು ಜನರು ತಮಗೆ ಬರಬೇಕಾದ ಪ್ರತಿಫಲವನ್ನು ಪಡೆಯಲು ಕೋರ್ಟು ಕಛೇರಿಗಳಿಗೆ ಅಲೆಯುತ್ತಿದ್ದಾರೆ. ಕೃಷಿ ಆಗಲಿ, ಅದರ ಅಭಿವೃದ್ಧಿಯಾಗಲಿ ಆಗಬೇಕೆಂಬ ಭಾವನೆ ಯಾರಲ್ಲೂ ಇಲ್ಲ. ಮಾತ್ರವಲ್ಲದೆ ಬಂದರು ಯೋಜನೆಗೆ ಮತ್ತು ಗೊಬ್ಬರದ ಕಾರ್ಖಾನೆ ಸ್ಥಾಪನೆ ಮಾಡಲಿಕ್ಕೆ ಎಂದು ಹೇಳಿ ಸಾವಿರಾರು ಎಕರೆ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿದ್ದಾರೆ. ಗೊಬ್ಬರದ ಕಾರ್ಖಾನೆ ಮಾಡಬಾರದು ಅಥವ ಬಂದರು ರಚನೆ ಮಾಡಬಾರದು ಅಂತ ಹೇಳಿ ನನ್ನ ಉದ್ದೇಶವಲ್ಲ. ಬಂದರು ರಚನೆಯಾಗಬೇಕು, ಗೊಬ್ಬರದ ಕಾರ್ಖಾನೆ ಆಗಬೇಕು. ಆದರೆ ಬಹಳ ಬೆಲೆ ಬಾಳುವ ನಮ್ಮ ಗದ್ದೆಯನ್ನು ನಾಶಮಾಡಿ ಗೊಬ್ಬರದ ಕಾರ್ಖಾನೆಯಾಗಲಿ ಬಂದರು ಆಗಲಿ ಆಗಬಾರದು ಎಂಬ ಮಾತನ್ನು ಹೇಳುತ್ತಾ ಇದ್ದೇನೆ. ಗದ್ದೆ ಇಲ್ಲದೇ ಇದ್ದರೂ ಪರವಾಗಿಲ್ಲ, ಗೊಬ್ಬರದ ಕಾರ್ಖಾನೆ ಆಗಬೇಕು ಎನ್ನುವಂತಹ ಭಾವನೆಯನ್ನು ತಾಳುತ್ತಾ ಇದ್ದಾರೆ. ಅಂತಹ ಕೆಲಸ ಆಗಬಾರದು ಎನ್ನುವಂತಹ ಮಾತನ್ನು ಒತ್ತಾಯಪೂರ್ವಕವಾಗಿ ಹೇಳುತ್ತಾ ಇದ್ದೇನೆ. ಮಾತ್ರವಲ್ಲದೆ ಅನೇಕ ಭಾಗಗಳಲ್ಲಿ ಜಮೀನಿನ ಸಲುವಾಗಿ ಧನಿ ಒಕ್ಕಲುಗಳಲ್ಲಿ ಕಚ್ಚಾಟ ನಡೆದು ಈಗ 7 ವರ್ಷಗಳಿಂದ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಫಲವತ್ತಾದ ಗದ್ದೆ ಜಮೀನು ಬಂಜರು ಬಿದ್ದಿದೆ. ಈ ಧನಿ ಒಕ್ಕಲು ಕಚ್ಚಾಟದ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೂ ಸಂಬಂಧಪಟ್ಟ ಇಲಾಖೆಗಳವರಿಗೂ ಎಷ್ಟೋ ಸಾರಿ ತಿಳಿಸಿದರೂ ಅವರು ಯಾವ ತರಹದ ಕಾರ್ಯಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಮಾತ್ರವಲ್ಲದೆ ಕಳೆದ ವರ್ಷ ಯೂನಿಯನ್ ಸೆಂಟ್ರಲ್ ಗವರ್ನಮೆಂಟ್ ಅಗ್ರಿಕಲ್ಚರಲ್ ಮಿನಿಸ್ಟರಿಗೂ, ಮತ್ತು ಫುಡ್ ಮಿನಿಸ್ಟರ್ ಸುಬ್ರಹ್ಮಣ್ಯಂ ಅವರಿಗೂ ಕೂಡ ಬರೆದು ಆಹಾರದ ಉತ್ಪಾದನೆಯ ದೃಷ್ಟಿಯಿಂದ ಈ ಒಂದು ಸಮಸ್ಯೆಯನ್ನು ಪರಿಹಾರ ಮಾಡಬೇಕೆಂದು ತಿಳಿಸಿದರೂ ಕೂಡ ಈ ವರೆಗೂ ಯಾವ ಕ್ರಮವನ್ನೂ ತೆಗೆದುಕೊಂಡಿಲ್ಲ. ಈಗಲಾದರೂ ಖಡ್ಡಾಯವಾಗಿ ಈ ವಿಚಾರದಲ್ಲಿ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಾ ಇದ್ದೇನೆ. ಮಾತ್ರವಲ್ಲದೆ ಶ್ಯಾನುಬೋಗ, ಪಟೇಲಿಕೆ ಹೋಗಬೇಕೆಂದು ಈಗಾಗಲೇ ಕಾನೂನು ಮಾಡಿದ್ದಾಗಿದೆ. ಅವರಲ್ಲಿ ರಾಜಕೀಯ ಮನೋಭಾವನೆ ಇದೆ ಎಂದು ಈ ಮಾನ್ಯ ಸಭೆಯಲ್ಲಿ ಸದಸ್ಯರೊಬ್ಬರು ತಿಳಿಸಿದರು. ಅವರನ್ನು ತೆಗೆದು ಹಾಕುವುದು ಏನೋ ಆಗುತ್ತದೆ. ಆದರೆ ಅದರಿಂದ ಬಾಧಕ ಏನು ಆಗುತ್ತದೆ ಎಂಬುದನ್ನು ನಾನು ಹೇಳುತ್ತಾ ಇದ್ದೇನೆ. ಪಟೇಲ್ ಶ್ಯಾನುಭೋಗರನ್ನು ತೆಗೆದು ಅವರಿಗೆ ಬದಲಾಗಿ ಪಂಚಾಯ್ತಿ ಸೆಕ್ರೆಟರಿಯವರನ್ನು ನೇಮಕ ಮಾಡಬೇಕೆಂದು ಹೇಳುತ್ತಿದ್ದಾರೆ. ಪಟೇಲ್ ಶ್ಯಾನುಭೋಗರು ಸರ್ಕಾರದ ನೌಕರರು ಆಗಿರಲಿಲ್ಲ. ವಂಶಪಾರಂಪರ್ಯವಾಗಿ ಅವರು ಆ ಕೆಲಸವನ್ನು ಮಾಡಿಕೊಂಡು ಬರುತ್ತಾ ಇದ್ದರು. ಈಗ ಅವರನ್ನು ತೆಗೆದು ಸಂಬಳದ ಮೇಲೆ ಪಂಚಾಯ್ತಿ ಸೆಕ್ರೆಟರಿಗಳನ್ನು ಆ ಕೆಲಸಕ್ಕೆ ನೇಮಕ ಮಾಡುತ್ತೀರಿ. ಅವರು ಪಟೇಲ್ ಶ್ಯಾನುಭೋಗರ ಹಾಗೆ ಕೆಲಸ ಮಾಡಲಿಕ್ಕೆ ಖಂಡಿತ ಸಾಧ್ಯವಿಲ್ಲ. 55 ವರ್ಷ ವಯಸ್ಸು ಆಯಿತು ಎಂದರೆ ಅವರು ರಿಟೈರ್ ಆಗಬೇಕು. ಅವರಿಗೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ವರ್ಗಾವಣೆ ಮಾಡುತ್ತೀರಿ. ಮಾತ್ರವಲ್ಲದೆ ಗ್ರಾಮದ ಅನುಭವ ಅವರಿಗೆ ಏನೇನೂ ಇರುವುದಿಲ್ಲ. ಅವರು ಗ್ರಾಮಕ್ಕೆ ಹೊಸಬರಾಗಿರುತ್ತಾರೆ. ಹೀಗಿರುವಾಗ ಅವರಿಂದ ಹಿಂದೆ ಇದ್ದ ಪಟೇಲ್ ಶ್ಯಾನುಭೋಗರು ಏನು ಕೆಲಸ ಮಾಡುತ್ತಾ ಇದ್ದರೋ ಅಷ್ಟು ಕೆಲಸ ದಕ್ಷತೆಯಿಂದ ಮಾಡಲಿಕ್ಕೆ ಸಾಧ್ಯವಿಲ್ಲ ಎಂಬ ಮಾತನ್ನು ಹೇಳುತ್ತಾ ಇದ್ದೇನೆ. ಮಾತ್ರವಲ್ಲದೆ ಈ ಲೆವಿ ತರುವುದರಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಮೊದಲನೆಯದಾಗಿದೆ. ಆದರೂ ಕೂಡ ಅನೇಕ ವಿಧವಾದ ನಿಯಮಗಳನ್ನು ಹಾಕುತ್ತಾ ಇದ್ದಾರೆ. ನಮಗೂ ಕೂಡ ಒಂದು ಮೂಲಭೂತ ಹಕ್ಕು ಇದೆ. ಬಲಾತ್ಕಾರವಾಗಿ ಈ ರೀತಿ ಲೆವಿ ಪಡೆಯಲಿಕ್ಕೆ ತಮಗೆ ಸಾಧ್ಯವಿಲ್ಲ ಎಂಬ ಮಾತನ್ನು ಹೇಳುತ್ತಾ ಇದ್ದೇನೆ. ದಕ್ಷಿಣ ಕನ್ನಡ ಜಿಲ್ಲೆ ಕೃಷಿಗೆ ಪ್ರಧಾನ

ಪಾದ ಜಾಗ, ಕೃಷಿಗಾರಿಕೆಯಲ್ಲಿ ಬಿಟ್ಟು ಅಲ್ಲಿ ಬೇರೆ ಯಾವ ಉದ್ದಿಮೆ, ಕೈಗಾರಿಕೆಗಳಿಗೂ ಸರ್ಕಾರದವರು ಸಪೋರ್ಟ್ ಕೊಡಬಾರದು. ಅದಕ್ಕೆ ಬದಲು ಕೃಷಿಗಾರರಿಗೆ ಸರಿಯಾದ ಸಹಾಯ ಕೊಟ್ಟು ಅವರನ್ನು ಉದ್ಧಾರ ಮಾಡಬೇಕೆಂದು ಪುನರಾವರ್ತಿ ಹೇಳುತ್ತಾ ಇದ್ದೇನೆ. ಮಾತ್ರವಲ್ಲದೆ, ಹಳ್ಳಿಗೆ ಸಂಬಂಧಪಟ್ಟಂತೆ ಒಂದು ವಿಚಾರವನ್ನು ಹೇಳುವುದಾದರೆ ಹಳ್ಳಿಜನರು ಒಂದು ಸಣ್ಣ ಗುಡಿಸಲು ಕಟ್ಟಿಕೊಂಡರೆ ಪಂಚಾಯಿತಿ ಬೋರ್ಡಿನವರು ವರ್ಷಕ್ಕೆ 5–6 ರೂಪಾಯಿ ಟ್ಯಾಕ್ಸ್ ಹಾಕುತ್ತಾ ಇದ್ದಾರೆ. ಬಡ ಜನರು ಕೂಲಿ ಮಾಡಿ ಸಂಪಾದನೆ ಮಾಡಿಕೊಂಡು ಜೀವನ ನಡೆಸುವುದೇ ದುಸ್ತರ. ಅಂತಹದರಲ್ಲಿ ಈ ರೀತಿ ಟ್ಯಾಕ್ಸ್ ಕೊಡಬೇಕನ್ನುವುದು ಬಹಳವಾಗಿ ಅವರನ್ನು ತೊಂದರೆಗೆ ಸಿಲುಕಿಸಿದಂತಾಗುತ್ತದೆ. ಆ ರೀತಿ ಮಾಡಬಾರದು ಎಂದು ಹೇಳುತ್ತಾ ಇದ್ದೇನೆ. ಯಾರಿಗೆ ಬಲ ಇದೆಯೋ ಅವರು ಕೊಡಲಿ, ಬಲ ಹೀನರಾದವರಿಂದ ವಸೂಲು ಮಾಡುವುದು ನ್ಯಾಯವಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನನಗೆ ತಿಳಿದಮಟ್ಟಿಗೆ ಬಂದರಿನ ಯೋಜನೆ ಬಂದ ಸಲುವಾಗಿ ಈ ದಿನ ಮೂರು ಸಾವಿರದ ಆರನೂರು ಕುಟುಂಬಗಳವರು ತಮ್ಮ ಸ್ಥಳಗಳನ್ನು ಕಳೆದುಕೊಂಡು ನಿರುದ್ಯೋಗಿಗಳಾಗಿದ್ದಾರೆ. ಮಾತ್ರವಲ್ಲದೆ ಕಳ್ಳಭಟ್ಟಿ ಸಾರಾಯಿ ಮಾಡಲಿಕ್ಕೆ ಹತ್ತಿದ್ದಾರೆ. ಕಳ್ಳಭಟ್ಟಿ ಸಾರಾಯಿ ಕುಡಿದು ಜನ ದಿವಸ ಆಸ್ಪತ್ರೆಗಳಿಗೆ ಸೇರುತ್ತಾ ಇದ್ದಾರೆ. ಆದ್ದರಿಂದ ಪಾನನಿರೋಧವನ್ನು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ಹೇಳುತ್ತೇನೆ. ಹಾಗೆ ಮಾಡುವುದರಿಂದ ಪೋಲೀಸ್ ಇಲಾಖೆಯಲ್ಲಿ ನಡೆಯುತ್ತಿರುವ ಭ್ರಷ್ಟಾಚಾರವನ್ನೂ ಕೂಡ ತಪ್ಪಿಸಿದ ಹಾಗಾಗುತ್ತದೆ ಎಂದು ನಾನು ತಿಳಿಸುತ್ತೇನೆ.

ಒಟ್ಟಿನಲ್ಲಿ ನಾನು ಮುಖ್ಯವಾಗಿ ಹೇಳುವುದೇನೆಂದರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂದರು ಆಗಲಿ, ಗೊಬ್ಬರದ ಕಾರ್ಖಾನೆಯಾಗಲಿ ಇನ್ನಾವ ಕಾರ್ಖಾನೆಯಾಗಲಿ ಸ್ಥಾಪನೆ ಮಾಡಿ ಹತ್ತು ಸಾವಿರ ಎಕರೆ ಗದ್ದೆ ನಾಶ ಮಾಡಲಿಕ್ಕೆ ನಾವು ಖಂಡಿತ ಬಿಟ್ಟುಕೊಡುವುದಿಲ್ಲ. ಮಾತ್ರವಲ್ಲದೆ ಸಂಪೂರ್ಣ ಪಾನ ನಿರೋಧ ಮಾಡಬೇಕು ಮತ್ತು ಕಡ್ಡಾಯವಾಗಿ ಜಾರಿಗೆ ತರಬೇಕು ಎಂದು ನಾನು ಹೇಳುತ್ತೇನೆ. ಈ ಬೇಡಿಕೆಗಳನ್ನು ರಾಜ್ಯಸರ್ಕಾರದವರು ಈಡೇರಿಸದಿದ್ದರೆ ರಾಜ್ಯದ ವಿಭಜನೆಗೆ ಒತ್ತಾಯಪಡಿಸುವೆವು. ನಾವು ದಕ್ಷಿಣ ಕನ್ನಡ ಜಿಲ್ಲೆಯವರು, ಕಾಸರಗೋಡು, ಉತ್ತರ ಕನ್ನಡ ಜಿಲ್ಲೆಯವರು ಹಾಗೂ ಗೋವ ಪ್ರದೇಶಗಳಿಂದ ಕೂಡಿದ ಪ್ರತ್ಯೇಕ ಪರಶುರಾಮ ರಾಜ್ಯವನ್ನು ಸ್ಥಾಪಿಸುವೆವು. ದಕ್ಷಿಣ ಕನ್ನಡ ಜಿಲ್ಲೆಯ ಜನರು ನಾವು ಕನ್ನಡಿಗರಲ್ಲ, ತುಳು ಜನರು, ನಮ್ಮದು ಕೇವಲ ಬ್ರಹ್ಮ ಶಕ್ತಿ ಅಲ್ಲ, ಪರಶುರಾಮ ಶಕ್ತಿ, ಪರಶುರಾಮನ ಕೊಡಲಿಯೇ ನಮ್ಮ ಲಾಂಛನ.

ಇಂದಿನ ಸಂದರ್ಭದಲ್ಲಿ ಶ್ರೀಮಾನ್ ನಿಜಲಿಂಗಪ್ಪನವರು ಯಾವ ರೀತಿಯಲ್ಲಿ ಚುನಾವಣೆಯಲ್ಲಿ ಆರಿಸಿ ಈ ಸಭೆಗೆ ರಾಜ್ಯದ ಆಡಳಿತವನ್ನು ನಡೆಸುವುದಕ್ಕೆ ಬಂದಿದ್ದಾರೋ ಹಾಗೇ ನಾವು ಕೂಡ ಚುನಾವಣೆಗಳಿಗೆ ನಿಂತು ಹೋರಾಟ ಮಾಡಿ ಗೆದ್ದು ದೇಶದ ಅಭ್ಯುದಯವನ್ನು ಸಾಧಿಸುವುದಕ್ಕಾಗಿ ಇಲ್ಲಿ ವಿರೋಧಪಕ್ಷದಲ್ಲಿ ಬಂದು ಕುಳಿತಿದ್ದೇವೆ. ಈ ಹಿಂದೆ ಶ್ರೀಮಾನ್ ನಿಜಲಿಂಗಪ್ಪನವರು ಯಾವ ರೀತಿಯಾಗಿ ವಿರೋಧಪಕ್ಷದವರನ್ನು ಆಡಳಿತ ನಡೆಸತಕ್ಕ ಸರ್ಕಾರಕ್ಕೆ ಒಂದು ಸರಿಯಾದ ಮಾರ್ಗ ದರ್ಶನ ಮಾಡಬೇಕೆಂದು ಕೇಳಿಕೊಂಡಿದ್ದಾರೋ ಅದನ್ನು ಅವರು ಮರೆಯದೆ ಆಡಳಿತದ ಪ್ರತಿಯೊಂದು ವಿಚಾರದಲ್ಲೂ ಈ ನಮ್ಮ ವಿರೋಧ ಪಕ್ಷದವರ ಸಲಹೆಯನ್ನು ತಗೆದುಕೊಂಡು ದೇಶದ ಆಡಳಿತವನ್ನು ನಡೆಸಿದರೆ ಅದು ಉತ್ತಮವಾಗುತ್ತದೆ. ಇತ್ತಕಡೆ ಜನರಿಗೂ ಒಂದು ಸಮಾಧಾನ ಉಂಟಾಗುತ್ತದೆ. ಅದನ್ನು ಅವರು ಮರೆತು ಇತ್ತಕಡೆ ಇರತಕ್ಕವರನ್ನು ಒಂದು ವೈರಿ ವರ್ಗವೆಂದು ಭಾವಿಸಿ ಇವರ ವಿರೋಧವನ್ನು ಕಟ್ಟಿಕೊಳ್ಳಬಾರದು ಎಂದು ಮನವಿಮಾಡಿಕೊಂಡು ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಚ್. ಶ್ರೀನಿವಾಸ್ (ಸಾಗರ).—ಸನ್ಮಾನ್ಯ ಅಧ್ಯಕ್ಷರೇ; 1967–68 ನೆಯ ಸಾಲಿಗೆ ಸಂಬಂಧಪಟ್ಟ ಗಣನೀಯವಾದ ರೀತಿಯಲ್ಲಿ ಹೆಚ್ಚುವರಿ ಇರತಕ್ಕಂಥ ಒಂದು ಮುಂಗಡ

(ಶ್ರೀ ಕೆ. ಹೆಚ್. ಶ್ರೀನಿವಾಸ)

ಪತ್ರವನ್ನು ರಾಜ್ಯದ ಅರ್ಥಸಚಿವರು ಈ ಸಭೆಯ ಮುಂದೆ ಏನೊಂದು ಪ್ರಸ್ತುತಮಾಡಿದ್ದಾರೆ ಅಂಥ ಮುಂಗಡ ಪತ್ರದ ಬಗ್ಗೆ ನಾನೀಗ ಹೆಚ್ಚಿನ ವಿವರಣೆಗಳಿಗೆ ಹೋಗದೆ ಕೇವಲ ಕೆಲವು ಪ್ರಾಮುಖ್ಯವಾದ ವಿಚಾರಗಳ ಬಗ್ಗೆ ನಾನೀಗ ಕೆಲವು ಅಂಶಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಈಗ ನಮ್ಮ ಮುಂದೆ ಇರತಕ್ಕದ್ದು ಕೇವಲ 4 ತಿಂಗಳುಗಳ ಒಂದು ಬಡ್ಜೆಟ್ಟಾಗಿದೆ; ಇಷ್ಟು ಮೊಬಲಗನ್ನು ಸರ್ಕಾರದವರು ಒಂದು ಅಡ್ವಾನ್ಸ್ ಗ್ರಾಂಟ್‌ ರೂಪದಲ್ಲಿ ಕೇಳಿಕೊಂಡಿದ್ದಾರೆ. ನಮ್ಮ ವಿರೋಧಪಕ್ಷದವರು ಈ ಮುಂಗಡ ಪತ್ರದಲ್ಲಿ ತೋರಿಸಿರತಕ್ಕ ಹೆಚ್ಚುವರಿಯೇನಿದೆ ಅದು ಒಂದು ಆದರ್ಶ ಮುಂಗಡ ಪತ್ರವಾಗಿದ್ದರೂ, ಆ ಹೆಚ್ಚುವರಿ ನಿಜವಾದುದಲ್ಲ, ತೋರಿಕೆಗೆ ಮಾಡಿರತಕ್ಕದ್ದಾಗಿದೆ, ಎಂದು ತಮ್ಮ ಮನಸ್ಸಿನಲ್ಲಿ ಅನಾವಶ್ಯಕವಾದ ಭಾವನೆಗಳನ್ನು ತುಂಬಿಕೊಂಡು ಇಲ್ಲವೇ ಭಾವನಾಸ್ವಪ್ನಗಳನ್ನು ಕಾಣುತ್ತ ನಮ್ಮ ದೇಶದ ಆರ್ಥಿಕ ಪರಿಸ್ಥಿತಿಯನ್ನು ಅನೇಕ ರೀತಿಯಿಂದ ಸವಾಲು ಮಾಡುತ್ತಿದ್ದಾರೆ. ಇಂಥ ಒಂದು ಸಂದರ್ಭದಲ್ಲೂ ಅನೇಕ ಪತ್ರಿಕೆಗಳು ಮತ್ತು ಮೈಸೂರು ಛೇಂಬರ್ ಆಫ್ ಕಾಮರ್ಸ್‌ನಂಥ ಒಂದು ಸಂಸ್ಥೆಯವರೂ ಕೂಡ ಈ ಬಡ್ಜೆಟ್ಟನ್ನು ಇಂಥ ಒಂದು ಪರಿಸ್ಥಿತಿಯಲ್ಲೂ ಕೂಡ ಬಹಳ ಅತ್ಯುತ್ತಮವಾದ ಬಡ್ಜೆಟ್ಟಾಗಿದೆ ಎಂದು ಅವರಿದನ್ನು ಸ್ವಾಗತಿಸಿದ್ದಾರೆ. ನಾನು ಕೂಡ ಅದೇ ಭಾವನೆಯನ್ನಿಟ್ಟುಕೊಂಡು ಇದನ್ನು ಸ್ವಾಗತಿಸುತ್ತೇನೆ. ಗಣನೀಯವಾದ ಹೆಚ್ಚುವರಿಯ ಒಂದು ಮುಂಗಡಪತ್ರವನ್ನು ನಮ್ಮ ಮುಂದಿಟ್ಟಿದುದಕ್ಕಾಗಿ ನಾನು ಪ್ರಪ್ರಥಮವಾಗಿ ಅರ್ಥಸಚಿವರನ್ನು ಅಭಿನಂದಿಸಬೇಕಾಗಿದೆ. ಅದರೀಗ ಮುಖ್ಯವಾಗಿ ವಿರೋಧಪಕ್ಷದವರ ಒಂದು ಆರೋಪ ಈ ಮುಂಗಡ ಪತ್ರದ ಬಗ್ಗೆ ಏನಿದೆಯೆಂದರೆ–ಇದು ಒಂದು ಹೆಚ್ಚುವರಿಯ ಮುಂಗಡ ಪತ್ರವಲ್ಲ, ಇದೊಂದು ಹೆಚ್ಚುವರಿಯ ಮುಂಗಡಪತ್ರವೆಂದು ಹೇಳುತ್ತಿರುವುದು ಸತ್ಯಕ್ಕೆ ದೂರವಾದದ್ದು. ಇವರ ಈ ಆಪಾದನೆಯೇನಿದೆ, ಇದು ಹೋದವರ್ಷವೂ ಇತ್ತು; ಇದೇ ಟೀಕೆ ಮತ್ತು ಇದೇ ಅಭಿಪ್ರಾಯಗಳು ಕಳೆದ ಸಾಲಿನಲ್ಲೂ ಇದ್ದವು. ಕೆಲವು ಬಡ್ಜೆಟ್ಟುಗಳನ್ನು ತೋರಿಸಿ ಅವುಗಳು ರಿವೈಜಾದ ನಂತರ ಹೇಗೆ ಹೆಚ್ಚುವರಿ ಹಣ ಉಳಿಯುತ್ತದೆ ಎಂಬುದನ್ನು ತೋರಿಸಿದ್ದಾಗ್ಯೂ, ಇದು ನಿಜವಾದ್ದಲ್ಲ, ಇದೊಂದು ಸರ್ಕಸ್ ಎಂಬುದಾಗಿ ಹೇಳುವುದಕ್ಕೆ ಅವರಲ್ಲಿ ಯಾವ ಆಧಾರವು ಇಲ್ಲ; ಹಾಗೂ ಅವರ ಟೀಕೆಗಳು ಸಕಾರಣವಾಗಿಯೂ ಇಲ್ಲ ಎಂದು ಹೇಳಬಯಸುತ್ತೇನೆ.

ಇನ್ನು ಈ ಪ್ರಸಕ್ತ ಬಡ್ಜೆಟ್ ಭಾಷಣದಲ್ಲಿ ದೇಶದ ಎಲ್ಲಾ ಜನರ ಗಮನವನ್ನೂ ಪ್ರಾಮುಖ್ಯವಾಗಿ ಸೆಳೆಯುವಂಥ ಎರಡು ವಿಷಯಗಳು ಎಂದರೆ-ದೇಶದಲ್ಲಿರತಕ್ಕ ಪಾನನಿರೋಧಪದ್ಧತಿಯನ್ನು ಸರ್ಕಾರದವರು ಸಡಿಲಗೊಳಿಸುತ್ತೇವೆ ಎಂದು ಹೇಳಿರತಕ್ಕದ್ದು ಒಂದು, ಇನ್ನೊಂದು ರಾಜ್ಯದಲ್ಲಿ ಹಿಂದಿನಿಂದಲೂ ಜಾರಿಯಲ್ಲಿ ಬಂದಿದ್ದಂಥ ಭೂಕಂದಾಯವನ್ನು ರದ್ದುಮಾಡುತ್ತೇವೆಂದು ಹೇಳಿರತಕ್ಕದ್ದು. ಈ ಪಾನನಿರೋಧದ ವಿಚಾರವಾಗಿ ರಾಜ್ಯಪಾಲರ ಭಾಷಣದಲ್ಲಿ ಯಾವ ವಿಚಾರವೂ ಬಂದಿರಲಿಲ್ಲ. ಆದರೆ ಈ ವಿಚಾರ ಇತ್ತೀಚೆಗೆ ಅರ್ಥಸಚಿವರ ಭಾಷಣದಲ್ಲಿ ಹೊರಬಿದ್ದಿದೆ. ಅಷ್ಟೇ ಅಲ್ಲದೆ ಪಾನನಿರೋಧ ನೀತಿಯನ್ನು ಸಡಿಲಗೊಳಿಸುವುದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು ನಾಲ್ಕು ಕೋಟಿ ರೂಪಾಯಿಗಳಷ್ಟು ಹಣ ಬರಬಹುದೆಂದು ನಿರೀಕ್ಷಿಸಲಾಗಿದೆ ಎಂಬುದಾಗಿ ಅರ್ಥಸಚಿವರ ಭಾಷಣದಲ್ಲಿ ಉಲ್ಲೇಖಿತವಾಗಿದೆ. ಅಷ್ಟೇ ಅಲ್ಲದೆ ವರ್ಷಂಪ್ರತಿ ವೆಚ್ಚದ ತುಟ್ಟಿಭತ್ತೆಯ ಹೆಚ್ಚಳವು ಇರದಿದ್ದರೆ ನಮ್ಮ ಆರ್ಥಿಕಸ್ಥಿತಿಯು ಬಹಳ ಮಟ್ಟಿಗೆ ಉತ್ತಮವಾಗಬಹುದು ಎಂಬುದಾಗಿ ಹೇಳಿ ನಮ್ಮ ಒಂದು ಆರ್ಥಿಕ ಲಾಭದ ಪಕ್ಷೆಯನ್ನೇ ಹೆಚ್ಚಿಗೆ ಪ್ರಸ್ತಾಪಮಾಡಿರುವುದರಲ್ಲಿ ನನಗೇಕೋ ಸ್ವಲ್ಪ ಸಂಶಯವಲ್ಲ, ಸಂದೇಹ ಉಂಟಾಗಿದೆ. ಸಂದರ್ಭಾನುಸಾರ ಅಂಗೀಕೃತವಾದ ಕೆಲವು ನೀತಿಗಳನ್ನು ಅನೇಕ ಕಾರಣಗಳಿಂದ ಕೈ ಬಿಡಬೇಕಾಗಿ ಬರುತ್ತದೆ ಅದೂ ಕೂಡ ನ್ಯಾಯವೇ. ಆದರೇ ಈ ವಿಚಾರದಲ್ಲಿ ಅನೇಕರು ಅನೇಕ ರೀತಿಯಾಗಿ ಮಾತನಾಡುವುದಕ್ಕೆ ಅವಕಾಶವಿದೆ. ಆದರೆ ಶ್ರೀ ಸಾಮಾನ್ಯರಿಂದ ರಾಜ್ಯದ ಬೊಕ್ಕಸಕ್ಕೆ ಬರತಕ್ಕವರ

ಮಾನ ಅದು ಅಷ್ಟೇ ದೊಡ್ಡದಾಗಿದ್ದರೂ, ಬಡಜನರನ್ನು ಶೋಷಣೆಮಾಡಿ ಪಡೆಯತಕ್ಕ ವರಮಾನವನ್ನು ಸರ್ಕಾರದವರು ಸಂಪೂರ್ಣವಾಗಿ ಕೈಬಿಡಬೇಕಾದುದು ಅನಿವಾರ್ಯ. ಈ ನೀತಿಯನ್ನು ಸಡಿಲಗೊಳಿಸುವುದರಿಂದ ಹೆಚ್ಚು ಹಣವನ್ನು ಪಡೆಯಲಾಗುತ್ತದೆ ಎಂಬುದಾಗಿ ಇಲ್ಲಿ ತಿಳಿಸಿದ್ದರೂ ಅದನ್ನು ಯಾವ ರೀತಿಯಲ್ಲಿ ಅಥವಾ ಯಾವ ರೂಪದಲ್ಲಿ ಪಡೆಯಲಾಗುವುದೆಂಬುದನ್ನು ತಿಳಿಸಿಲ್ಲ. ಈ ನೀತಿಯನ್ನು ಸಡಿಲಗೊಳಿಸುವುದರಿಂದ ರಾಜ್ಯದ ಬೊಕ್ಕಸಕ್ಕೆ ಹಣ ಬರುತ್ತದೆ ಎಂದರೆ ಅಷ್ಟೇ ಸಾಲದು. ಈ ಬಾಬಿನಲ್ಲಿ ಪೋಲೀಸಿನವರಿಗಾಗಿ ಖರ್ಚಾಗತಕ್ಕ ಹಣ ಕೂಡ ಉಳಿಯಲೇ ಬೇಕೆಂಬುದು ಒಂದು ವಿಚಾರ. ಹಾಗೇ ದೇಶದಲ್ಲಿ ಅಲ್ಲಲ್ಲೇ ನಡೆಯುತ್ತಿರುವ ಇಲಿಸಿಟ್ ಡ್ರಿಂಕಿಂಗ್ ಮತ್ತು ತತ್ಸಂಬಂಧದಲ್ಲಿ ಶ್ರೀ ಸಾಮಾನ್ಯರನ್ನು ಕೋರ್ಟಿಗೆಳೆದೊಯ್ಯುವುದು, ಇದರಿಂದ ಅವರಿಗಾಗುತ್ತಿರುವ ಕಿರುಕುಳ ಹಾಗು ತೊಂದರೆಗಳೇನಿವೆ ಅವುಗಳನ್ನೂ ಕೂಡ ಸರ್ಕಾರದವರು ತಮ್ಮ ಮುಖ್ಯಗಮನದಲ್ಲಿ ಇಟ್ಟುಕೊಂಡು ಎಲ್ಲಕ್ಕೂ ಒಂದು ಪರಿಹಾರ ಮಾರ್ಗವನ್ನು ಕಂಡುಹಿಡಿದು ಈ ನೀತಿಯನ್ನು ಸಡಿಲಗೊಳಿಸದೆ ಬರಿ ಒಂದು ಆರ್ಥಿಕ ಲಾಭದ ದೃಷ್ಟಿಯನ್ನಷ್ಟೇ ಇಟ್ಟುಕೊಂಡು ಮಾಡಿದರೆ ಸಾಲದು ಎಂಬುದಾಗಿ ನಾನು ತಿಳಿಯಬಯಸುತ್ತೇನೆ.

ಇನ್ನು ಭೂಕಂದಾಯದ ವಿಚಾರಕ್ಕೆ ಬಂದರೆ; ಈ ದಿವಸ ಇದು ಇರತಕ್ಕ ರೀತಿಯಲ್ಲಿ ಅನೇಕರಿಗೆ ಇದರಿಂದ ಹಾನಿಯಾಗುತ್ತಿದೆ. ಆದುದರಿಂದ ಇದನ್ನು ಒಂದು ವೈಜ್ಞಾನಿಕ ರೀತಿಯಲ್ಲಿ ಮುಂದುವರಿಸತಕ್ಕದ್ದು ಯುಕ್ತವಾದುದೆಂದು ಪರಿಗಣಿಸಿ ಇನ್ನು ಮುಂದೆ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಎಂತ ಒಂದು ತೆರಿಗೆಯನ್ನು ವಿಧಿಸಬಹುದೆಂದು ಕಾಣುತ್ತದೆ. ಆದರೆ ಇಲ್ಲಿಯವರೆಗೂ ವ್ಯವಸಾಯದ ಬಾಬಿಗೆ ಸರ್ಕಾರದವರು ಕೊಟ್ಟಿರತಕ್ಕ ಉತ್ತೇಜನ ಸಾಲದು ಎಂಬುದನ್ನು ಎಲ್ಲರೂ ಒಪ್ಪಿಕೊಂಡಿದ್ದಾರೆ. ಹಾಗಿರುವಾಗ ಈ ಒಂದು ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್‌ನ್ನು ಸಣ್ಣ ಸಣ್ಣ ಹಿಡುವಳಿದಾರರ ಮೇಲೆ ಹಾಕುವುದರಿಂದ, ಅದು ಕೇವಲ 10–20 ರೂಪಾಯಿಗಳ ತೆರಿಗೆಯಾದರೂ, ಅದನ್ನು ರೈತನು ತೆರೆವುದಕ್ಕೆ ಅದು ಅಷ್ಟು ಭಾರವಾದುದಾಗಿ ಕಾಣದಿದ್ದರೂ ಅದರಿಂದ ಅವನಿಗೆ ಅಪ್ರತ್ಯಕ್ಷವಾದ ಕಿರುಕುಳಗಳು ಜಾಸ್ತಿಯಾಗುತ್ತವೆ. ಸಾಲದುದಕ್ಕೆ ಬೇಸಾಯಗಾರರಲ್ಲಿ ಬಹುಪಾಲು ಜನರು ಅನಕ್ಷರಸ್ಥರು. ಇಲಾಖೆಯ ಅಧಿಕಾರಿಗಳಾದರೂ ಅವರನ್ನು ಒಂದು ಗೌರವರೀತಿಯಲ್ಲಿ ಕಾಣುವಂಥ ಸನ್ನಿವೇಶವನ್ನು ಇಲ್ಲಿ ಬೆಳೆಸಿಕೊಂಡು ಬಂದಿಲ್ಲ. ಆದುದರಿಂದ ಸಣ್ಣ ಸಣ್ಣ ಹಿಡುವಳಿದಾರರಿಗೆ ಈ ತೆರಿಗೆಯಿಂದ ಭಾರ ಬೀಳಲಿ ಬೀಳದಿರಲಿ ಇದರಿಂದ ದೇಶದಲ್ಲಿ ಜನರಿಗೆ ಹೆಚ್ಚಿನ ಕಿರುಕುಳಗಳುಂಟಾಗುತ್ತವೆ. ಜನರಲ್ಲಿ ಅದರಿಂದ ಅತೃಪ್ತಿ ಮಾಡುವುದು; ಆದುದರಿಂದ ಈ ವಿಚಾರವನ್ನು ಮಾನ್ಯ ಅರ್ಥಸಚಿವರು ಇಂದಿನ ಪ್ರಸ್ತುತ ಸಂದರ್ಭದಲ್ಲಿ ಗಣನೆಗೆ ತೆಗೆದುಕೊಳ್ಳುವುದು ಒಳ್ಳೆಯದು ಎಂಬುದನ್ನು ನಾನೀಗ ತಮ್ಮ ಮೂಲಕ ಅವರಿಗೆ ಬಿನ್ನೈಸಿಕೊಳ್ಳುತ್ತೇನೆ. ಇನ್ನು ಇದರಷ್ಟೇ ಒಂದು ದುಷ್ಪರಿಣಾಮ ಈ ಸರ್‌ಛಾರ್ಜಿನಿಂದಲೂ ಉಂಟಾಗುತ್ತದೆಂದು ಹೇಳುವುದರಲ್ಲಿ ಅಭ್ಯಂತರವೇನಿಲ್ಲ ಆದುದರಿಂದ ಸದ್ಯದ ಪರಿಸ್ಥಿತಿಯನ್ನು ಸರ್ಕಾರದವರು ಗಮನಕ್ಕೆ ತೆಗೆದುಕೊಂಡು ಈ ಸರ್‌ಛಾರ್ಜು ಹಾಗೂ ಸಣ್ಣಸಣ್ಣ ಹಿಡುವಳಿದಾರರಿಂದ ಬರತಕ್ಕ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್‌ನ್ನು ಹಾಕಲಾಗಬಾರದೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

ಇನ್ನು ಇಲ್ಲಿ ಬಜೆಟ್ಟಿಗೆ ಸಂಬಂಧಪಟ್ಟ ಹಾಗೂ ಸಂಬಂಧಪಡದ ಅನೇಕ ಆಪಾದನೆಗಳು ಬಂದಿವೆ. ನಾವು ಯಾವತ್ತೂ ಹೀಗೆ ಒಂದು ಸಂಶಯದ ಬಾವಿಗಳನ್ನು ತೋಡುತ್ತಾ ಹೋದರೆ ನಮ್ಮ ಮುಂದೆ ಯಾವತ್ತೂ ಸಂಶಯದ ಭೂತ ಇದ್ದೇ ಇರುತ್ತದೆ. ಆದರೆ ಸರ್ಕಾರದವರು ಸಂಶಯದ ಆಧಾರದ ಮೇಲೆ ಯಾವ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ನ್ಯಾಯವಾದ ಸಂಶಯಗಳು ಕೆಲವು ಸಂದರ್ಭಗಳಲ್ಲಿ ಬಂದೇ ಬರುತ್ತವೆ. ಆದರೆ ಅದನ್ನು ಕೈಬಿಟ್ಟು ನಾವು ಎಲ್ಲಾ ವಿಚಾರಗಳಲ್ಲಿಯೂ ಯಾವತ್ತೂ ಸಂಶಯಗಳನ್ನೇ ತೋಡುತ್ತಾ ಕುಳಿತರೆ ಸಂಶಯ ಭೂತಗಳು

(ಶ್ರೀ ಕೆ. ಹೆಚ್ ಶ್ರೀನಿವಾಸ)

ದೇಶದಲ್ಲಿ ವಿಪರೀತವಾಗಿ ಬೆಳೆದು ಅವು ಇಂದು ಕಾಂಗ್ರೆಸ್ಸನ್ನೇ ಅಳಿಸಿಹಾಕುವ ಮಟ್ಟಕ್ಕೆ ಬಂದಿವೆ; ಈ ಸಂಶಯ ಭೂತಗಳು ಹೀಗೆ ಮುಂದುವರಿದಲ್ಲಿ ಮುಂದೆ ದೇಶದಲ್ಲಿ ಪ್ರಜಾಪ್ರಭುತ್ವ ಬೆಳೆಯುವುದಕ್ಕೂ ಉಳಿಯುವುದಕ್ಕೂ ಅವಕಾಶವಿರುತ್ತದೆಯೇ ಎಂಬ ಸಂಶಯ ನನಗೂ ಈಗ ಉಂಟಾಗುತ್ತಿದೆ ಎಂಬುದನ್ನು ನಾನು ಸಭೆಯವರಲ್ಲಿ ವಿನಂತಿ ಮಾಡಿಕೊಳ್ಳಬೇಕಾಗಿದೆ.

Sri DIGAMBAR RAO BALWANT RAO.–Point of Order, Sri The Hon'ble Member is saying that whatever the Opposition says, is based on supposed doubts or supposed charges. The Hon'ble Member is not right in saying that whatever the Opposition members are saying, are without any foundation and it is all on imagination. He cannot talk so lightly about the viewpoints of the Hon'ble Opposition Members. That is my suggestion.

Mr. SPEAKER.—I have caught the point. I would like to dig deep and find out whether there is any foundation in it. But there is not much substance in the Point of Order raised. Sri Srinivasa, may kindly continue.

ಶ್ರೀ ಕೆ. ಎಚ್. ಶ್ರೀನಿವಾಸ್.—ಇನ್ನು ಕೈಗಾರಿಕೆಯ ಬಗ್ಗೆ ಹೇಳುವುದಾದರೆ ಸ್ಥಳೀಯ ಕೈಗಾರಿಕೋದ್ಯಮಿಗಳಿಗೆ ಹೆಚ್ಚಿನ ಪ್ರೋತ್ಸಾಹವನ್ನು ಸರ್ಕಾರದವರು ಕೊಡಬೇಕು. ಶರಾವತಿ ಯೋಜನೆಯಿಂದ ಉಂಟಾದಂಥ ವಿದ್ಯುತ್ತನ್ನು ಉಪಯೋಗಿಸಿಕೊಳ್ಳಬೇಕಾದರೆ ಅದಕ್ಕೆ ಖರ್ಚು 10 ಪಟ್ಟು ಬಂಡವಾಳ ಬೇಕಾಗಿರುವುದರಿಂದ ಕೇವಲ ಕನ್ನಡ ದೇಶದ ಕೈಗಾರಿಕೋದ್ಯಮಿಗಳಿಗೆ ಅದೇನೂ ಸಾಧ್ಯವಾಗದೇ ಇರಬಹುದು. ಆದರೆ ಸರ್ಕಾರ ಅಷ್ಯೂರ್ ಮಾಡುತ್ತಾ ಇರತಕ್ಕ ಪ್ರಿಫರೆನ್ಸಿಯಲ್ ಟ್ರೀಟ್‌ಮೆಂಟ್ ಏನೆಂಬುದನ್ನು ಸ್ಪಷ್ಟಪಡಿಸಿಲ್ಲ. ಆ ಪ್ರಿಫರೆನ್ಸಿಯಲ್ ಟ್ರೀಟ್‌ಮೆಂಟ್ ನಿಜವಾಗಿ ಕನ್ನಡ ದೇಶದ ಉದ್ಯಮಿಗಳಿಗೆ ಆಕರ್ಷಕವಾಗುವ ರೀತಿಯಲ್ಲಿ ಮಾಡಬೇಕು.

ಒಟ್ಟಿನಲ್ಲಿ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಅವಶ್ಯಕವಾಗಿ ಅಭಿಮಾನಪೂರ್ವಕವಾದ ಪ್ರಿಫರೆನ್ಸಿಯಲ್ ಟ್ರೀಟ್‌ಮೆಂಟ್ ಕೊಡಬೇಕೆಂದು ಸರ್ಕಾರವನ್ನು ಒತ್ತಾಯಮಾಡಲು ಬಯಸುತ್ತೇನೆ.

ಇಷ್ಟು ವಿಷಯಗಳನ್ನು ಪ್ರಸ್ತಾಪಿಸಿ ಈ ಮುಂಗಡ ಪತ್ರವನ್ನು ವಿಶ್ವಾಸಪೂರ್ವಕವಾಗಿ ಸ್ವಾಗತಿಸಿ ಈ ಸಭೆಯ ಎಲ್ಲ ಸದಸ್ಯರೂ ಇದನ್ನು ಅನುಮೋದಿಸಬೇಕೆಂದು ಪ್ರಾರ್ಥಿಸಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಮಾನ್ಯ ಅಧ್ಯಕ್ಷರೇ 1967–68ನೇ ವರ್ಷದ ಆಯವ್ಯಯ ಪತ್ರವನ್ನು ನೋಡಿದರೆ ಸರ್ಕಾರದವರು ವರ್ಷವರ್ಷೇ ಒಂದು ಯೋಜನೆಯಿಂದ ಇನ್ನೊಂದು ಯೋಜನೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಜಾಸ್ತಿ ಮಾಡಿದ್ದಾರೆಯೇ ವಿನಾ ಆ ಕೋಟ್ಯಾಂತರ ರೂಪಾಯಿಗಳು ಸರಿಯಾದ ರೀತಿಯಲ್ಲಿ, ಯಶಸ್ವಿಭಾವನೆಯಿಂದ ಖರ್ಚು ಆಗಿದೆಯೇ ಮತ್ತು ಕೆಲಸಗಳು ಸರಿಯಾಗಿ ನಡೆದು ದೇಶಕ್ಕೇನಾದರೂ ಅನುಕೂಲಗಳಾಗಿವೆಯೇ ಎಂಬುದನ್ನು ಗಮನಿಸದೇ ಇರುವುದಕ್ಕಾಗಿ ನಾನು ಬಹಳವಾಗಿ ವಿಷಾದಪಡಬೇಕಾಗಿದೆ. ಮಾನ್ಯ ಶ್ರೀನಿವಾಸ್ ಅವರು ಮಾತನಾಡುತ್ತಾ ವಿರೋಧ ಪಕ್ಷದವರು ಆಳುವ ಪಕ್ಷದವರು ಮಾಡುತ್ತಿರುವ ಎಲ್ಲಾ ವಿಷಯಗಳನ್ನೂ ಬಹಳ ಸಂಶಯದಿಂದ ನೋಡುತ್ತಿದ್ದಾರೆಂದು ಹೇಳಿದರು. ನಾವು ಇಲ್ಲಿಗೆ ಬಂದಿರುವುದು ಆಳುವ ಪಕ್ಷದವರು ಮಾಡುವ ಕೆಲಸಗಳು ನ್ಯಾಯ ಸಮ್ಮತವಾಗಿ ಹಾಗೂ ಜನಗಳಿಗೆ ಅನುಕೂಲವಾಗುವ ರೀತಿಯಲ್ಲಿ ಇದ್ದರೆ ಅವುಗಳನ್ನು ಹೆಚ್ಚಿಗೆ ಪ್ರೋತ್ಸಾಹ ಮಾಡುವುದಕ್ಕಾಗಿ ಅಲ್ಲದೆ ನಮ್ಮ ಸ್ನೇಹಿತರು ಹೇಳಿದ ಹಾಗೆ

ವಿರೋಧ ಪಕ್ಷದವರು ಆಡಳಿತ ಪಕ್ಷಕ್ಕೆ ರಚನಾತ್ಮಕವಾದ ಸಲಹೆಗಳನ್ನೂ ಸಹ ಕೊಡುವುದಕ್ಕೂ ಮತ್ತು ನಾವೂ ಆಡಳಿತ ಪಕ್ಷದವರೂ ಒಟ್ಟಿಗೆ ಇರಬೇಕೆಂಬ ಭಾವನೆಯನ್ನುಂಟುಮಾಡುವುದಕ್ಕೂ ಇಲ್ಲಿಗೆ ಬಂದಿದ್ದೇವೆಂಬುದನ್ನು ಮಾನ್ಯ ಸದಸ್ಯರು ಮರೆತಂತೆ ಕಾಣುತ್ತದೆ.

ಮುಖ್ಯವಾಗಿ ವ್ಯವಸಾಯ ಬಾಬನ್ನು ತೆಗೆದುಕೊಂಡರೆ ವ್ಯವಸಾಯವೇ ಹೆಚ್ಚಿಗೆ ಇರುವ ಈ ದೇಶದಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಈ ಆಯವ್ಯಯದಲ್ಲಿ ವ್ಯವಸಾಯಾಭಿವೃದ್ಧಿಗಾಗಿ ಎಂದು ತೋರಿಸಿದ್ದಾರೆ. ಈ ವ್ಯವಸಾಯ ಸರಿಯಾದ ರೀತಿಯಲ್ಲಿ ನಡೆಯಲು ಸರ್ಕಾರದವರು ಏನೇನು ಕೆಲಸಗಳನ್ನು ಮಾಡಿದ್ದಾರೆ. ಹಿಂದಿನ ವರ್ಷದಲ್ಲಿ ಇದಕ್ಕಾಗಿ ಎಷ್ಟು ಹಣವನ್ನು ಖರ್ಚು ಮಾಡಿಕೊಂಡಿದ್ದಾರೆ, ಅದು ನಿಜವಾಗಿ ಖರ್ಚಾಗಿದೆಯೇ ಆ ರೀತಿ ಖರ್ಚಾದ ದುಡ್ಡಿನಲ್ಲಿ ಕೆಲಸಗಳು ಪೂರ್ತಿಯಾಗಿ ನಡೆದಿವೆಯೇ ಎನ್ನುವುದನ್ನು ಮೊದಲು ಸರ್ಕಾರದವರು ಪರಿಶೀಲನೆ ಮಾಡಬೇಕು. ಇದಕ್ಕೆ ಒಂದು ನಿದರ್ಶನವನ್ನು ನನ್ನ ಕ್ಷೇತ್ರದ ಬಗ್ಗೆ ಈ ಸಂದರ್ಭದಲ್ಲಿ ಕೊಡಬೇಕಾಗಿದೆ. ಶ್ರೀಮಾನ್ ಹನುಮಂತಯ್ಯನವರು ಮುಖ್ಯ ಮಂತ್ರಿಗಳಾಗಿದ್ದಾಗ ಲೋಕೋಪಯೋಗಿ ಶಾಖೆ ಹಾಗೂ ಮರಾಮತ್ತು ಇಲಾಖೆ ಆಡಳಿತವನ್ನು ನಡೆಸುತ್ತಿದ್ದಂಥ ಶ್ರೀಮಾನ್ ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಕೇವಲ 88 ಸಾವಿರ ರೂಪಾಯಿಗಳಲ್ಲಿ ಒಂದು ದೊಡ್ಡ ಕೆರೆಯನ್ನು ನಿರ್ಮಾಣ ಮಾಡಲಿಕ್ಕೆ ಹೊರಟರು. ಅದು ಸುಮಾರು 600 ಎಕರೆಯಷ್ಟು ಭೂಮಿಯನ್ನು ನೀರಾವರಿಗೆ ತರುತ್ತದೆ. ಅಂಥಾದ್ದನ್ನು ಇಲ್ಲಿಯವರೆಗೂ ಮಾಡಿಲ್ಲ. ಆ ಕೆರೆ ನಿರ್ಮಾಣವಾಗಲೇ ಇಲ್ಲ. ಆ ಕಾಮಗಾರಿಯನ್ನು ಪೂರೈಸುವುದಕ್ಕೆ ಸರ್ಕಾರದವರು ಇದುವರೆಗೂ ಗಮನ ಕೊಟ್ಟಿಲ್ಲವೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಹಿಂದೆ ಅದೇ ಕೆರೆಗೆ 88 ಸಾವಿರ ರೂಪಾಯಿಗಳು ಖರ್ಚು ಮಾಡಬೇಕಾಗಿದ್ದುದು ಈಗ ಆ ಕೆರೆಯ ನಿರ್ಮಾಣಕ್ಕೆ ಅದರ 4 ಪಟ್ಟು ಜಾಸ್ತಿ ಖರ್ಚು ಮಾಡಬೇಕಾಗಿದೆ.

ಇದರಿಂದ ಸರ್ಕಾರಕ್ಕೂ ಹಣ ಒದಗಿಸಲಿಕ್ಕೆ ಕಷ್ಟ ಆಗ ಯಾವ ಒಂದು ಭಾವನೆಯಿಂದ ರೈತರಿಗೆ ಅನುಕೂಲಗಳನ್ನು ಮಾಡಿಕೊಡಬೇಕೆಂದು ಆ ಕೆರೆಯನ್ನು ನಿರ್ಮಾಣ ಮಾಡಬೇಕೆಂದಿದ್ದರೋ ಅದು ಫಲಕಾರಿಯಾಗಲಿಲ್ಲ. ಆದ್ದರಿಂದ ಈಗಲಾದರೂ ಸರಿಯಾದ ರೀತಿಯಿಂದ ಅದನ್ನು ಪರಿಶೀಲನೆ ಮಾಡಬೇಕು. ಈಗಲೂ ಒಂದು ಲಕ್ಷ ರೂಪಾಯಿಗಳನ್ನು ಖರ್ಚುಮಾಡಿದರೆ ಅದರಲ್ಲಿ 1,500 ಎಕರೆಗಳಷ್ಟು ಭೂಮಿಗೆ ನೀರಾವರಿಯಾಗುತ್ತದೆ. ನಮ್ಮ ತಾಲ್ಲೂಕಿನ ಕೆಲವರು ಮುಖಂಡರ ಪ್ರಭಾವದಿಂದ ಆ ಕೆಲಸವನ್ನು ಸರ್ಕಾರದವರು ಇದುವರೆಗೂ ಕೈಗೊಂಡಿಲ್ಲವೆಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ. ಇಂತಹ ಕೆಲಸಗಳನ್ನು ಮಾಡುವುದನ್ನು ಬಿಟ್ಟು 10 ವರ್ಷಗಳ ನಂತರ ಉಪಯೋಗವಾಗುವ ದೊಡ್ಡದೊಡ್ಡ ಪ್ರಾಜೆಕ್ಟುಗಳನ್ನು ಈಗ ಇವರು ತೆಗೆದುಕೊಂಡು ಈಗಿನ ಆಹಾರ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ನಮ್ಮ ಸರ್ಕಾರದವರು ಬೇರೆ ರಾಜ್ಯಗಳಿಗೆ ಸಹಾಯ ಮಾಡಲು ಪ್ರಯತ್ನ ಮಾಡುತ್ತಿದ್ದೇವೆಂದು ಹೇಳುವುದು ಇದು ಸತ್ಯಕ್ಕೆ ನಿಜವಾಗಿ ಬಹಳ ದೂರವಾದುದಂತಾಗಿದೆ. ಶ್ರೀಮಾನ್ ರಾಮೇಗೌಡರು ಹಿಂದಿನವರು ನೀರು ಎಲ್ಲಿಂದ ಬರುತ್ತದೆಂಬುದನ್ನು ಚೆನ್ನಾಗಿ ಪರಿಶೀಲಿಸಿ ಕೆರೆಗಳನ್ನು ಕಟ್ಟುತ್ತಿದ್ದಾರೆಂಬುದಾಗಿ ಹೇಳಿದರು. ಅದು ನಿಜ. ಆ ರೀತಿಯಾಗಿ ಇವರು ಮಾಡದೇ ಇರುವುದು ವಿಷಾದ. ಅನೇಕ ಕಡೆಗಳಲ್ಲಿ ಬಹಳವಾಗಿ ಕೆರೆಗಳು ಒಡೆದುಹೋಗಿವೆ. ನಿಜವಾಗಿ ಅವನ್ನು ಜೀರ್ಣೋದ್ಧಾರ ಮಾಡಿದರೆ ಆ ಕೆರೆಗಳಿಂದ ಹೆಚ್ಚಿಗೆ ನೀರಾವರಿಯಾಗಿ ಈಗಿನ ಆಹಾರದ ಕೊರತೆಯನ್ನು ನೀಗಲು ಅನುಕೂಲವಾಗುತ್ತದೆ. ಆದರೆ ಆ ರೀತಿ ಮಾಡುವುದಕ್ಕೆ ಸರ್ಕಾರಕ್ಕೆ ಹೆಚ್ಚಿಗೆ ಖರ್ಚಾಗುತ್ತದೆ. ಹೂಳನ್ನು ತೆಗೆಸಿದರೂ ಸರ್ಕಾರಕ್ಕೆ ಹೆಚ್ಚು ಹಣವೇನೋ ಖರ್ಚಾಗುತ್ತದೆ. ಆದರೆ ರೈತರಿಗೆ ಹೆಚ್ಚು ಅನುಕೂಲ ಅದರಿಂದ ಉಂಟು. ಕೆರೆಗಳಲ್ಲಿ ಹೂಳನ್ನು ಬೇಸಿಗೆ ಕಾಲದಲ್ಲಿ ಹೆಚ್ಚಿಗೆ ತೆಗೆಯುತ್ತಾರೆ. ಅದರಿಂದ ಗದ್ದೆಗಳಿಗೆ, ತೋಟಗಳಿಗೆ ಹೆಚ್ಚು ಪ್ರಯೋಜನವುಂಟು. ಆದ್ದರಿಂದ ಸರ್ಕಾರದವರು ಈ ಖರ್ಚನ್ನು ಗಮನದಲ್ಲಿಟ್ಟುಕೊಳ್ಳದೆ ಕೆರೆ

(ಶ್ರೀ ಕೆ. ಎಂ. ತಮ್ಮಯ್ಯ)

ಗಳಲ್ಲಿನ ಹೂಳನ್ನು ತೆಗೆಸಿದ್ದರೆ ಇಷ್ಟು ಹೊತ್ತಿಗೆ ನೂರಾರು ಅಥವಾ ಸಾವಿರಾರು ಎಕರೆಗಳಷ್ಟು ಭೂಮಿ ಸಾಗುವಳಿಗೆ ಬರುತ್ತಿತ್ತು. ಹೀಗೆ ಹೂಳನ್ನು ತೆಗೆಸುವುದರಿಂದ ರೈತರಿಗೆ ಬಹಳವಾಗಿ ಉಪಕಾರವಾಗುತ್ತದೆ. ಹೂಳು ಫಲವತ್ತಾದ ಮಣ್ಣು. ಅದನ್ನು ಮಾರಲೂ ಬಹುದು. ಒಂದು ಗಾಡಿಗೆ ಇಷ್ಟು ಹಣವೆಂದು ದರವನ್ನು ನಿಗದಿ ಮಾಡಿದರೆ ರೈತರಿಗೆ ತುಂಬಾ ಅನುಕೂಲ ವಾಗುತ್ತದೆ. ಇಂಥಾದ್ದನ್ನೆಲ್ಲಾ ಸರ್ಕಾರದವರು ಗಮನಕ್ಕೆ ಇದುವರೆಗೂ ತೆಗೆದುಕೊಳ್ಳದೇ ಇರುವುದರಿಂದಲೇ ಒಡೆದುಹೋಗಿರುವ ಕೆರೆಗಳಿಗೆ ಈಗ ಹಣವನ್ನು ಹೆಚ್ಚಿಗೆ ಖರ್ಚು ಮಾಡಿ ಅವನ್ನು ಸರಿಯಾದ ರೀತಿಯಲ್ಲಿ ಜೀರ್ಣೋದ್ಧಾರ ಮಾಡಬೇಕಾಗಿದೆ. ಅದನ್ನು ಮಾಡಬೇಕು.

ಇನ್ನೊಂದು ವಿಚಾರ, ಬಾವಿಗಳ ಅಂಕಿಸಂಖ್ಯೆ ವರ್ಷವರ್ಷವೂ ಜಾಸ್ತಿ ಆಗುತ್ತಲೇ ಇದೆ. ಆದರೆ ಬಾವಿಗಳೇನೋ ಪೂರ್ತಿಯಾಗಿ ನಿರ್ಮಾಣವಾಗುತ್ತಿಲ್ಲ. ಸಾಮಾನ್ಯವಾಗಿ 100 ಬಾವಿಗಳು ಸರ್ಕಾರದಲ್ಲಿ ಮಂಜೂರಾದರೆ ಕೇವಲ 10–12 ಬಾವಿಗಳು ಪೂರ್ತಿಯಾಗಿರುತ್ತವೆ. 0 ಬಾವಿಗಳ ಕೆಲಸ ಅರ್ಧವಾಗಿರುತ್ತದೆ. ಮಿಕ್ಕ ಬಾವಿಗಳಿಗೆ ದುಡ್ಡೇ ಇರುವುದಿಲ್ಲವೆಂದು ಹೇಳಿಬಿಡುತ್ತಾರೆ. ಇದರಲ್ಲಿ ನಾನು ಸರ್ಕಾರವನ್ನು ಹೆಚ್ಚಿಗೆ ದೂಷಣೆ ಮಾಡುವುದಿಲ್ಲ. ಕೆಲವು ಮಾನ್ಯ ಸದಸ್ಯರು ಹೇಳಿದ ಹಾಗೆ ರೈತರು ಅವಿದ್ಯಾವಂತರು. ಅದರಿಂದ ಅವರೇ ನೇರವಾಗಿ ಅಧಿಕಾರಿಗಳಿಂದ ಉಪಯೋಗ ಪಡೆದುಕೊಳ್ಳುವ ಶಕ್ತಿಯನ್ನು ಹೊಂದಿರುವುದಿಲ್ಲ. ಅದಕ್ಕಾಗಿ ಮಧ್ಯೆ ಜನಗಳನ್ನು ಆಶ್ರಯ ಮಾಡಬೇಕು. ಬ್ಯಾಂಕುಗಳ ಮೂಲಕ ಸಾಲವೂ ಸರಿಯಾಗಿ ಸಿಗುವುದಿಲ್ಲ. ಒಂದು ವೇಳೆ ಆ ರೀತಿ ಸಾಲ ಕೊಂಚಮಟ್ಟಿಗೆ ದೊರೆತರೂ ಅವರಿಗೆ ನೇರವಾಗಿ ಆ ಸಾಲ ಮುಟ್ಟುವುದಿಲ್ಲ. ಆದ್ದರಿಂದ ಸರ್ಕಾರದವರೇ ನೇರವಾಗಿ ರೈತರಿಗಾಗಿ ಬಾವಿಗಳನ್ನು ತೆಗೆಸಿ ಪಂಪುಸೆಟ್ಟುಗಳನ್ನು ಕೊಟ್ಟು ಆಮೇಲೆ ರೈತರಿಂದ ಆ ಸಾಲವನ್ನು ಸುಲಭ ಕಂತುಗಳಲ್ಲಿ ವಸೂಲು ಮಾಡಿದರೆ ಒಳ್ಳೆಯದು. ಇದನ್ನು ಆದಷ್ಟು ಬೇಗ ಮಾಡಬೇಕು. ಆಗ ಯಾವ ಒಂದು ರೈತರ ಅಭ್ಯುದಯದ ಭಾವನೆಯಿಂದ ಬಾವಿಗಳನ್ನು ಸರ್ಕಾರದವರು ತೆಗೆಸುತ್ತೇವೆಂದು ಹೇಳಿದ್ದರೋ ಅದು ಸಫಲ ವಾಗುತ್ತದೆ. ರೈತರೂ ಸಹ ಅದರಿಂದ ಕೇವಲ ಒಂದು ವರ್ಷದ ಅವಧಿಯಲ್ಲಿಯೇ ವಿಶೇಷ ವಾಗಿ ಉಪಯೋಗವನ್ನು ಪಡೆದು ಸಾಲದ ಕಂತುಗಳನ್ನು ಕೊಡಲು ಅವರಿಗೆ ಅವಕಾಶ ವಾಗುತ್ತದೆ.

5–00 P.M.

ಮತ್ತು ಬಾವಿ ವಿಚಾರದಲ್ಲಿ ನಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ಹಾಗೆ ಒಂದು ಅರ್ಜಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೇನೆ. ಸರ್ಕಾರದವರು ಕೊಡತಕ್ಕ 3 ಸಾವಿರ ರೂಪಾಯಿಗಳಲ್ಲಿ ಭಾವಿಯನ್ನು ಪೂರ್ತಿ ಮಾಡುವುದಕ್ಕಾಗುವುದಿಲ್ಲ. ಒಂದು ವೇಳೆ ಅದನ್ನು ಪೂರ್ತಿ ಮಾಡಿದರೂ ಕೂಡ ಅದರಲ್ಲಿ ಎಷ್ಟು ನೀರು ಬರಬೇಕಾಗಿತ್ತೋ ಅಷ್ಟು ನೀರು ಬರುವುದಿಲ್ಲ. ಕೆಲವು ಭಾವಿಗಳನ್ನು ಆಳ ಮಾಡುವುದಕ್ಕಾಗಿ ಸರ್ಕಾರದಿಂದ ಹಣವನ್ನು ಕೊಡಿಸಬೇಕೆಂದು ಅರ್ಜಿಯನ್ನು ಕೊಟ್ಟು ಒಂದು ವರ್ಷ ಆಗಿದೆ. ಮಂತ್ರಿಗಳಿಗೆ ಕೂಡ ಒಂದು ಅರ್ಜಿಯನ್ನು ಕೊಟ್ಟಿದ್ದಾಗಿದೆ. ಮತ್ತು ಮಂತ್ರಿಗಳಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿ ಆದಷ್ಟು ಬೇಗ ಇದನ್ನು ಪರಿಶೀಲಿಸಿ ಇದರ ಬಗ್ಗೆ ಕ್ರಮವನ್ನು ಕೈಗೊಳ್ಳಬೇಕೆಂದು ನಾನು ಹೇಳಿದ್ದೇನೆ. ಆದ್ದರಿಂದ ದಯವಿಟ್ಟು ಇದನ್ನು ಕೊಡಿಸಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸದ ವಿಚಾರ ನಮ್ಮ ದೇಶದಲ್ಲಿ ಕಾಲೇಜುಗಳಿಗೆ ಹೆಚ್ಚಿನ ಸೌಲಭ್ಯ ದೊರೆತಿದೆಯೇ ವಿನಾ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಸಾಕಷ್ಟು ಪ್ರೋತ್ಸಾಹ ದೊರೆತಿಲ್ಲ ಎಂದು ನಾನು ಹೇಳಬೇಕಾಗಿದೆ. ನಮ್ಮ ಸ್ನೇಹಿತರು ಈಗಾಗಲೇ ವಾಸ್ತವವಾದ ವಿಷಯವನ್ನು ಹೇಳಿದ್ದಾರೆ. ಒಂದು ಕೊಠಡಿಯಲ್ಲಿ ನಾಲ್ಕು ತರಗತಿಗಳು ನಡೆಯುತ್ತಿವೆ. ನೂರಾರು

ಹುಡುಗರಿಗೆ ಒಬ್ಬರೇ ಉಪಾಧ್ಯಾಯರು ಇರುವುದು, ಉಪಾಧ್ಯಾಯರು ಇದ್ದರೆ ಸ್ಕೂಲು ಕಟ್ಟಡ ಇಲ್ಲದೇ ಇರುವುದು, ಮತ್ತು ಉಪಾಧ್ಯಾಯರು ತಂಗುವುದಕ್ಕೆ ವಸತಿ ಸೌಕರ್ಯ ಇಲ್ಲದೆ ಇರುವುದು ಇಂಥಾ ತೊಂದರೆಗಳೆಲ್ಲಾ ಇವೆ. ಆಗಾಗ್ಗೆ ಸರ್ಕಾರದವರೇನೋ ನಾವು ವಿದ್ಯಾಭ್ಯಾಸಕ್ಕಾಗಿ ಬೇರೆ ಬೇರೆ ರೀತಿಯಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಈಗ ವಿದ್ಯಾಭ್ಯಾಸದ ಕ್ರಮ ನಿಜವಾಗಿಯೂ ಸರಿಯಾದ ರೀತಿಯಲ್ಲಿ ನಡೆಯುತ್ತಿಲ್ಲ ಎಂದು ವಿಷಾದದಿಂದ ಹೇಳಬೇಕಾಗಿದೆ. ಹೈಸ್ಕೂಲಿನಲ್ಲಿ ಇಟ್ಟಿರತಕ್ಕ ಪಠ್ಯಪುಸ್ತಕಗಳು ಕಾಲೇಜಿನಲ್ಲಿ ಓದತಕ್ಕ ವಿದ್ಯಾರ್ಥಿಗಳಿಗೂ ಅರ್ಥವಾಗುವುದಿಲ್ಲ. ವಿದ್ಯಾರ್ಥಿಗಳ ವಯಸ್ಸಿಗೆ ತಕ್ಕಂಥ ಪಠ್ಯಪುಸ್ತಕಗಳನ್ನು ಇಡಬೇಕು. ದೊಡ್ಡ ದೊಡ್ಡ ಪುಸ್ತಕಗಳನ್ನು ದೊಡ್ಡ ದೊಡ್ಡ ಸಬ್ಜೆಕ್ಟುಗಳನ್ನು ಇಟ್ಟು ಸರಿಯಾದ ರೀತಿಯಲ್ಲ ವಿದ್ಯಾಭ್ಯಾಸವನ್ನು ನಡೆಸಿಕೊಂಡು ಹೋಗದೆ ಸುಮ್ಮನೆ ಸರ್ಕಾರದವರು ವಿದ್ಯಾಭ್ಯಾಸಕ್ಕಾಗಿ ಶ್ರಮಪಡುತ್ತಿದ್ದೇವೆ ಎಂದು ಹೇಳಿದರೆ ಅದು ಫಲಕಾರಿಯಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಇದನ್ನು ಗಮನಿಸಿ ವಿದ್ಯಾಭ್ಯಾಸದ ಕಡೆಗೆ ಹೆಚ್ಚು ಗಮನ ಕೊಡಬೇಕು. ಹಿಂದೆ ಗುರುಕುಲಾಶ್ರಮದಲ್ಲಿ ಮಕ್ಕಳಿಗೆ ಯಾವ ರೀತಿಯ ವಿದ್ಯಾಭ್ಯಾಸ ದೊರೆಯುತ್ತಿತ್ತೋ ಎಂಬುದನ್ನು ತಿಳಿದುಕೊಂಡು ಈಗ ಅದನ್ನು ಅನುಕರಣೆ ಮಾಡುವುದರಿಂದ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ದೊರೆಯುತ್ತದೆಯೇ ಎಂಬುದನ್ನು ಸರ್ಕಾರದವರು ಗಮನಿಸಬೇಕು. ಹಿಂದೆ ಕಾಗುಣಿತವನ್ನು ಮಕ್ಕಳಿಗೆ ಹೇಳಿಕೊಡುತ್ತಿದ್ದರು. ಮೊದಲು ಮಕ್ಕಳಿಗೆ ವಿದ್ಯಾಭ್ಯಾಸವನ್ನು ಪ್ರಾರಂಭ ಮಾಡುವಾಗ ಓಂ ನಾಮದಿಂದ ಪ್ರಾರಂಭಿಸುತ್ತಿದ್ದರು. ಈಗ ಬಸವ, ಕಮಲ ಎಂದು ಪಾಠವನ್ನು ಪ್ರಾರಂಭಿಸುತ್ತಿದ್ದಾರೆ. ಪ್ರೈಮರಿ ಸ್ಕೂಲಿನಲ್ಲಿ ಓದತಕ್ಕ ಮಕ್ಕಳಿಗೆ 19ರ ಮಗ್ಗಿ ಬರುವುದಿಲ್ಲ. ಈಗ ನಮ್ಮ ಮಕ್ಕಳಿಗೆ ವಿದ್ಯಾಭ್ಯಾಸ ಸರಿಯಾಗಿ ಆಗುವುದಿಲ್ಲ. ಇದನ್ನು ಸರ್ಕಾರದವರು ಪುನರ್ ಪರಿಶೀಲನೆ ಮಾಡಿ ವಿದ್ಯಾಭ್ಯಾಸವನ್ನು ಅಭಿವೃದ್ಧಿ ಪಡಿಸಬೇಕೆಂದು ನಾನು ಸರ್ಕಾರದವರಲ್ಲಿ ಪ್ರಾರ್ಥಿಸುತ್ತೇನೆ.

ಇನ್ನು ವೈದ್ಯಕೀಯ ವಿಚಾರ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಸರ್ಕಾರದವರು ಬೇಕಾದಷ್ಟು ಹಣವನ್ನು ಖರ್ಚು ಮಾಡಿ ಆಸ್ಪತ್ರೆಗಳನ್ನು ಕಟ್ಟಿಸಿ ಅವುಗಳಿಗೆ ಸಾಕಷ್ಟು ಸೌಲಭ್ಯಗಳನ್ನೂ ಒದಗಿಸಿದ್ದಾರೆ. ಹಾಗೆಯೇ ಸರ್ಕಾರದವರು ಹಳ್ಳಿಗಾಡಿನ ವಿಷಯವನ್ನೂ ಸ್ವಲ್ಪ ಗಮನಕ್ಕೆ ತೆಗೆದುಕೊಳ್ಳಬೇಕು. ತಾಲ್ಲೂಕು ಹೆಡ್ ಕ್ವಾರ್ಟ್ರುಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಯಾವ ತರಹದ ಸೌಲಭ್ಯಗಳು ಸಿಕ್ಕುವುದು ಕಷ್ಟವಾಗಿದೆ, ಮತ್ತು ಕಡಿಮೆಯಾಗಿದೆ. ಸರ್ಕಾರದವರು ಇದನ್ನು ಗಮನಿಸಿದಂತೆ ಕಾಣುವುದಿಲ್ಲ. ಹಿಂದೆ ಒಂದು ಸಾರಿ ನಾನು ಮಾನ್ಯ ಆರೋಗ್ಯ ಶಾಖೆಯ ಮಂತ್ರಿಗಳನ್ನು ತಾಲ್ಲೂಕು ಹೆಡ್ ಕ್ವಾರ್ಟರ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ತೋರಿಸಿದಾಗ ಅವರು ಅದನ್ನು ನೋಡಿ ವ್ಯಥೆಪಟ್ಟರು. ಆದರೆ ಅದಕ್ಕೆ ಇನ್ನೂ ಸರಿಯಾದ ವ್ಯವಸ್ಥೆಯನ್ನು ಮಾಡಿಲ್ಲ. ಅಲ್ಲಿ ಏನು ಕೆಲಸ ಮಾಡಿಲ್ಲ ಎಂದು ನಾನು ಹೇಳಬೇಕಾಗಿದೆ. ಇದನ್ನೆಲ್ಲಾ ಸರ್ಕಾರದವರು ಗಮನಿಸಿ ರೈತರಿಗೆ ಸಕಾಲದಲ್ಲಿ ಒಂದು ಹೆಚ್ಚಿನ ರೀತಿಯಲ್ಲಿ ವೈದ್ಯಕೀಯ ಸೌಲಭ್ಯವು ದೊರೆಯುವಂತೆ ಮಾಡುವುದು ಬಹಳ ಮುಖ್ಯವಾದುದು. ಕೋಟ್ಯಾಂತರ ರೂಪಾಯಿಗಳು ಖರ್ಚಾಗುವ ಕಡೆ ಲಕ್ಷಾಂತರ ರೂಪಾಯಿಗಳನ್ನು ಜಾಸ್ತಿ ಖರ್ಚಾಗತಕ್ಕಂಥ ಅಂಕಿ ಅಂಶಗಳು ನಮಗೆ ಕಾಣುತ್ತಿವೆ. ಆದರೆ ಅದನ್ನು ಶ್ರದ್ಧೆಯಿಂದ ಆಗಾಗ್ಗೆ ವಿಚಾರಿಸಿ ಕೆಲಸ ಸರಿಯಾಗಿ ನಡೆದಿದೆಯೇ ಅಥವಾ ಇಲ್ಲವೇ ಎಂಬುದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಿದರೆ ಒಳ್ಳೆಯದು.

ಇನ್ನು ಆಹಾರ ಪರಿಸ್ಥಿತಿಯ ವಿಚಾರದಲ್ಲಿ ಹೇಳುವುದಾದರೆ. ಆಹಾರದ ಉತ್ಪತ್ತಿ ಮತ್ತು ಹಂಚಿಕೆಯ ವಿಷಯದಲ್ಲಿ ಎಲ್ಲೆಲ್ಲಿ ನ್ಯೂನತೆಗಳಿವೆಯೋ ಅವುಗಳನ್ನೆಲ್ಲಾ ಸರಿಪಡಿಸಲು ಸರ್ಕಾರದವರು ಪ್ರಯತ್ನ ಮಾಡಬೇಕು. ಆ ರೀತಿ ಮಾಡುವುದಾದರೆ, ಸರ್ಕಾರದವರು ಈ ಬಾಬಿಗೆ ಕೋಟ್ಯಾಂತರ

(ಶ್ರೀ ಕೆ. ಎಂ. ತಮ್ಮಯ್ಯ)

ರೂಪಾಯಿಗಳನ್ನು ಖರ್ಚು ಮಾಡಿದರೂ ಸಾರ್ಥಕವಾಗುತ್ತದೆ ಎಂದು ನಾನು ತಿಳಿದು ಕೊಂಡಿದ್ದೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಐ. ಸೋಮಶೇಖರಪ್ಪ (ಹೊಸನಗರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಅರ್ಥಸಚಿವರು 1967–68 ಸಾಲಿನ ಬಡ್ಜೆಟ್ಟನ್ನು ಈ ಸಭೆಯ ಮುಂದೆ ಇಟ್ಟಿದ್ದಾರೆ. ಈದರಲ್ಲಿ ಏಪ್ರಿಲ್, ಮೇ, ಜೂನ್ ಮತ್ತು ಜುಲೈ ತಿಂಗಳುಗಳಿಗೆ ಸಂಬಂಧಪಟ್ಟಹಾಗೆ ನಾಲ್ಕು ತಿಂಗಳ ಆಯವ್ಯಯ ಮುಂಗಡ ಪತ್ರವನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಇದರ ಬಗ್ಗೆ ನಾನು ಎರಡು ಮಾತು ಗಳನ್ನು ಆಡುವುದಕ್ಕೆ ಬಯಸುತ್ತೇನೆ. ವಿರೋಧ ಪಕ್ಷದ ಮಾನ್ಯ ಸದಸ್ಯರು ಸಹಕಾರ ಸಂಸ್ಥೆಗಳ ಬಗ್ಗೆ ಮಾತನಾಡುತ್ತಾ ಕೆಲವು ಆಧಾರರಹಿತವಾದ ಪ್ರಶ್ನೆಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಶ್ರೀಮಾನ್ ಜ್ವಾಲನಯ್ಯನವರು ಮಾತನಾಡುತ್ತಾ ಸರ್ಕಾರದವರು 1967–68ನೇ ಸಾಲಿನಲ್ಲಿ ಎಷ್ಟು ಸಹಕಾರಿ ಸಂಸ್ಥೆಗಳನ್ನು ಮುಚ್ಚುತ್ತಾರೆ ಎಂಬುದನ್ನು ತಿಳಿಸಲಿಲ್ಲ ಎಂದು ಹೇಳಿದ್ದಾರೆ. ಈ ಸಹಕಾರ ಸಂಸ್ಥೆಗಳ ಬಗ್ಗೆ ನಮ್ಮ ಜಿಲ್ಲೆಯಲ್ಲಿರತಕ್ಕಂಥ ದುಸ್ಥಿತಿಯನ್ನು ಹೇಳುವುದಾದರೆ ಅದನ್ನು ವಿರೋಧ ಪಕ್ಷದ ಸದಸ್ಯರು ಹೇಳಬೇಕಾಗಿತ್ತು. ನಮ್ಮ ಜಿಲ್ಲೆಯಲ್ಲಿ ಚುನಾವಣೆಯ ಸಂದರ್ಭದಲ್ಲಿ ಮತ್ತು ಚುನಾವಣೆಯ ನಂತರ ವಿರೋಧ ಪಕ್ಷದವರ ಪ್ರಚಾರದ ಪರಿಣಾಮವಾಗಿ ಅನೇಕ ಸಹಕಾರ ಸಂಘಗಳು ಮುಚ್ಚಲ್ಪಡುತ್ತಿವೆ. ನಾನು ತಮಗೆ ಅಂಕಿಅಂಶಗಳನ್ನು ಕೊಡುವುದಾದರೆ ಕಳೆದ 1966ನೇ ಇಸವಿಯಲ್ಲಿ ಮಾರ್ಚಿ ತಿಂಗಳಿನಿಂದ ಈಚೆಗೆ ಶಿವಮೊಗ್ಗ ಜಿಲ್ಲೆ ಯಲ್ಲಿ ಸಹಕಾರ ಸಂಘಗಳಿಗೆ ಬರಬೇಕಾಗಿದ್ದ ಬಾಕಿ ಹಣದಲ್ಲಿ 40 ಲಕ್ಷ ರೂಪಾಯಿಗಳು ವಸೂಲಾಗಿತ್ತು. ಆದರೆ 1967ನೇ ಇಸವಿಯಲ್ಲಿ 15 ಲಕ್ಷ ರೂಪಾಯಿಗಳು ಮಾತ್ರ ವಸೂಲಾಗಿದೆ. ವಿರೋಧ ಪಕ್ಷದವರು ಮಾಡತಕ್ಕಂಥ ಒಂದು ಟೀಕೆ ಮತ್ತು ಪ್ರಚಾರದ ಪರಿಣಾಮವಾಗಿ ಈ ರೀತಿ ವಸೂಲಾತಿ ಕಡಿಮೆಯಾಗಿದೆ. ನಾನು ತಮಗೆ ಇನ್ನೊಂದು ಅಂಕಿ ಅಂಶವನ್ನು ಕೊಡುವುದಾದರೆ, ಶಿವಮೊಗ್ಗ ಜಿಲ್ಲೆಯ ಸಹಕಾರ ಬ್ಯಾಂಕಿನ ಸುಸ್ತಿ ಹಣವು 27 ಲಕ್ಷ ರೂಪಾಯಿಗಳಿವೆ. ಇದರಲ್ಲಿ 20 ಲಕ್ಷ ರೂಪಾಯಿಗಳು ವಿರೋಧ ಪಕ್ಷದವರು ನಡೆಸತಕ್ಕ ಸಂಘಗಳಿಂದ ಬರಬೇಕಾಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಆ ಸಂಸ್ಥೆಗಳು ಯಾವುವು ಎಂಬುದನ್ನು ಹೇಳುತ್ತೀರಾ ?

ಶ್ರೀ ಐ. ಸೋಮಶೇಖರಪ್ಪ.—ನಾನು ಶಿವಮೊಗ್ಗ ಜಿಲ್ಲೆಯ ಸಹಕಾರಿ ಬ್ಯಾಂಕಿನ ಅಧ್ಯಕ್ಷನಾಗಿ ಹೇಳುತ್ತಿದ್ದೇನೆ. ಆದ್ದರಿಂದ ವಿರೋಧ ಪಕ್ಷದವರು ಟೀಕೆ ಮಾಡುವುದಕ್ಕಿಂತ ಮೊದಲು ಅವರು ತಮ್ಮ ಆತ್ಮಶೋಧನೆ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ.

Sri K. H. PATIL (Gadag).—Sir, I rise to a Point of Order. The Hon'ble Member is referring to the party in Oppsition as a whole. It relates to personal explanation because some of us are in the co-operative movement. It is not correct on the part of the Hon'ble Member to accuse the whole opposition.

Mr. SPEAKER.—The Hon'ble Member forgets his own speech. Perhaps, he made a general, and a sweeping criticism without singling out individuals.

Sri K. H. PATIL.—I have given names of persons against whom I have made charges.

MR. SPEAKER.—I have always prohibited Members from giving names. Apart from that, general criticism does not yield a base for reasoning a Point of Order, and the proverb is: "if you put on the cap it fits; if you do not put on the cap, it does not fit".

There is no Point of Order.

ಶ್ರೀ ಐ. ಸೋಮಶೇಖರಪ್ಪ.—ಇನ್ನು ಸಾಮುದಾಯಿಕ ಅಭಿವೃದ್ಧಿ ಯೋಜನೆಯ ಬಗ್ಗೆ ನಾನು ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಮ್ಮ ದೇಶದಲ್ಲಿ ಎನ್. ಇ. ಎಸ್. ಬ್ಲಾಕಿಗೆ ಸಂಬಂಧಪಟ್ಟ ಹಾಗೆ ಫಸ್ಟ್ ಸ್ಟೇಜ್ ಬ್ಲಾಕ್, ಸೆಕೆಂಡ್ ಸ್ಟೇಜ್ ಬ್ಲಾಕ್ ಮತ್ತು ಪೋಸ್ಟ್‌ಸ್ಟೇಜ್ ಬ್ಲಾಕ್ ಎಂದು ಇದೆ. ಮೊದಲನೇ ಸ್ಟೇಜ್ ಬ್ಲಾಕಿನಲ್ಲಿ ಸರ್ಕಾರದವರು 12 ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಸೆಕೆಂಡ್ ಸ್ಟೇಜ್ ಬ್ಲಾಕಿನಲ್ಲಿ $4\frac{1}{2}$ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಪೋಸ್ಟ್ ಸ್ಟೇಜ್ ಬ್ಲಾಕಿನಲ್ಲಿ 37 ಸಿ.ಡಿ.ಸಿ. ಹೆಡ್‌ನಲ್ಲಿ ಯಾವ ತರಹ ಹಣವೂ ಬರುವುದಿಲ್ಲ. ಇವೊತ್ತು ಸರ್ಕಾರದವರು "ಪೋಸ್ಟ್ ಸ್ಟೇಜ್ ಸೆಕೆಂಡ್ ಬ್ಲಾಕ್ ಸೇವಿಂಗ್ಸ್ ಪ್ಯಾಟರನ್" ಏನಿದೆ ಅದನ್ನು ಸರ್ಕಾರದವರು ಮುಂದುವರಿಸುತ್ತಿದ್ದಾರೆ. ಇದರಲ್ಲಿ ಒಂದು ಬ್ಲಾಕಿಗೆ 47 ಸಾವಿರ ರೂಪಾಯಿಗಳು ಖರ್ಚು ಆಗುತ್ತಿದೆ. ಆದ್ದರಿಂದ ಸರ್ಕಾರದವರು ಈ ಬಗ್ಗೆ ಗಮನ ಕೊಟ್ಟು ನಮ್ಮ ರಾಜ್ಯದಲ್ಲಿ ಎಲ್ಲಾ ಕಡೆಗಳಲ್ಲಿಯೂ ಪೋಸ್ಟ್ ಸ್ಟೇಜ್ ಸೆಕೆಂಡ್ ಬ್ಲಾಕ್ ಸೇವಿಂಗ್ಸ್ ಪ್ಯಾಟರನ್ನು ತರತಕ್ಕ ಪಾಲಸಿಯನ್ನು ಸರ್ಕಾರದವರು ಮಾಡಬೇಕೆಂದು ನಾನು ಅರಿಕೆ ಮಾಡಿಕೊಳ್ಳುತ್ತೇನೆ. ಸಹಕಾರಿ ಸಂಸ್ಥೆಗಳ ಬಗ್ಗೆ ಒಂದೆರಡು ಮಾತುಗಳನ್ನು ಆಡುವುದಾದರೆ ಸರ್ಕಾರ ಜಿಲ್ಲಾ ಸಹಕಾರಿ ಬ್ಯಾಂಕ್ ಮತ್ತು ಅಪೆಕ್ಸ್ ಬ್ಯಾಂಕಿನಲ್ಲಿರುವ ಠೇವಣಾತಿಗಳಿಗೆ ಗ್ಯಾರಂಟಿಯನ್ನುಕೊಟ್ಟಿತು. 1964ನೇ ಇಸವಿಯಲ್ಲಿ ಸರ್ಕಾರ ಆ ತರಹ ಗ್ಯಾರಂಟಿಯನ್ನು ವಾಪಸ್ಸು ತೆಗೆದುಕೊಂಡಿದೆ. ಆದುದರಿಂದ ಈ ಸಹಕಾರ ಸಂಸ್ಥೆಗಳೂ, ಸಹಕಾರ ಬ್ಯಾಂಕುಗಳೂ ಉನ್ನತ ಮಟ್ಟಕ್ಕೆ ಬರುವವರೆಗೂ ಕನಿಷ್ಟಪಕ್ಷ ಐದು ವರ್ಷವಾದರೂ ಹಿಂದೆ ಕೊಟ್ಟಂಥ ಗ್ಯಾರಂಟಿಯನ್ನು ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಸಭೆಯ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಆ ರೀತಿ ಮಾಡುವುದಕ್ಕೆ ರಿಸರ್ವ್ ಬ್ಯಾಂಕ್ ಅನುಮತಿಯನ್ನು ಕೊಡುತ್ತದೆಯೇ?

ಶ್ರೀ ಐ. ಸೋಮಶೇಖರಪ್ಪ.—ಠೇವಣಾತಿಗಳ ಬಗ್ಗೆ ಸರ್ಕಾರ ಗ್ಯಾರಂಟಿ ಕೊಡಬಹುದು.

ರಾಜ್ಯದಲ್ಲಿ ಪ್ರೊಕ್ಯೂರ್‌ಮೆಂಟ್ ವಸೂಲಾತಿ ಬಗ್ಗೆ ಮಾರ್ಕೆಟಿಂಗ್ ಸೊಸೈಟಿಗಳಿಗೆ ಸರ್ಕಾರ ವಹಿಸಿದೆ. ಇದರಲ್ಲಿರುವ ಕುಂದು ಕೊರತೆಗಳನ್ನು ಸಭೆಯ ಮುಂದೆ ಇಡಬಯಸುತ್ತೇನೆ. ಪ್ರತಿ ತಾಲ್ಲೂಕಿನಲ್ಲಿಯೂ 20–30 ಪರ್ಚೇಸ್ ಪಾಯಿಂಟ್‌ಗಳಿವೆ. ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳವರು ಒಂದೊಂದು ಕೇಂದ್ರಕ್ಕೆ ಐದು ಸಾವಿರ ರೂಪಾಯಿಗಳನ್ನು ಮುಂಗಡವಾಗಿ ಕೊಡುತ್ತಿದ್ದಾರೆ. ಅಪೆಕ್ಸ್ ಬ್ಯಾಂಕ್ ಆದೇಶದ ಪ್ರಕಾರ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಗಳಿಗೆ 'ಓಪನ್ ಕ್ಯಾಷ್ ಕ್ರೆಡಿಟ್' ಎಂದು ಒಂದು ಲಕ್ಷ ರೂಪಾಯಿ ಕೊಡುತ್ತಿದ್ದಾರೆ. ಇದರಿಂದ ಪರ್ಚೇಸ್ ಪಾಯಿಂಟ್‌ಗಳಿಗೆ ಕೊಡತಕ್ಕ ಹಣದ ಅನುಕೂಲತೆಯಾಗುತ್ತಿಲ್ಲ. ಅಪೆಕ್ಸ್ ಬ್ಯಾಂಕಿನವರು ಸಹ ಜಿಲ್ಲಾ ಬ್ಯಾಂಕಿಗೆ ಕೊಡತಕ್ಕ ಕ್ಯಾಷ್ ಕ್ರೆಡಿಟ್ ಒಬ್ಬರಿಗೇ ಕೊಡುವುದಕ್ಕೆ ಒಪ್ಪುತ್ತಿಲ್ಲ. ಕೆಲವು ಮಾರ್ಕೆಟಿಂಗ್ ಸೊಸೈಟಿಗಳವರಿಗೆ ಇದರಿಂದ ತೊಂದರೆಯಾಗುತ್ತಿದೆ. ಆದುದರಿಂದ, ಆಹಾರ ಸಚಿವರು ಈ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ಮಾರ್ಕೆಟಿಂಗ್ ಸೊಸೈಟಿಗಳಿಗೆ ಕನಿಷ್ಟಪಕ್ಷ ಮೂರು ಲಕ್ಷ ರೂಪಾಯಿಗಳನ್ನು ಬತ್ತದ ವಸೂಲಿಗೆ ಓಪನ್ ಕ್ಯಾಷ್ ಕ್ರೆಡಿಟ್ ಕೊಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಅರಿಕೆ ಮಾಡಿಕೊಂಡು ಮಾನ್ಯ ಸಚಿವರು ನಮ್ಮ ಮುಂದೆ ಇಟ್ಟಿರುವ ನಾಲ್ಕು ತಿಂಗಳ ಬೇಡಿಕೆಯನ್ನು ನಾನು ಸ್ವಾಗತಿಸುತ್ತೇನೆ.

†ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು).—ಮಾನ್ಯ ಸಭಾಪತಿಯವರೇ, ನಮ್ಮ ದೇಶದಲ್ಲಿ ಈಗಾಗಲೇ ಮೂರು ಪಂಚವಾರ್ಷಿಕ ಯೋಜನೆಗಳಾದವು. ನಾಲ್ಕನೆ ಯೋಜನೆಯಲ್ಲಿ ಕಾಲಿಡುತ್ತಿದ್ದೇವೆ. ಇವತ್ತು ಹಳ್ಳಿಗಳ ಸ್ಥಿತಿಯನ್ನು ನೋಡಿದರೆ ಸ್ವರಾಜ್ಯ ಬರುವುದಕ್ಕೆ ಮುನ್ನ ಯಾವ ದುಸ್ಥಿತಿ ಇತ್ತು, ಯಾವ ಬಡತನ ತಾಂಡವವಾಡುತ್ತಿತ್ತು ಅದೇ ಸ್ಥಿತಿ ಇವತ್ತು ಹಳ್ಳಿಗಳಲ್ಲಿ ಕಾಣುತ್ತಿದೆ. ಪಂಚವಾರ್ಷಿಕ ಯೋಜನೆಗಳಿಂದ ಜನಗಳಿಗೆ ಅಷ್ಟಾಗಿ ಪ್ರಯೋಜನವಾಗಿಲ್ಲ. ಸರ್ಕಾರದ ಆಶ್ರಯದಲ್ಲಿ ಯಾರು ಬದುಕುತ್ತಾರೆಯೋ, ಯಾರು ಪ್ರಭಾವ ಬೀರುತ್ತಾರೆಯೋ ಅಂಥವರಿಗೆ ಮಾತ್ರ ಅನುಕೂಲವಾಗುತ್ತಿದೆ.

ನಿರುದ್ಯೋಗವನ್ನು ತೆಗೆದುಕೊಂಡರೆ ಅನೇಕ ಕಡೆ ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ವರೆಗೂ ಓದಿ ಮುಂದೆ ವಿದ್ಯಾಭ್ಯಾಸ ಮಾಡುವುದಕ್ಕೆ ಶಕ್ತಿ ಇಲ್ಲದೆ ಇದ್ದಾರೆ. ಅವರಿಗೆ ಕೆಲಸ ಎಲ್ಲಿಯೂ ಸಿಕ್ಕುವುದಿಲ್ಲ. ಹಳ್ಳಿಗಳಲ್ಲಿ ವಾಸ ಮಾಡುವುದಕ್ಕೆ ಅವರಿಗೆ ಎರಡು ಎಕರೆ ಭೂಮಿಯೂ ಇರುವುದಿಲ್ಲ. ಅಂಥವರ ತಂಡಗಳು ಪ್ರತಿವರ್ಷವೂ ತಯಾರಾಗುತ್ತಿವೆ. ಅನೇಕ ಜನ ವಿದ್ಯಾರ್ಥಿಗಳು ಹತ್ತಿರ ಬಂದು ಎಲ್ಲಿಯಾದರೂ ಒಂದು ಕೆಲಸ ಕೊಡಿಸಿಕೊಡಿ ಎಂದು ಕೇಳುತ್ತಾರೆ. ಕೆಲಸಗಳನ್ನು ಕೊಡುವುದರಲ್ಲಿ ಕೂಡ ಬಹಳ ಸ್ವಾರ್ಥತೆ ಇದೆ. ನಿನ್ನೆ ತಾನೇ ಒಬ್ಬ ವಿದ್ಯಾರ್ಥಿ ಬಂದಿದ್ದ. ಅವನು ಸಬ್‌ಓವರ್‌ಸೀರ್‌ಗೆ ಬೇಕಾದ ಶಿಕ್ಷಣವನ್ನು ಪಡೆದಿದ್ದಾನೆ. 1963ನೇ ಇಸವಿಯಲ್ಲಿ ಪಾಸು ಮಾಡಿದ್ದಾನೆ. ಅವನಿಗೆ ಇನ್ನೂ ಉದ್ಯೋಗ ಸಿಕ್ಕುತ್ತಿಲ್ಲ. ಆದರೆ ಕೆಲವರಿಗೆ ಮಾತ್ರ ಉದ್ಯೋಗಗಳು ಸಿಕ್ಕುತ್ತವೆ. ಮಂತ್ರಿಗಳಿಗೆ ಸಂಬಂಧಪಟ್ಟವರು ಅಥವಾ ಅಧಿಕಾರಿಗಳಿಗೆ ಯಾರು ಸಂಬಂಧಪಡುತ್ತಾರೆ ಅಂಥವರಿಗೆ ಮಾತ್ರ ಕೆಲಸ ಸಿಕ್ಕುತ್ತಿದೆ. ಮಿಕ್ಕವರಿಗೆ ಅರ್ಜಿಗಳನ್ನು ಹಾಕಿ ಹಾಕಿ ಸುಮ್ಮನೆ ಕೂಡುವ ಪರಿಸ್ಥಿತಿಯುಂಟಾಗಿದೆ. ಈ ರೀತಿ ನೀತಿ, ನ್ಯಾಯ, ಧರ್ಮ ಒಂದೂ ಇಲ್ಲದೆ ಹೋದರೆ ಹೇಗೆ? ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಸಲಹೆಯನ್ನು ಮಾಡುತ್ತೇನೆ. ಪ್ರಜಾಪ್ರಭುತ್ವ ನ್ಯಾಯ ರೀತಿಯಲ್ಲಿ, ಧರ್ಮ ರೀತಿಯಲ್ಲಿ ನಡೆಯಬೇಕು ಎಂದರೆ ಪ್ರತಿಯೊಬ್ಬರಿಗೂ ಉದ್ಯೋಗಾವಕಾಶವನ್ನು ಕಲ್ಪಿಸಿ ಕೊಡಬೇಕು. ಯಾರು ಮೊದಲು ಪಾಸ್ ಮಾಡಿರುತ್ತಾರೆ ಅಂಥವರಿಗೆ ಮೊದಲು ಕೆಲಸ ಕೊಡಬೇಕು. ನಮ್ಮ ತಾಲ್ಲೂಕಿನಲ್ಲಿ 60-70 ಜನ ಸಬ್‌ಓವರ್‌ಸೀರ್ ಪರೀಕ್ಷೆ ಮಾಡಿಕೊಂಡಿದ್ದಾರೆ. 1963ನೇ ಇಸವಿಯಿಂದ ಇಲ್ಲಿಯವರೆಗೂ ಅವರಿಗೆ ಕೆಲಸ ಸಿಕ್ಕಿಲ್ಲ. ನಾನು ಅಂಥವರನ್ನು ಕಂಟ್ರಾಕ್ಟರ ಹತ್ತಿರ, ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ದಿನ ಕೂಲಿಯ ಮೇಲೆ ಕೆಲಸಕ್ಕೆ ಸೇರಿಸುತ್ತಿದ್ದೇನೆ. ಆದರೆ ಕೆಲವರಿಗೆ ಮಾತ್ರ ಸರ್ಕಾರಿ ಕೆಲಸಗಳು ಸಿಕ್ಕುತ್ತವೆ. ಈ ರೀತಿ ಮಾಡುವುದಕ್ಕಿಂತ ಎಲ್ಲಿ ಉದ್ಯೋಗಾವಕಾಶವಿಲ್ಲವೋ, ಎಲ್ಲಿ ಸರ್ಕಾರದವರಿಗೆ ಒಂದು ಕನಬು ಕೊಡುವುದಕ್ಕೆ ಶಕ್ತಿ ಇಲ್ಲವೋ ಅಂಥ ಸ್ಥಳಗಳಲ್ಲಿ ಪಾಲಿಟೆಕ್ನಿಕ್ ಸಂಸ್ಥೆಗಳನ್ನು ಕಿತ್ತು ಹಾಕಿ ಎಂದು ಹೇಳುತ್ತಿದ್ದೇನೆ.

ಸಹಕಾರ ತತ್ವವು ದೇಶದ ಅಡಿಗಲ್ಲು, ದೇಶದ ಜನತೆಗೆ ಅನುಕೂಲ ಮಾಡಬೇಕು, ಜನಗಳ ಜೀವನಮಟ್ಟ ಜಾಸ್ತಿ ಮಾಡಬೇಕು ಎಂದು ನಾವು ಈ ತತ್ವವನ್ನು ನಂಬಿಕೊಂಡಿದ್ದೇವೆ. ಆದರೆ ಇವತ್ತು ವಾಸ್ತವಾಂಶವೇನಿದೆ ಎಂದರೆ, ಎಲ್ಲ ಸಹಕಾರ ಸಂಸ್ಥೆಗಳೂ ವ್ಯಕ್ತಿಗಳ ಸ್ವಂತ ಆಸ್ತಿಯಾಗಿವೆ. ನನ್ನ ತಾಲ್ಲೂಕಿನಲ್ಲಿ ನಾನು ಒಂದು ಸಹಕಾರ ಸಂಘದ ಅಧ್ಯಕ್ಷನಾಗಿದ್ದೇನೆ. ಅಲ್ಲಿ ಡಿಸ್ಟ್ರಿಕ್ಟ್ ಆಡಿಟರ್ ಒಂದು ಆಡಿಟ್ ರಿಪೋರ್ಟನ್ನು ಕೊಟ್ಟರು ಏನೆಂದರೆ ಸಹಕಾರ ಸಂಘದಲ್ಲಿ ಸೆಕ್ರೆಟರಿಯವರು ಮತ್ತು ಕೆಲವು ಡೈರೆಕ್ಟರುಗಳು ದುಡ್ಡು ತಿಂದಿದ್ದಾರೆ, ಇದರೊಳಗೆ ಏನು ಮಾಡಿದರೂ ಲೆಕ್ಕಪತ್ರ ಇಲ್ಲ ಎಂದು. ಆಡಿಟ್ ರಿಪೋರ್ಟ್ ಬಂದ ತಕ್ಷಣ ರಿಜಿಸ್ಟ್ರಾರ್ ಅವರಿಗೆ ಒಂದು ಕಾಗದವನ್ನು ಬರೆದೆ. ನನಗೆ ಆಡಿಟ್ ರಿಪೋರ್ಟ್ ಬಂದಿದೆ. ಅದರ ಬಗ್ಗೆ ತನಿಖೆ ಮಾಡಿ ಆ ಸಂಘವನ್ನು ಸೂಪರ್‌ಸೀಡ್ ಮಾಡಿ. ಸಂಘದ ಅಧ್ಯಕ್ಷನಾಗಿ ಬರೆಯುತ್ತಿದ್ದೇನೆ ಎಂದು ತಿಳಿಸಿದೆ. ಎರಡುವರೆ ವರ್ಷಗಳಿಂದ ಒಂದು ಲೆಕ್ಕಪತ್ರವನ್ನೂ

ತರಿಸುವುದಕ್ಕೆ ಅವರಿಗೆ ಶಕ್ತಿ ಇಲ್ಲವಾಗಿದೆ. ಇವತ್ತು ಯಾರ ಮಾತೂ ಕೇಳುವವರೇ ಇಲ್ಲ. ಪ್ರತಿಯೊಂದು ಸಹಕಾರ ಸಂಸ್ಥೆಯಲ್ಲಿಯೂ ಈ ರೀತಿ ಆಗುತ್ತಿದೆ. ಸಹಕಾರ ಸಂಸ್ಥೆಗಳು ನಿಜವಾಗಿ ಉದ್ಧಾರವಾಗಬೇಕು ಎಂದರೆ ಅದಕ್ಕೆ ಈಗ ಇರುವ ಖಾಸಗಿ ಸೆಕ್ರೆಟರಿಗಳನ್ನು ತೆಗೆದುಹಾಕಿ ಅವರ ಸ್ಥಳದಲ್ಲಿ ಸರ್ಕಾರದ ವತಿಯಿಂದ ಸೆಕ್ರೆಟರಿಗಳನ್ನು ನೇಮಕ ಮಾಡಬೇಕು. ಪ್ರತಿಯೊಂದು ಪಂಚಾಯಿತಿಗೂ ಒಬ್ಬ ಅಕೌಂಟೆಂಟರನ್ನು ನೇಮಕ ಮಾಡಿದ್ದಾರೆ. ಅದೇ ವ್ಯಕ್ತಿಯೇ ಸಹಕಾರ ಸಂಸ್ಥೆಗಳ ಕಾರ್ಯದರ್ಶಿಯಾಗಿ ಲೆಕ್ಕಪತ್ರಗಳನ್ನು ನೋಡುವುದಕ್ಕೆ ನೇಮಕ ಮಾಡಿ. ಈಗಾಗಲೇ ಕೆಲವು ಹಳ್ಳಿಗಳಲ್ಲಿ ಎಂಟು ಹತ್ತು ವರ್ಷಗಳಿಂದ ಬಾಕಿಗಳಿವೆ. ದಾಕ್ಷಿಣ್ಯಕ್ಕೆ ಕಟ್ಟುಬಿದ್ದು ಈ ರೀತಿ ಆಗುತ್ತಿದೆ. ಪಂಚಾಯಿತಿ ಮೂಲಕ ರಾಜ್ಯದ ಆಡಳಿತ ನಡೆಯಬೇಕು ಎಂದು ಹೇಳುವಾಗ ವಾಸ್ತವಾಂಶಗಳನ್ನು ನೋಡಿದರೆ ಇದು ಸಾಧ್ಯವೇ ಎನ್ನುವ ಅನುಮಾನ ಬರುತ್ತದೆ. ಸಹಕಾರ ಇಲಾಖೆಯನ್ನು ಮುಚ್ಚಿದರೆ ಸರಿಯೋ ಏನೋ ಎಂದು ಅನ್ನಿಸುತ್ತದೆ. ಈ ಇಲಾಖೆಯಲ್ಲಿ ಈಗ 17–18 ಜನ ಜಾಯಿಂಟ್ ರಿಜಿಸ್ಟ್ರಾರಗಳಿದ್ದಾರೆ. ಸಹಕಾರ ಸಂಸ್ಥೆಗಳಿಗೆ ಸಹಕಾರ ತತ್ವದ ಆಧಾರದ ಮೇಲೆ ಜನಗಳಿಗೆ ಅನುಕೂಲ ಮಾಡುವ ಶಕ್ತಿ ಇಲ್ಲದೆ ಹೋದರೆ ಅವುಗಳನ್ನು ಮುಚ್ಚುವುದು ಒಳ್ಳೆಯದಲ್ಲವೇ ಎಂದು ಕೇಳುತ್ತೇನೆ.

ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕುಗಳ ಮೂಲಕ ಸಾಲ ಕೊಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಒಂದು ಬ್ಯಾಂಕ್ ಇದೆ. ಅದರ ಜನರಲ್ ಬಾಡಿ ಮೀಟಿಂಗ್ ನಡೆದು ನಾಲ್ಕು ವರ್ಷವಾಗಿದೆ. ಲೆಕ್ಕಗಳ ಆಡಿಟ್ ಆಗಿಲ್ಲ. ಈ ಬಗ್ಗೆ ನಾನು ರಿಜಿಸ್ಟ್ರಾರ್ ಅವರಿಗೆ ಬರೆದು ಜನರಲ್ ಬಾಡಿ ಮೀಟಿಂಗ್ ಕರೆಯಿಸಬೇಕು ಎಂದು ಒತ್ತಾಯ ಮಾಡಿದ್ದೇನೆ. ಡೈರೆಕ್ಟರುಗಳ ಚುನಾವಣೆ ಇಲ್ಲ. ಬರೀ ಜನರಲ್ ಬಾಡಿ ಮೀಟಿಂಗ್ ಮಾಡುತ್ತೇವೆಂದು ಹೇಳಿದ್ದಾರೆ. ರೈತನಾದವನಿಗೆ ಸಾಲ ಸಿಕ್ಕಬೇಕಾದರೆ ಪಡಬಾರದ ಕಷ್ಟವನ್ನು ಅವನು ಪಡುತ್ತಿದ್ದಾನೆ. ಸರ್ಕಾರದವರು ಹಾಕಿಕೊಂಡಿರುವ ಎಲ್ಲ ಯೋಜನೆಗಳೂ ಕಾರ್ಯಗತ ಆಗಬೇಕು. ಸಾಮಾನ್ಯ ರೈತನಿಗೆ, ಕಷ್ಟಪಡುವವನಿಗೆ ಅನುಕೂಲವಾಗಬೇಕು ಎಂದರೆ ಸರ್ಕಾರದವರು ದಯವಿಟ್ಟು ನೇರವಾಗಿ ಹಳ್ಳಿಯ ರೈತರಿಗೆ ಸರ್ಕಾರದವರು ಕೊಡುವ ಎಲ್ಲ ಸೌಲಭ್ಯಗಳೂ ಸಿಕ್ಕುವ ಹಾಗೆ ವ್ಯವಸ್ಥೆ ಮಾಡಿದರೆ ಸುಖ ರಾಜ್ಯವನ್ನು ಕಟ್ಟಬಹುದು, ಸಮಾಜವಾದವನ್ನು ಆಚರಣೆಗೆ ತರಬಹುದು ಎಂದು ನನಗೆ ಕಾಣುತ್ತದೆ. ಇಲ್ಲದೆ ಇದ್ದರೆ ಇಲ್ಲ.

ಲೋಕೋಪಯೋಗಿ ಇಲಾಖೆಯಲ್ಲಿ ಒಂದು ಜಿಲ್ಲೆಗೆ 30-40 ಲಕ್ಷ ರೂಪಾಯಿ ಮಂಜೂರು ಮಾಡಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ತೆಗೆದುಕೊಂಡಿರುವ ಎಷ್ಟೋ ಎಷ್ಟೋ ಕೆರೆಗಳ ಕೆಲಸ 10-12 ವರ್ಷಗಳಿಂದ ಮುಗಿಯದೆ ಇದೆ. ಕೆಲವು ಕೆರೆಗಳ ಕೆಲಸ ಅರ್ಧ ಮಾಡಿ ಬಿಟ್ಟಿದ್ದಾರೆ. ಹಿಂದಿನ ಅಸೆಂಬ್ಲಿಯಲ್ಲಿ ಸದಸ್ಯನಾಗಿದ್ದು ಇದನ್ನೆಲ್ಲ ಹೇಳಿದ್ದೇನೆ. ನಮ್ಮ ತಾಲ್ಲೂಕಿನಲ್ಲಿ ಯಾವ ಯಾವ ಕೆರೆಗಳನ್ನು ತೆಗೆದುಕೊಂಡಿದ್ದಾರೆ. ಅವುಗಳಲ್ಲಿ ಯಾವುವು ವಿಚಾರಿಸುವವರಿಲ್ಲದೆ ನಿಂತು ಹೋಗಿವೆ ಎಂದು ಪಟ್ಟಿ ಮಾಡಿ ಅಸೆಂಬ್ಲಿಯಲ್ಲಿ ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡಿ ಎಂದು ಪ್ರಶ್ನೆ ಕೇಳಿದರೆ ಅದಕ್ಕೆ ಅವಕಾಶವಾಗಲಿಲ್ಲ. ನಾನು ಕೊನೆಗೆ ಚೀಫ್ ಇಂಜಿನಿಯರ್ ಅವರ ಹತ್ತಿರ ಹೋದೆ. ಅವರು ಹೇಳಿದರು ನಿಮ್ಮ ಪ್ರಶ್ನೆ ನೋಡಿ ನನಗೆ ಆಶ್ಚರ್ಯವಾಗುತ್ತಿದೆ. ಆ ಬಗ್ಗೆ ವಿಚಾರಿಸುತ್ತೇನೆ. ಎಂದು ಹೇಳಿ ಒಂದು ಪಟ್ಟಿಯನ್ನು ಕೊಟ್ಟರು. ನಮ್ಮ ಅಧಿಕಾರಿಗಳಿಂದ ಕೆಲಸ ನಡೆಯದೆ ಇದ್ದರೆ ತಿಳಿಸಿ ಎಂದು ಹೇಳಿದರು. ಇಷ್ಟೆಲ್ಲ ಆಗುವ ಹೊತ್ತಿಗೆ ಹಿಂದಿನ ಅಸೆಂಬ್ಲಿಯ ಅವಧಿ ಮುಗಿಯಿತು. ಈ ಸಲವೂ ಅದೇ ಪ್ರಶ್ನೆಯನ್ನು ರಿನ್ಯೂ ಮಾಡಿದ್ದೇನೆ. ಬಹಳ ದುಡ್ಡು ಖರ್ಚು ಮಾಡುತ್ತಾರೆ. ಆದರೆ ಅದರಿಂದ ಫಲ ಬರುವ ಹಾಗೆ ಇಲ್ಲ.

ಭೂ ಸ್ವಾಧೀನಕ್ಕೆ ಸಂಬಂಧಪಟ್ಟಂತೆ ಒಂದು ಪ್ರಶ್ನೆಯನ್ನು ಕಳುಹಿಸಿದ್ದೆ. ನಮ್ಮ ತಾಲ್ಲೂಕಿನಲ್ಲಿ ಅನೇಕ ಕಾಲುವೆಗಳಿವೆ. ಎರಡು ಮೂರು ಲಕ್ಷ ರೂಪಾಯಿ ಖರ್ಚು ಮಾಡಿರುವಂಥ ಕಾಲುವೆಗಳಿವೆ. ಕೇವಲ ಒಂದೆರಡು ಫರ್ಲಾಂಗು ದೂರ ಕಾಲುವೆ ತೆಗೆಯಲು ಬೇಕಾದ ಭೂಮಿ

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ಯನ್ನು ಸ್ವಾಧೀನ ಮಾಡಿ ಕೊಡಲಾಗಿದೆ ಕೆಲಸ ನಿಂತು ಹೋಗಿದೆ. ಕೆಲಸ ತ್ವರಿತವಾಗಿ ನಡೆದರೆ ಅಲ್ಲಿನ ಕೆಲವು ಕೆರೆಗಳಿಗೆ ನೀರು ಬಂದು ಜನತೆಗೆ ಅನುಕೂಲವಾಗುವಂತ ಸಂದರ್ಭವಿರುವುದರಿಂದ ಈ ಬಗ್ಗೆ ಗಮನ ಕೊಡಬೇಕು. ಎಂಟು ಹತ್ತು ವರ್ಷಗಳಿಂದ ಕೆಲಸವಾಗದೆ ಇದ್ದು, ಲಕ್ಷಾಂತರ ರೂಪಾಯಿ ನಷ್ಟವಾಗಿದೆ. ಸರ್ಕಾರದವರು ಇದನ್ನು ದಯವಿಟ್ಟು ಬೇಗ ಮಾಡಿಕೊಡಬೇಕು.

ಇಲಾಖೆಯಲ್ಲಿ ಚೀಫ್ ಇಂಜನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಹೀಗೆ ಅಧಿಕಾರಿಗಳಿದ್ದಾರೆ. ಅವರು ಪರಿಶೀಲನೆ ಮಾಡಿ ಯಾವ ಯಾವ ಕೆಲಸಗಳು ನಿಂತು ಹೋಗಿವೆ, ಅವು ಎಷ್ಟು ವರ್ಷದಿಂದ ನಿಂತುಹೋಗಿವೆ. ಅದಕ್ಕೆ ಕಾರಣಗಳೇನು ಎನ್ನುವುದನ್ನೆಲ್ಲ ವಿಚಾರಿಸಿ ಆ ಕೆಲಸಗಳನ್ನು ಪೂರ್ತಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗ ಚೀಫ್ ಇಂಜನಿಯರಾಗಿರುವ ಬಾಳೆಗುಂದಿ ಅವರು ಅನೇಕ ಕಡೆ ಇಂಥ ಪ್ರಯತ್ನವನ್ನುಮಾಡಿದ್ದಾರೆ. ಅವರು ಅಲ್ಲೇ ಸ್ಥಳದಲ್ಲೇ ತೀರ್ಮಾನ ತೆಗೆದುಕೊಂಡಿದ್ದಾರೆ. ಆದ್ದರಿಂದ ಸರ್ಕಾರದಿಂದ ಖರ್ಚು ಮಾಡುವಂತಹ ದುಡ್ಡು ಮತ್ತು ಅದರಿಂದ ಸಿಗುವ ಪ್ರತಿಫಲ, ಎಲ್ಲ ಜನತೆಗೆ ಎಷ್ಟು ಜಾಗ್ರತೆ ಸಿಗುವಂತೆ ಮಾಡುತ್ತೀರೋ ಅಷ್ಟು ಒಳ್ಳೆಯದಾಗಬಹುದೆಂದು ನಾನಾದರೂ ಭಾವಿಸುತ್ತೇನೆ.

ಇನ್ನು ಬಿ.ಡಿ.ಓ. ಗಳ ವಿಚಾರ: ತಾಲ್ಲೂಕುಗಳಲ್ಲಿ ಸೊಸೈಟಿಗಳು, ಪಂಚಾಯತುಗಳು ಮುಂತಾದುವುಗಳು ಇವರ ಆಡಳಿತಕ್ಕೊಳಪಟ್ಟಿವೆ. ಇಂಥ ಅಧಿಕಾರಿಗಳು ಇಲ್ಲಿ ರಾಜಕೀಯಕ್ಕೆ ಇಳಿಯುವ ಸಂದರ್ಭವಿದೆ. ಏಕೆಂದರೆ, ತಾಲ್ಲೂಕು ಬೋರ್ಡು ಪ್ರೆಸಿಡೆಂಟ್ ಮತ್ತು ತಾಲ್ಲೂಕು ಬೋರ್ಡು ವ್ಯಕ್ತಿಗಳನ್ನು ಇವರು ಹೊಂದಿಕೊಳ್ಳಬೇಕಾಗಿರುತ್ತದೆ. ಕೆಲವಾರು ಸಂದರ್ಭಗಳಲ್ಲಿ ತಾಲ್ಲೂಕು ಬೋರ್ಡು ಸಭೆಗಳಲ್ಲಿ ಇಂಥಿಂಥ ಪಂಚಾಯ್ತಿಗಳಲ್ಲಿ ಅನ್ಯಾಯಗಳಾಗುತ್ತಿವೆ, ಅವುಗಳನ್ನು ಸರಿಮಾಡಿ ಎಂದು ಹೇಳಿದರೆ, ಅವಕಾಶ ಕೊಡುತ್ತಾ ಇಲ್ಲ; ಮತ್ತು ಮಾಡುತ್ತಾ ಇಲ್ಲ. ಹೀಗೆ ಮಾಡದೆ ಇದ್ದರೆ, ನಮ್ಮ ಜನತೆಗೆ ಅನುಕೂಲವಾಗುವುದಾದರೂ ಯಾವಾಗ? ಆದ್ದರಿಂದ ದಯವಿಟ್ಟು ಈ ತಾಲ್ಲೂಕು ಬೋರ್ಡುಗಳನ್ನು ರದ್ದು ಮಾಡಿ, ಇಲ್ಲದಿದ್ದರೆ, ಈ ಬಿ.ಡಿ.ಓ. ಗಳನ್ನು ಪೂರ್ಣವಾಗಿ ರಾಜಕೀಯದ ಒತ್ತಡದಿಂದ ದೂರ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಐ. ಪಿ. ಸೆಟ್ಟುಗಳ ವಿಚಾರ: ಈಗ ನಮ್ಮ ತಾಲ್ಲೂಕುಗಳಲ್ಲಿ ಐ. ಪಿ. ಸೆಟ್ಟುಗಳಿಗೆ ಸಾಲ ಕೊಡುತ್ತಿದ್ದಾರೆ. ಸಾಲಾ ಕೊಟ್ಟರೆ ಅವರು ಪಂಪು ಮಾತ್ರ ತೆಗೆದುಕೊಂಡು ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ. ಅದಕ್ಕೆ ಬೇಕಾದ ಪೋಲು, ವೈಯರ್ ಸಿಗಬೇಕಾದರೆ 6–9 ತಿಂಗಳು ಬೇಕಾಗುತ್ತದೆ. ಈ ಪೋಲು, ವೈಯರ್ ಕೊಡದೆ, ಬರೆ ಪಂಪನ್ನು ಒದಗಿಸುವುದರಿಂದ ರೈತನಿಗೆ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ರೈತನಿಗೆ ಪಂಪ್ ಸೆಟ್ಟು ಕೊಟ್ಟರೆ, ತಕ್ಷಣ ಪೋಲು, ವೈಯರ್ ಕೊಡುವ ಏರ್ಪಾಡು ಮಾಡಬೇಕು. ಹತ್ತಾರು ಬಾರಿ ಅವನನ್ನು ಅದಕ್ಕೋಸ್ಕರ ಓಡಾಡಿಸಿದರೆ, ಅವನಿಗೆ ಅದರಲ್ಲಿ ಬೇಜಾರು ಬರುತ್ತದೆ. ಆದ್ದರಿಂದ ಆ ರೀತಿ ಐ. ಪಿ. ಸೆಟ್ಟು ಕೊಟ್ಟು ತಕ್ಷಣ ಪೋಲು, ವೈಯರ್ ಒದಗಿಸಿಕೊಡುವಂತೆ, ಪಿ. ಡಬ್ಲ್ಯೂ. ಡಿ. ಇಲಾಖೆಯಿಂದ ಆಜ್ಞೆ ಹೊರಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಅದೇ ರೀತಿ ಫರ್ಟಿಲೈಸರ್ಸ್, ಇವತ್ತಿನ ದಿವಸ ಅಮೇರಿಕಾದಿಂದ ಗೋಧಿ, ಮಿಲೊ ಮೊದಲಾದುವುಗಳನ್ನು ತರಿಸುವ ಬದಲು, ಒಂದು ಶಿಪ್ ಲೋಡು ಫರ್ಟಿಲೈಸರ್ಸ್ ತರಿಸಿದ್ದರೆ ನಮ್ಮ ಆಹಾರವನ್ನು ಇಲ್ಲೇ ಉತ್ಪಾದಿಸಿ ನಾವು ಸ್ವಾವಲಂಬಿಗಳಾಗುತ್ತಿದ್ದೆವು. ಇವತ್ತಿನ ದಿವಸ ಒಂದು ಮೂಟೆ ಗೊಬ್ಬರ ರೈತನಿಗೆ ಸಿಗಬೇಕಾದರೆ, ಅವನು ಎಷ್ಟು ಜನರ ಕೈಕಾಲು ಹಿಡಿಯಬೇಕೆಂಬುದನ್ನು ತಾವು ಯೋಚಿಸಬೇಕು. ಆದ್ದರಿಂದ ದಯವಿಟ್ಟು ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಇದನ್ನು ಒದಗಿಸುವಂತೆ ಮಾಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ರೂರಲ್).—ಸನ್ಮಾನ್ಯ ಸಭಾಪತಿಗಳೇ, ಮಾನ್ಯ ಅರ್ಥ ಮಂತ್ರಿಯವರು ಮಂಡಿಸಿರುವ 1967-68ನೇ ಇಸವಿಯ ಆಯವ್ಯಯ ಪತ್ರಿಕೆಯನ್ನು ಸ್ವಾಗತಿಸುತ್ತಾ ನಾನು ಇಲ್ಲಿ ನಾಲ್ಕು ವಿಚಾರಗಳನ್ನು ಹೇಳಬಯಸುತ್ತೇನೆ. ನಮಗೆ ಸ್ವಾತಂತ್ರ್ಯ ಸಿಕ್ಕಿ ಇಪ್ಪತ್ತು ವರ್ಷಗಳಾದುವು. ಇಪ್ಪತ್ತು ವರ್ಷಗಳಾದರೂ ಕೂಡ ನಮ್ಮ ಆರ್ಥಿಕ ಪರಿಸ್ಥಿತಿ ಮತ್ತು ಆಹಾರ ಪರಿಸ್ಥಿತಿಯು ಇನ್ನೂ ಸುಧಾರಿಸಿಲ್ಲ. ಎಲ್ಲಿಯ ತನಕ ನಮ್ಮ ಆಹಾರ ಪರಿಸ್ಥಿತಿಯು ಸುಧಾರಣೆಯಾಗುವುದಿಲ್ಲವೋ ಅಲ್ಲಿಯ ತನಕ ನಮ್ಮ ಅರ್ಥ ಮಂತ್ರಿಗಳು ಹೆಸರುಗಳಿಸದೆ, ಅವರು ಟೀಕೆ ಟಿಪ್ಪಣಿಗಳನ್ನು ಎದುರಿಸಲೇ ಬೇಕಾಗುತ್ತದೆ. ಎಲ್ಲಿಯ ತನಕ ಈ ಸಮಸ್ಯೆಗಳು ಹೋಗುವುದಿಲ್ಲವೋ ಅಲ್ಲಿಯ ತನಕ ನಮ್ಮ ಮಂತ್ರಿಗಳಿಗೆ ಹೂವಿನ ಸರ ಬರುವುದಿಲ್ಲ. ಅಂದ ಮೇಲೆ ಅವರು ಟೀಕೆ ಟಿಪ್ಪಣಿಗಳನ್ನು ಎದುರಿಸಬೇಕು; ಧೈರ್ಯದಿಂದ ಕೆಲಸ ಮಾಡಬೇಕು. ಒಂದು ವೇಳೆ ಇಲ್ಲಿ ಸರ್‌ಪ್ಲಸ್ ಆಹಾರ ಬೆಳೆದರೆ ಮಾತ್ರ ಹೂವಿನ ಹಾರ ನೀವು ಮತ್ತು ನಾವು ಕೊಡಬಹುದು. ಇಂಥ ಪರಿಸ್ಥಿತಿಯೊಳಗೆ ಕೆಲಸ ಮಾಡುವುದನ್ನು ನೋಡಿದರೆ ನಾನು ಅವರಿಗೆ ನನ್ನ ಅನಂತ ಧನ್ಯವಾದಗಳನ್ನು ಅರ್ಪಿಸಬೇಕಾಗುತ್ತದೆ. ಅವರು ಒಂದು ಉತ್ತಮವಾದ ಕೆಲಸವನ್ನು ಧೈರ್ಯದಿಂದ, ಮುಂದೆಜ್ಜೆ ಇಟ್ಟು ಮಾಡುವುದಕ್ಕೋಸ್ಕರ ನಾನು ಅಭಿನಂದಿಸಬೇಕಾಗುತ್ತದೆ.

ಇನ್ನು ಕೆಲವು ಸೂಚನೆಗಳನ್ನು ಮಾಡುವುದಾದರೆ, ಅದರಲ್ಲಿ ಮೊದಲನೆಯದು ವ್ಯವಸಾಯ ವ್ಯವಸಾಯದ ಬಗ್ಗೆ ಹೇಳುವುದಾದರೆ, ನಾವು ಹೆಚ್ಚಾಗಿ ಆಹಾರವನ್ನು ಬೆಳೆಸಬೇಕು. ನಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕು, ಇದೆಲ್ಲಾ ಗೊತ್ತಿದ್ದ ವಿಚಾರ. ಇದರಲ್ಲಿ ಹೊಸ ವಿಚಾರವೇನೂ ಇಲ್ಲ. ಈಗ ಒಂದು ವಕ್ಕಲುತನ ಹೆಚ್ಚಾಗಿ ಬೆಳೆಯಬೇಕು, ಅವರ ಆರ್ಥಿಕ ಪರಿಸ್ಥಿತಿ ವೆಟ್ಟಿಗೆ ಆಗಬೇಕಾದರೆ, ಅದಕ್ಕೆ ಬೇಕಾದ ಸೌಕರ್ಯ, ಸವಲತ್ತುಗಳನ್ನು ಸರ್ಕಾರದವರು ಒದಗಿಸಿ ಕೊಡಬೇಕು. ವಕ್ಕಲುತನಕ್ಕೆ ಯಾವ ಯಾವ ಸುಧಾರಣೆ ಬೇಕು. ರೈತರಿಗೆ ಯಾವ ಯಾವ ಸೌಕರ್ಯಗಳನ್ನು ಸರ್ಕಾರದವರು ಒದಗಿಸಿ ಕೊಡಬೇಕು ಎನ್ನುವ ವಿಚಾರವನ್ನು ನೋಡಿದಾಗ, ಅವರಿಗೆ ಸಮಯಕ್ಕನುಸಾರವಾಗಿ ಉತ್ತಮವಾದ ಗೊಬ್ಬರ, ಬೀಜ ಮತ್ತು ಯಂತ್ರೋಪಕರಣಗಳು ಯೋಗ್ಯ ಸಮಯದಲ್ಲಿ ಸಿಗುತ್ತಾ ಇಲ್ಲ. ಆದುದರಿಂದ ಅದು ಹೇಗೆ ಸಾಧ್ಯವಾಗುತ್ತದೆಂದು ನನ್ನ ವೈಯುಕ್ತಿಕವಾದ ಭಾವನೆ. ಉದಾಹರಣೆಗೆ ಸರ್ಕಾರದವರು ಎಷ್ಟೋ ಪ್ರಯೋಗ ಮಾಡಿ ಸುಧಾರಿತ ಬೀಜಗಳನ್ನು ತಯಾರು ಮಾಡಿದ್ದಾರೆ. ಆದರೆ ಈ ಬೀಜ ಸಿಗಬೇಕಾದರೆ, ರೈತನು ಅವನು ಎಲ್ಲಿದ್ದಾರೆಂಬುದನ್ನು ಹುಡುಕಿಕೊಂಡು ಹೋಗಬೇಕಾದ ಪ್ರಸಂಗವಿದೆ. ಕೊನೆಗೆ ಅವರು ಸಿಕ್ಕಿದರೂ ಕೂಡ ಬೀಜಗಳು ಸಿಗುವುದಿಲ್ಲ. ಈಗ ಗೊಬ್ಬರ ವಿತರಣೆ ಮಾಡುವುದಕ್ಕೋಸ್ಕರ ಪ್ರಯತ್ನ ಮಾಡಿ ತರಿಸುತ್ತಿದ್ದಾರೆ ಎಂಬುದು ನಮಗೆ ಗೊತ್ತಿದ್ದ ವಿಚಾರ. ಆದರೆ ಸರಿಯಾಗಿ ಅದು ವಿಲೆವಾರಿಯಾಗುತ್ತಿಲ್ಲ.

ಮೂರನೆಯದು, ಈಗ ವಿದೇಶಿವಿನಿಮಯಗಳಿಸಿ ಟ್ರಾಕ್ಟರ್ಸ್, ಬುಲ್‌ಡೋಸರ್ಸ್ ಮೊದಲಾದುವುಗಳನ್ನು ತೆಗೆದುಕೊಂಡು ಬಂದು ಪ್ರತಿ ಜಿಲ್ಲೆಯಲ್ಲಿ ಒಂದು ಯೂನಿಟು ಎಂದು ಮಾಡಿ ಒಬ್ಬ ಎಂಜಿನಿಯರು, ಡೆಪ್ಯುಟಿ ಇಂಜಿನಿಯರು, ಸುಪರ್‌ವೈಸರ್ ಅಸಿಸ್ಟೆಂಟ್ ಸುಪರ್‌ವೈಸರ್, ಡ್ರೈವರ್, ಮೆಕ್ಯಾನಿಕ್, ಕ್ಲೀನರ್ ಹೀಗೆ ಎಲ್ಲಾ ಸಿಬ್ಬಂದಿಯನ್ನು ನೇಮಿಸಿಕೊಂಡಿದ್ದಾರೆ. ಆದರೆ ಅವರು ಯೋಗ್ಯವಾದ ಕೆಲಸ ಮಾಡುತ್ತಿದ್ದಾರೆಯೇ, ಇಲ್ಲವೇ ಎಂಬುದನ್ನು ಯಾರೂ ನೋಡುತ್ತಿಲ್ಲ. ಹಿಂದೆ ಕೇಂದ್ರದಲ್ಲಿ ವ್ಯವಸಾಯದ ಮಂತ್ರಿಗಳಾಗಿದ್ದ ಶಾ ನವಾಜ್ ಖಾನ್ ಹೇಳಿದ್ದರು ಒಟ್ಟು ನಾಲ್ಕು ಸಾವಿರ ಟ್ರಾಕ್ಟರ್ಸ್‌ಗಳಲ್ಲಿ ಎರಡು ಸಾವಿರ ಕೆಟ್ಟು ಎರಡು ಸಾವಿರ ಮಾತ್ರ ಯೋಗ್ಯ ಸ್ಥಿತಿಯಲ್ಲಿವೆ, ಎರಡು ಸಾವಿರ ಟ್ರಾಕ್ಟರುಗಳನ್ನು 16 ಪ್ರಾಂತಗಳವರು ಹಂಚಿಕೊಂಡು ಬಿಟ್ಟರೆ ಒಂದೊಂದು ಪ್ರಾಂತ್ಯಕ್ಕೆ 200-250 ಬರಬಹುದು. ಮತ್ತು ಆ 200-250 ರಲ್ಲಿ ಎಷ್ಟು ಕೆಲಸ ಮಾಡುತ್ತಿವೆ ಎಷ್ಟು ಸರಿಯಾಗಿ ಮಾಡತ್ತಿಲ್ಲವೆಂದು ನೋಡಬೇಕು. ಉದಾಹರಣೆಗೆ

(ಶ್ರೀ ಎಸ್. ವಿ. ಅಗ್ನಿಹೋತ್ರಿ)

ಹೇಳುವುದಾದರೆ, ಧಾರವಾಡ ಜಿಲ್ಲೆಯೊಳಗೆ ಒಂದು ಯೂನಿಟು ಇದೆ. ಆದರೆ ಅಲ್ಲಿಯ ಟ್ರಾಕ್ಟರುಗಳು ಮತ್ತು ಬುಲ್‌ಡೋಸರುಗಳು ತಮ್ಮ ಶೆಡ್ಡಿನೊಳಗೇನೇ ಕುಳಿತುಕೊಂಡು ಬಿಟ್ಟಿವೆ; ಅದು ಏಕೆ ಎಂದು ವಿಚಾರ ಮಾಡಿದಾಗ, ನಮಗೆ ದೊರಕುವಂತಹದು ನಾಲ್ಕು ತಿಂಗಳು ಮಾತ್ರ. ಆ ನಾಲ್ಕು ತಿಂಗಳು ಮಾತ್ರ ಅವುಗಳನ್ನು ಉಪಯೋಗಿಸಬಹುದು. ನಾಲ್ಕು ತಿಂಗಳು ಮುಗಿದ ಮೇಲೆ ಆ ಟ್ರಾಕ್ಟರುಗಳನ್ನು ಯಾರೂ ವಿಚಾರ ಮಾಡುತ್ತಾ ಇಲ್ಲ. ಅಂದ ಮೇಲೆ ನಾಲ್ಕು ತಿಂಗಳು ಉಪಯೋಗಿಸಿ, ಉಳಿದ ಎಂಟು ತಿಂಗಳು ಸುಮ್ಮನೆ ಕುಳಿತುಕೊಳ್ಳುತ್ತವೆ ಮತ್ತು ಕೆಟ್ಟುಹೋಗುತ್ತವೆಂದು ಹೇಳುತ್ತಾರೆ. ಹೀಗೆ ಹನ್ನೆರಡು ತಿಂಗಳು ರೈತರಿಗೆ ಅದರಿಂದ ಸಿಗಬೇಕಾದ ಸೌಕರ್ಯ ಸಿಗುತ್ತಾ ಇಲ್ಲ. ಅಂದ ಮೇಲೆ ಅವನು ಯಂತ್ರದಿಂದ ಹೆಚ್ಚಿಗೆ ಎಷ್ಟು ಉಪಯೋಗ ಮಾಡಿ ಬೆಳೆಯಬಹುದು ಎಂಬುದನ್ನು ಯೋಚಿಸಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ನಾವು ಏನಾದರೂ ಆ ರೀತಿ ಹೇಳುತ್ತಿದ್ದರೆ, ನಿಜವನ್ನು ಹೇಳುವುದಿಲ್ಲ ಎಂದು ಹೇಳುತ್ತಿದ್ದರು. ಇದು ಸತ್ಯದ ಮಾತಲ್ಲವೇ ಅವರು ಹೇಳುತ್ತಿರುವುದು?

ಶ್ರೀ ಎಸ್. ನಿಜಲಿಂಗಪ್ಪ.—ನಮ್ಮವರು ಏನೂ ಹೇಳಲೇಬಾರದೇನು? ನಿಮ್ಮ ಪರವಾಗಿ ಇರತಕ್ಕವರು ಟೀಕೆ ಮಾಡತಕ್ಕದ್ದು ಅವಶ್ಯಕ; ಎದುರಿಗೆ ಇದ್ದವರು ಟೀಕೆ ಮಾಡತಕ್ಕದ್ದು ಅವಶ್ಯಕ. ಎಷ್ಟೆಷ್ಟೋ ನ್ಯಾಯವಾದ ಕೆಲಸಗಳನ್ನು ಹೊಗಳತಕ್ಕದ್ದು ನಿಮಗೂ ಅವಶ್ಯಕ ನಮಗೂ ಅವಶ್ಯಕ. ಆ ಪಾಠವನ್ನು ನೀವೂ ಕಲಿಯಿರಿ ನಾವೂ ಕಲಿಯುತ್ತೇವೆ.

ಶ್ರೀ ಎಸ್. ವಿ. ಅಗ್ನಿಹೋತ್ರಿ.—ನಾವು ಕೇಳಿದರೆ, ಒಂದು ಟ್ರಾಕ್ಟರ್ ಎಂಟು ಲೀಟರ್ ಎಣ್ಣೆ ತಿನ್ನುತ್ತಿತ್ತು, ಈಗ ಹತ್ತು ಲೀಟರ್ ತಿನ್ನುತ್ತಿದೆ. ಅದನ್ನು ವಾಪಸ್ಸು ಮಾಡುವುದಕ್ಕಾಗುವುದಿಲ್ಲ ಎಂದು ಇಂಜಿನಿಯರು ಹೇಳಿದರು. ಈ ವಿಚಾರದಲ್ಲಿ ನಾವು ಸ್ವತಃ ಕಾಗದ ಪತ್ರಗಳನ್ನೂ ಬರೆದಿದ್ದೇವೆ, ಅದು ಏನೂ ವಿಚಾರಣೆಯಾಗಲಿಲ್ಲ. ಇಂತಹ ಪರಿಸ್ಥಿತಿಯಾದರೆ, ರೈತ ಎರಡು ಲೀಟರ್ ಹೆಚ್ಚಿಗೆ ಬೇಕಾದುದರ ರೊಕ್ಕವನ್ನೂ ಕೊಡಲು ತಯಾರಿದ್ದಾನೆ. ಆದರೆ ಹೆಚ್ಚಿಗೆ ತೆಗೆದುಕೊಂಡರೆ ಆಡಿಟರ್ ಅಬ್ಜೆಕ್ಷನ್ ಬರಬಹುದು ಎಂದು ಆಫೀಸರರ ಹೇಳಿಕೆ. ಅದ್ದರಿಂದ ಅದನ್ನು ಅವರು ಒಂದು ವ್ಯವಹಾರಿಕ ದೃಷ್ಟಿಯಿಂದ ಒಂದು ಟೆಕ್ನಿಕಲ್ ಡಿಫಿಕಲ್ಟೀ ಇದೆ ಎಂದು ಹೇಳುತ್ತಾರೆ. ಈ ಟೆಕ್ನಿಕಲ್ ಡಿಫೀಕಲ್ಟಿ ಹೋಗುವುದು ಯಾವಾಗ? ನಮಗೆ ಸಿಗುವುದು ಯಾವಾಗ? ಅದರಿಂದ ನಮ್ಮ ರೈತರಿಗೆ ಇದರಿಂದ ಬೇಕಾದ ಸಮಯಕ್ಕೆ, ಯೋಗ್ಯವಾದ ಸಮಯದಲ್ಲ, ಈ ಟ್ರಾಕ್ಟರುಗಳಿಂದ ಅನುಕೂಲ ಒದಗುವುದಿಲ್ಲವೆಂದು ನಾನು ಬಹಳ ಕಳಕಳಿಯಿಂದ ಹೇಳಬೇಕಾಗಿದೆ.

ಎರಡನೆಯ ವಿಚಾರ ನೌಕರಿ ಬಗ್ಗೆ ಹೇಳುವುದು ಇಷ್ಟೆ ಸಾಕಷ್ಟು ವಿದ್ಯಾರ್ಥಿಗಳನ್ನು ಪದವೀಧರರನ್ನಾಗಿ ಮಾಡುತ್ತಾ ಇದ್ದೀರಿ. ನೌಕರಿ ಕೊಟ್ಟು 2-2½ ವರ್ಷ ಆದಮೇಲೆ ನೌಕರಿಯಿಂದ ತೆಗೆದುಬಿಡುತ್ತೀರಿ. ಅವನು ನೌಕರಿ ಬಿಟ್ಟು ಎಲ್ಲಿ ಹೋಗಬೇಕು? ಅದು ಕಠಿಣವಾದ ಪರಿಸ್ಥಿತಿ. ಮೊದಲೇ ಯೋಚನೆ ಮಾಡಬೇಕು. ಅನಂತರ ನೌಕರಿಯನ್ನು ಹೊಸಬರಿಗೆ ಕೊಡಬೇಕಾಗಿದೆ. ಆಗ ಹಳಬರನ್ನು ಬಿಡಿಸಿ ಹೊಸಬರನ್ನು ತೆಗೆದುಕೊಳ್ಳುತ್ತೀರಿ. ಯಾವ ಯಾವ ಆಫೀಸಿನಲ್ಲಿ ರಿಟ್ರೆಂಚ್ ಮಾಡುವ ಪ್ರಶ್ನೆ ಬರುತ್ತದೋ ಅಲ್ಲಿ ರಿಟ್ರೆಂಚ್ ಮಾಡದಂತೆ ಹೊಸ ಅಪಾಯಿಂಟ್‌ಗಳನ್ನು ಮಾಡಿಯಾದರೂ ಅವರಿಗೆ ಕೆಲಸ ಕೊಡುವಂತೆ ಗಮನ ಕೊಡಬೇಕು. ಒಂದುವೇಳೆ ರಿಟ್ರೆಂಚ್‌ಮೆಂಟ್ ಮಾಡುವುದು ಅನಿವಾರ್ಯವಾಗಿ ಬಂದರೆ, ರಿಟ್ರೆಂಚ್ ಆದವರಿಗೆ ಪ್ರಾಶಸ್ತ್ಯ ಕೊಟ್ಟು ಇನ್ನು ಎಲ್ಲಾದರೂ ಬೇರೆ ಕಡೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಮೂರನೆಯದಾಗಿ, ಉದ್ಯಮಗಳ ಬಗ್ಗೆ ಹೇಳಬೇಕೆಂದರೆ, ಈಗ ಮಾನ್ಯ ಅರ್ಥ ಸಚಿವರು ಹೇಳಿದ್ದರು, ಸೋಪ್ ಫ್ಯಾಕ್ಟರಿ, ಗೌರ್ನಮೆಂಟ್ ಸಿಲ್ಕ್ ವೀವಿಂಗ್ ಫ್ಯಾಕ್ಟರಿ ಬಹಳ

ಚೆನ್ನಾಗಿ ಕೆಲಸ ಮಾಡುತ್ತಾ ಇದೆ ಎಂದು. ಅದು ತೃಪ್ತಿಕರವಾಗಿದೆ ಎಂದು ಹೇಳಿದರು. ನೀವು ಇಂಡಸ್ಟ್ರಿಯಲ್ ಎಸ್ಟೇಟ್ ಪ್ರತಿ ಜಿಲ್ಲೆಯಲ್ಲೂ ಏನು ಮಾಡಿದ್ದೀರಿ, ಅದು ಚೆನ್ನಾಗಿ ನಡೆಯುವುದಿಲ್ಲ, ನಾವು ಸಮಕ್ಷಮ ನೋಡಿದ್ದೇವೆ. ಬಹಳ ಇಂಡಸ್ಟ್ರಿಯಲ್ ಎಸ್ಟೇಟು ಮಾಡಿದ್ದೀರಿ. ನಿಮಗೆ ಬಹಳ ಉತ್ಸಾಹ ಇರಬಹುದು. ಇಂಡಸ್ಟ್ರಿಯಲ್ ಎಸ್ಟೇಟ್ ಆದಮೇಲೆ ಅದರ ಕಡೆ ಅಷ್ಟು ನಿಗಾ ಇರುವುದಿಲ್ಲ. ಧಾರವಾಡ ಇಂಡಸ್ಟ್ರಿಯಲ್ ಎಸ್ಟೇಟು ತೆಗೆದುಕೊಂಡರೆ ಅದರಲ್ಲಿ ಸುಮಾರು 30 ಮಳಿಗೆಗಳು ಇವೆ. ಅದರಲ್ಲಿ 26-27 ಮಳಿಗೆಗಳು ಆಕ್ಯುಪೈ ಆಗಿವೆ. ಕೆಲಸ ನಡೆಯುತ್ತಾ ಇದೆ. ಆದರೆ ಅವರಿಗೆ ರಾಮೆಟೀರಿಯಲ್ಸ್ ಇಲ್ಲವೆಂದು ಬಹಳ ಮಟ್ಟಿಗೆ ತೊಂದರೆಯಾಗಿದೆ ಎಂದು ಹೇಳುತ್ತೇನೆ. ಅದು ಸೆಂಟ್ರಲ್ ಗೌರ್ನಮೆಂಟ್ ಕೋಟಾದಿಂದ ಬಂದಿದ್ದನ್ನು ನಾವು ಡಿಸ್ಟ್ರಿಬ್ಯೂಟ್ ಮಾಡುತ್ತೇವೆ. ಕೇಂದ್ರ ಸರ್ಕಾರದಿಂದ ಹೆಚ್ಚು ರಾಮೆಟೀರಿಯಲ್ಸ್ ಬಂದರೆ ನಾವು ಹೆಚ್ಚಾಗಿ ಕೊಡಲು ಅಡ್ಡಿ ಇಲ್ಲ ಎಂದು ಸರ್ಕಾರದವರು ಹೇಳುತ್ತಾರೆ. ಕೇಂದ್ರ ಸರ್ಕಾರದವರು ಹೆಚ್ಚಾಗಿ ಕೊಡದೇ ಇರಲು ಕಾರಣ ಏನು ? ರಾಮೆಟೀರಿಯಲ್ಸ್ ಕೊಡದೇ ಹೋದರೆ ಕೈಗಾರಿಕೆ ಕೆಲಸ ಮಾಡಲು ಸಾಧ್ಯ ಇಲ್ಲ ಎನ್ನುವುದು ನಿಮಗೆ ಗೊತ್ತಿಲ್ಲವೇ? ಆ ಇಂಡಸ್ಟ್ರಿ ಕೆಲಸ ಮಾಡದೇ ನಿಂತರೆ ಕೂಲಿಗಾರರಿಗೆ ಕೆಲಸ ಇಲ್ಲ. ಲೇಬರ್ ಪ್ರಾಬ್ಲೆಮ್ಸ್ ಪ್ರಾರಂಭವಾಗುತ್ತದೆ ಎನ್ನುವುದು ನಾವು ಪ್ರತ್ಯೇಕ ಹೇಳಬೇಕೇ ? ಇದು ಇಂಡಸ್ಟ್ರೀಸ್‌ನಲ್ಲಿ ಅಶಾಂತಿಗೆ ಕಾರಣವಾಗುತ್ತದೆ. ಮತ್ತು ದೊಡ್ಡ ದೊಡ್ಡ ಉದ್ಯಮೆಗಾರರಿಗೆ, ನಿಮಗೆ ನೀರನ್ನು ಕೊಡುತ್ತೇವೆ, ವಿದ್ಯುಚ್ಛಕ್ತಿ ಇನ್ನೂ ಇತರ ಸೌಕರ್ಯಗಳನ್ನು ಕೊಡುತ್ತೇವೆ ಎಂದು ಹೇಳುತ್ತೀರಿ. ಆದರೆ ಅವರು ಇಲ್ಲಿಗೆ ಬಂದಾಗ ನಿರಾಶೆಯಾಗುತ್ತಾರೆ. ಅವರನ್ನು ವಾಪಸ್ಸು ಹೋಗದಂತೆ ನೀವು ಇಂಡಸ್ಟ್ರೀಸ್ ಏನು ಪ್ರಾರಂಭ ಮಾಡುತ್ತೀರಿ ಅದನ್ನು ಮೇನ್‌ಟೇನ್ ಮಾಡಿಕೊಳ್ಳುವ ಪ್ರಯತ್ನ ಮಾಡಬೇಕು ಎಂದು ನಾನು ಹೇಳುತ್ತೇನೆ.

ಇನ್ನು ಸಂಪರ್ಕ ಸಾಧನೆ ಬಗ್ಗೆ ಹೇಳುವುದಾದರೆ, ನ್ಯಾಷನಲ್ ಹೈವೇ, ಪ್ರೊವಿನ್‌ಷಿಯಲ್ ಹೈವೇ ಇವು ಚೆನ್ನಾಗಿ ಕೆಲಸ ನಡೆಯುತ್ತಾ ಇದೆ. ಆದರೆ ವಿಲೇಜ್ ಕಮ್ಯೂನಿಕೇಷನ್ಸ್ ವಿಚಾರದಲ್ಲಿ ಸ್ವಲ್ಪ ವ್ಯಸನ ಪಡಬೇಕಾದ ಸಂಗತಿಯಾಗಿದೆ. ಎಷ್ಟೋ ಹಳ್ಳಿಗಳಲ್ಲಿ ರಸ್ತೆಗಳು ಬಹಳ ಹೀನಸ್ಥಿತಿಯಲ್ಲಿವೆ. ತಾಲ್ಲೂಕು ಬೋರ್ಡುಗಳಿಗೆ ರೂರಲ್ ಕಮ್ಯೂನಿಕೇಷನ್ ರಸ್ತೆಗಳನ್ನು ವಹಿಸಿದ್ದಾರೆ. ಅವರಿಗೆ ಇರುವ $3\frac{1}{2}$ ಲಕ್ಷ ಹಣದಲ್ಲಿ ಮೈನ್‌ಟೈನ್ ಮಾಡುವುದಕ್ಕೆ ಸಾಧ್ಯ ಇಲ್ಲ. ನಾನು ಬೇಡಿಕೊಳ್ಳುವುದು ಏನೆಂದರೆ, 10 ಸಾವಿರ ರೂಪಾಯಿಗಿಂತಲೂ ಹೆಚ್ಚಾಗಿ ಖರ್ಚುಬೀಳುವ ರಸ್ತೆಗಳನ್ನು ಸರ್ಕಾರದವರು ತೆಗೆದುಕೊಂಡು ಅವರ ಖರ್ಚಿನಲ್ಲಿ ಈ ಕೆಲಸವನ್ನು ಮಾಡತಕ್ಕದ್ದು ಒಳ್ಳೆಯದು ಎಂದು ಹೇಳುತ್ತೇನೆ.

ಇನ್ನು ಪ್ರಾಥಮಿಕ ಶಿಕ್ಷಣದ ವಿಚಾರದಲ್ಲಿ ಬೊಂಬಾಯಿ ಕರ್ಣಾಟಕದಲ್ಲಿ ಅನೇಕ ಕಷ್ಟಗಳು ಇವೆ. ನಾನು ಹೇಳುವುದು ಏನೆಂದರೆ, ಕೆಲವು ಉರ್ದು ಸ್ಕೂಲು ನಡೆಯುತ್ತಾ ಇರುವುದರಲ್ಲಿ ಟ್ರೈನಿಂಗ್ ಕಾಲೇಜು ಸಹ ಇದೆ. ಉರ್ದು ಉಪಾಧ್ಯಾಯರು ಟ್ರೈನಿಂಗ್ ಕಾಲೇಜಿಗೆ ಸೀಟಿಗೆ ಅರ್ಜಿ ಹಾಕಿಕೊಂಡರೆ, ಸೀಟು ಸಿಗುವುದಿಲ್ಲ. ಉರ್ದು ಮೇಷ್ಟ್ರುಗಳಿಗೆ ಟ್ರೈನಿಂಗ್ ಆಗಲಿಲ್ಲ ಎಂದು ಅವರ ಇನ್‌ಕ್ರಿಮೆಂಟ್, ಪ್ರಮೋಷನ್ ಹಿಡಿಯುತ್ತಾರೆ. ಅವರಿಗೆ ಕಾಲೇಜಿನಲ್ಲಿ ಅವಕಾಶ ದೊರೆಯದೇ ಹೋದರೆ ಅವರಿಗೆ ಟ್ರೈನಿಂಗ್ ದೊರಕುವ ಹಾಗೇ ಇಲ್ಲ. ಎಲ್ಲರಿಗೂ ಒಂದೇ ಸಾರಿ ಅವಕಾಶ ಸಿಕ್ಕುವುದಿಲ್ಲ. ಆದುದರಿಂದ ಸಾಕಾದಷ್ಟು ಉರ್ದು ಟ್ರೈನಿಂಗ್ ಕಾಲೇಜನ್ನು ತೆರೆಯುವಂತೆ ಮಾಡಬೇಕು. ಇಲ್ಲದೇ ಇದ್ದ ಪಕ್ಷದಲ್ಲಿ ಟ್ರೈನಿಂಗ್ ಆಗದೇ ಇದ್ದವರೂ ಅವರ ಸಂಬಳಗಳನ್ನೂ, ಇನ್‌ಕ್ರಿಮೆಂಟ್‌ಗಳನ್ನೂ ಅವರಿಗೆ ತಾತ್ಕಾಲಿಕವಾಗಿ ಕೊಡುವ ಹಾಗೆ ಪ್ರಯತ್ನ ಮಾಡಬೇಕೆಂದು ಹೇಳಿ ಸಾಕಷ್ಟು ಸಮಯವನ್ನು ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ELECTION OF MEMBERS OF THE COMMITTEE AND PUBLIC ACCOUNTS RESULTS.

Mr. SPEAKER.—I have to announce the results of election to the Committee on Public Accounts.

As the number of nominations to the Committee on Public Accounts is equal to the number of seats to be filled, the following members are declared elected to the Committee on Public Accounts:

1. Sri B. Basaviah
2. Sri S. Gopala Gowda
3. Sri S. M. Gureddi
4. Sri H. B. Jwalaniah
5. Sri S. D. Kothavale
6. Sri Manikrao Shama Rao
7. Sri B. L. Narayanaswamy
8. Sri K. H. Patil
9. Sri M. Ramappa
10. Sri K. Sangangoud
11. Sri S. Sivappa
12. Sri K. G. Thimme Gowda

The Chairman of the Committee has to be nominated by the Speaker. I have to receive election results from the Legislative Council, after the results are announced in the Legislative Council, the Chairman will be nominated.

BUDGET ESTIMATES FOR 1967-68 VOTING OF DEMANDS FOR GRANTS (*Vote on Account*) Debete. *Contd.*-

†ಶ್ರೀ ಬಿ. ಪರಮೇಶ್ವರಪ್ಪ (ಹೊಳಲ್ಕೆರೆ).—ಸನ್ಮಾನ್ಯ ಅಧ್ಯಕ್ಷರೇ, ಈ ಮುಂಗಡ ಪತ್ರ ನೋಡಿದರೆ ಸ್ವಾತಂತ್ರ್ಯ ಬಂದಮೇಲೆ ಹಳ್ಳಿಗಾಡಿನಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮತ್ತು ಕುಡಿಯುವ ನೀರಿನ ಅನುಕೂಲತೆ ಹಳ್ಳಿಗಾಡಿನ ರಸ್ತೆ ಇಂತಹವುಗಳನ್ನು ಮೊಟ್ಟ ಮೊದಲನೆಯದಾಗಿ ಮಾಡುತ್ತೇವೆಂದು ಕಾಂಗ್ರೆಸ್‌ನವರು ಕೊಟ್ಟ ಭರವಸೆ, ಕೊಟ್ಟ ಮಾತನ್ನು ಸುಮಾರು 20 ವರ್ಷಗಳ ಅವಧಿಯಲ್ಲಿ ಅವರೇ ಆಡಳಿತ ನಡೆಸಿದರೂ ಕೂಡ ಇಂದಿನವರೆಗೆ ಇಂತಹ ಮುಖ್ಯವಾದ ವಚನವನ್ನು ಕಾಂಗ್ರೆಸ್ ಸರ್ಕಾರ ಪರಿಪಾಲಿಸಿಕೊಂಡು ಬಂದಿಲ್ಲ ಎಂದು ನಾನು ದುಃಖದಿಂದ ಹೇಳುತ್ತೇನೆ. ಇವೊತ್ತು ಪ್ರಾಥಮಿಕ ವಿದ್ಯಾಭ್ಯಾಸದ ಕಡೆಗೆ ನೋಡಿದರೆ ಕಟ್ಟಡ ಇಲ್ಲದ ನೂರಾರು ಹುಡುಗರನ್ನು ಒಂದೇ ಒಂದು ಕೊಠಡಿಯಲ್ಲಿ ಸೇರಿಸಿಕೊಂಡು ಪ್ರೈಮರಿಸ್ಕೂಲು ನಡೆಸುತ್ತಾ ಇದ್ದಾರೆ. ಇವೊತ್ತು ಕಟ್ಟಡ ಕೇಳಿದರೆ, ತಾಲ್ಲೂಕು ಬೋರ್ಡ್ 1000, ಸರ್ಕಾರ 1000, ಪೀಪಲ್ಸ್ ಕಾಂಟ್ರಿಬ್ಯೂಷನ್ 1000, ಈ ರೀತಿ ಒಂದು ವ್ಯವಸ್ಥೆ ಮಾಡಿದ್ದಾರೆ. ಆದರೆ ಪ್ರೈಮರಿ ವಿದ್ಯಾಭ್ಯಾಸದ ಮಟ್ಟದಲ್ಲೇ ಗ್ರಾಮಸ್ಥರನ್ನು ಹಣ ಕೇಳಿದರೆ ಎಲ್ಲಿಂದ ಕೊಡಬೇಕು? ಆದರೆ ಪಟ್ಟಣದಲ್ಲಿರುವ ಶಾಲೆಗಳಿಗೆ ಆ ತರಹ ಕಾಂಟ್ರಿಬ್ಯೂಷನ್, ನಿಗದಿ ಏನೂ ಇಲ್ಲ. ಹಳ್ಳಿಗಾಡಿನ ಜನಗಳಿಗೆ ಮಾತ್ರ ಇದು ಅನ್ವಯಿಸುತ್ತದೆ. ಹಳ್ಳಿಗಾಡಿನಲ್ಲಿರತಕ್ಕ ಜನರಿಗೂ ಪಟ್ಟಣದಲ್ಲಿರತಕ್ಕ

ಜನರಿಗೂ ವ್ಯತ್ಯಾಸ ಇದೆಯೇ? ಪಟ್ಟಣಗಳಲ್ಲಿ ಐಶ್ವರ್ಯವಂತರು ವ್ಯಾಪಾರಸ್ಥರು ಇದ್ದರೂ ಕೂಡ ಅಂತಹ ಒಂದು ಕೆಲಸಕ್ಕೆ ಕಾಂಟ್ರಿಬ್ಯೂಷನ್ ನಿಗದಿ ಮಾಡದೆ ಹಳ್ಳಿಗಾಡಿನಲ್ಲಿರತಕ್ಕಂಥ ಜನಗಳಿಗೆ ಮಾತ್ರ ನಿಗದಿ ಮಾಡಿದ್ದಾರೆ. ಹಳ್ಳಿಗಾಡಿನವರು ಮಾತ್ರ ಇದನ್ನು ಏತಕ್ಕೆ ಕೊಡಬೇಕು? ಈ ರೀತಿ ರೈತರ ಮೇಲೆ ಪೀಪಲ್ಸ್ ಕಾಂಟ್ರಿಬ್ಯೂಷನ್ ನಿಗದಿ ಮಾಡಬೇಕಾದರೆ ಎರಡು ಕಡೆಯೂ ಒಂದೇ ಸಮನಾಗಿ ಮಾಡಿ, ಇಲ್ಲದೇ ಹೋದರೆ ಇದೇ ತರಹ ಸೌಲಭ್ಯ ಹಳ್ಳಿಗಳಿಗೂ ಕೊಟ್ಟು ನಿಗದಿ ಮಾಡಿರತಕ್ಕಂಥಾದ್ದನ್ನು ತೆಗೆದು ಹಾಕಿ ಸರ್ಕಾರವೇ ವಹಿಸಿಕೊಂಡು ಮೊದಲನಂತೆ ಪ್ರೈಮರಿ ವಿದ್ಯಾಭ್ಯಾಸಕ್ಕೆ ಆದ್ಯತೆ ಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನು ಎರಡನೆಯದಾಗಿ ಹಳ್ಳಿಗಾಡಿನ ರಸ್ತೆಗಳು : ಹಳ್ಳಿಗಾಡಿನ ರಸ್ತೆಗಳ ವಿಚಾರವಾಗಿ ಶ್ರೀಮಾನ್ ಅಗ್ನಿಹೋತ್ರಿಯವರು ಹೇಳಿದರು. ಪಿ.ಡಬ್ಲ್ಯು.ಡಿ. ಯವರು ಅಲ್ಲಷ್ಟು ಇಲ್ಲಷ್ಟು ಮಣ್ಣು ಹಾಕಿ ರಸ್ತೆ ರಿಪೇರಿ ಮಾಡಿ, ಕಂಡವರ ಮಕ್ಕಳನ್ನು ಬಾವಿಗೆ ತಳ್ಳುವಂತೆ, ಈಗ ಆ ರಸ್ತೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಿದ್ದಾರೆ. ಈ ತಾಲ್ಲೂಕ್ ಬೋರ್ಡಿನವರಿಗೆ ಈ ಪಿ.ಡಬ್ಲ್ಯು.ಡಿ. ರಸ್ತೆಗಳನ್ನು ಪಕ್ಕಾ ರಸ್ತೆಗಳನ್ನಾಗಿ ಮಾಡುವುದಕ್ಕಾಗುತಿಲ್ಲ. ಆದ್ದರಿಂದ ಈ ರಸ್ತೆ ರಿಪೇರಿ ಕೆಲಸವನ್ನು ಸರ್ಕಾರದವರೇ ವಹಿಸಿಕೊಳ್ಳಬೇಕು. 20 ವರ್ಷದಿಂದಲೂ ಸರ್ಕಾರದವರು ರಸ್ತೆ ರಿಪೇರಿ ಮಾಡಿಸಿಕೊಂಡು ಬಂದಿರುವಂತೆ, ಈಗಲೂ ತಾವೇ ರಿಪೇರಿ ಮಾಡಿಸಿ ತಮ್ಮ ಮಾತನ್ನು ಉಳಿಸಿಕೊಳ್ಳಬೇಕು. ಈ ಬಾಬಿಗೆ ಹಣವಿಲ್ಲದಿದ್ದರೆ ಬೇರೆ ರೂಪದಲ್ಲಿ ಹಣವನ್ನು ಒದಗಿಸಿ ಅನುಕೂಲ ಮಾಡಿಕೊಡಬೇಕು.

ಇನ್ನು ನೀರಿನ ವಿಷಯ : ನೀರಿನ ವಿಷಯವಾಗಿ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. 4,700 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳಿಲ್ಲವೆಂದು ಆ ಭಾಷಣದಲ್ಲಿ ಹೇಳಿದ್ದಾರೆ. ಸ್ವಾತಂತ್ರ್ಯ ಬಂದು 20 ವರ್ಷವಾದರೂ 4,700 ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸುವುದಕ್ಕಾಗಲಿಲ್ಲವೆ ? ಈ ಕೆಲಸವನ್ನು 10 ವರ್ಷಗಳ ಹಿಂದೆಯೇ ಮಾಡಬೇಕಾಗಿತ್ತು. ಇದುವರೆಗೂ ಸಹ ಈ ಕುಡಿಯುವ ನೀರಿನ ಬಾವಿಗಳ ಬಗ್ಗೆ ಗಮನ ಕೊಡದಿರುವುದು ಒಪ್ಪತಕ್ಕಂಥ ಮಾತಲ್ಲ. ನಾವು ಇಷ್ಟೊಂದು ಭಾರಿ ಕೆಲಸಗಳನ್ನು ಮಾಡುತ್ತಿದ್ದೇವೆಂದು ಹೇಳಿಕೊಳ್ಳುವವರು ಇದುವರೆಗೆ ಕುಡಿಯುವ ನೀರಿನ ಬಾವಿಗಳನ್ನು ಒದಗಿಸದಿರುವುದು ದುಃಖದ ವಿಷಯವಾಗಿದೆ. ಕುಡಿಯುವ ನೀರಿನ ಬಾವಿಗಳನ್ನು ಮೊದಲು ಒದಗಿಸಬೇಕು. ಅಲ್ಲದೆ ಮಂಜೂರು ಮಾಡಿದ ಕೆಲಸವನ್ನು ಆ ವರ್ಷದೊಳಗೆ ಕಡ್ಡಾಯವಾಗಿ ಆಗಬೇಕೆಂದು ನಿಗದಿ ಮಾಡಿದರೆ ಆ ಕೆಲಸ ಉಳಿಯುವುದಿಲ್ಲ. ಕೆಲವು ಕೆಲಸಗಳನ್ನು ಈ ಪಿ.ಡಬ್ಲ್ಯು.ಡಿ. ಯವರು 10 ವರ್ಷಗಳ ಹಿಂದೆ ಬಡ್ಜೆಟಿನಲ್ಲಿ ಸೇರಿಸಿ, ಮಂಜೂರಾತಿಯನ್ನು ಕೊಟ್ಟು, ಇವತ್ತಿನವರೆಗೂ ಆ ಕೆಲಸಗಳು ಪೂರ್ತಿಯಾಗದೆ ಅರ್ಧದಲ್ಲಿಯೇ ಉಳಿದಿವೆ. ಯಾವ ಕಾರಣದಿಂದ ಆ ಕೆಲಸಗಳು ನಿಂತಿವೆ ಎಂಬುದನ್ನು ಸಂಬಂಧಪಟ್ಟವರು ವಿಚಾರ ಮಾಡಿಲ್ಲ. ಹೊಸ ಹೊಸ ಕೆಲಸಗಳನ್ನು ತೆಗೆದುಕೊಂಡು ಪ್ರಾರಂಭ ಮಾಡುತ್ತಿದ್ದಾರೆ. ಇದಕ್ಕೆ ಒಂದು ಉದಾಹರಣೆ ಹೇಳುವುದಾದರೆ, ದೊಗ್ಗನಾಲು ಮತ್ತು ಬೀದುರ್ಗ ಯೋಜನೆಗಳನ್ನು ಮಂಜೂರು ಮಾಡಿ 10 ವರ್ಷಗಳಾಯಿತು. ಇದುವರೆಗೆ ಕೇವಲ 30 ಸಾವಿರ ರೂಪಾಯಿಗಳ ಕೆಲಸ ಮಾಡಿಸಿದ್ದಾರೆ. ದೊಗ್ಗನಾಲು ಯೋಜನೆಗೆ 1·75 ಲಕ್ಷ ರೂಪಾಯಿಗಳು ಮಂಜೂರಾಗಿದೆ. ಅರ್ಧದಲ್ಲಿಯೇ ಕೆಲಸ ನಿಲ್ಲಿಸಿದ್ದಾರೆ. ಅಡಳೂರು ಹಳ್ಳದ ಅಣೆಕಟ್ಟು ಮತ್ತು ಕುಣಗಲಿ ಅಣೆಕಟ್ಟನ್ನು ಇನ್ನೂ ಪೂರ್ತಿ ಮಾಡಿಲ್ಲ. ಇದುವರೆಗೆ ಒಂದು ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ, 10 ವರ್ಷವಾದರೂ ಕೆಲಸವಾಗದಿದ್ದರೆ, ಈಗ ಖರ್ಚು ಮಾಡಿರುವ ಹಣಕ್ಕೆ ಬಡ್ಡಿಯೇನಾಯಿತು ; ಅಣೆಕಟ್ಟಿನ ಸುತ್ತಮುತ್ತಲಿರುವ ರೈತರಿಗೆ ಕೆಲಸವಾಗದದ್ದರಿಂದ ಎಷ್ಟು ವ್ಯಥೆಯಾಗುತ್ತದೆ, ಎಂಬುದನ್ನು ಯೋಚನೆ ಮಾಡಬೇಕು. ಆಯಾ ವರ್ಷದಲ್ಲಿ ಮಂಜೂರಾದ ಕೆಲಸಗಳು ಯಾವ ಕಾರಣಕ್ಕಾಗಿ ನಿಂತಿವೆ ಎಂಬುದನ್ನು ವಿಚಾರ ಮಾಡುತ್ತಿಲ್ಲ. ನಮ್ಮ ಕಾಲದಲ್ಲಾದರೂ ಈ ಕೆಲಸವನ್ನು ಮಾಡಿಸದಿದ್ದರೆ ನಮ್ಮ

(ಶ್ರೀ ಬಿ. ಪರಮೇಶ್ವರಪ್ಪ)

ಮಕ್ಕಳು ಏನು ಸುಖ ಪಡುತ್ತಾರೆ? ಸರ್ಕಾರದವರು ಇರಿಗೇಷನ್ ಪಂಪ್‌ಸೆಟ್ಟುಗಳನ್ನು ಬೇಕಾದಷ್ಟು ಕೊಟ್ಟಿದ್ದೇವೆಂದು ಹೇಳುತ್ತಾರೆ. ಬಾವಿ ತೆಗೆಯಲು ಬೇಕಾದಷ್ಟು ಜನರಿಗೆ ಸಾಲವನ್ನು ಕೊಟ್ಟಿದ್ದೇವೆಂದು ಹೇಳುತ್ತಾರೆ. ಪಂಪ್‌ಸೆಟ್ಟುಗಳನ್ನು ರೈತನು ತೆಗೆದುಕೊಂಡು 2–3 ವರ್ಷ ಮನೆಯಲ್ಲಿಟ್ಟುಕೊಂಡಿರುತ್ತಾನೆ. ಅವನ ಜಮೀನಿಗೆ ಕರೆಂಟ್ ಕೊಡಲು ವೈರ್ ಇಲ್ಲ, ಪೋಲ್ ಇಲ್ಲ ಎಂದು ಎಕ್ಸಿಕ್ಯೂಟಿವ್ ಇಂಜನೀಯರ್ ಹೇಳುತ್ತಾರೆ. ಈ ರೀತಿಯಾದರೆ ಪಂಪ್‌ಸೆಟ್ಟುಗಳು ಉಪಯೋಗವಾದಂತಾಗುತ್ತದೆಯೇ? ಸರ್ಕಾರದವರು ಅನೇಕ ಯೋಜನೆಗಳನ್ನು ಕೈಗೊಂಡಿದ್ದೇವೆಂದು. ಹೇಳಬಹುದು, ಇದರಿಂದ ರೈತರಿಗೆ ಯಾವ ಅನುಕೂಲವೂ ಆಗುತ್ತಿಲ್ಲ. ನಾವು ಹೇಳುವ ವಿಚಾರಗಳನ್ನು ಮನಸ್ಸಿಗೆ ತೆಗೆದುಕೊಳ್ಳಬೇಕು. ನಾವು ವಿರೋಧ ಪಕ್ಷದವರು ಬರೀ ಟೀಕೆ ಮಾಡುವುದಕ್ಕೆ ಇದ್ದೇವೆ ಎಂದು ತಾವು ತಿಳಿಯಬಾರದು. ಬರೀ ಟೀಕೆ ಮಾಡುವುದಕ್ಕೆ ನಾವು ಬಂದಿಲ್ಲ. ಇರುವ ಕುಂದುಕೊರತೆಗಳನ್ನು ಅಡ್ಡಿಆತಂಕಗಳನ್ನು ತಿಳಿಸುವುದಕ್ಕೆ ಬಂದಿದ್ದೇವೆ. ನಾವು ಸಹ ಪ್ರಜೆಗಳ ಕೆಲಸ ಮಾಡುವುದಕ್ಕೆ ಬಂದಿದ್ದೇವೆಂದು ತಿಳಿಯಬೇಕು. ತಮ್ಮ ಪಕ್ಷದವರೇ ಆದ ಶ್ರೀಮಾನ್ ಅಗ್ನಿಹೋತ್ರಿಯವರು ಸಹ ಅನೇಕ ಕುಂದು ಕೊರತೆಗಳನ್ನು ಹೇಳಿದರು. ಈಗ ಏನಾಗಿದೆ ಎಂದರೆ, ಗಂಡಿನ ಕಡೆಯವರು ಗಂಡಿನ ಕಡೆ, ಹೆಣ್ಣಿನ ಕಡೆಯವರು ಹೆಣ್ಣಿನ ಕಡೆ ಎಂಬಂತೆ, ತಮ್ಮ ಪಕ್ಷದವರು ದನ್ಯವಾದಗಳನ್ನು ಅರ್ಪಿಸುವುದು, ವಿರೋಧ ಪಕ್ಷದವರು ಟೀಕೆ ಮಾಡುವುದಾಗಿದೆ, ಇದನ್ನು ಜನ ನೋಡುವುದಾಗಿದೆ. ಈ ರೀತಿ ನಡೆಯಬಾರದು. ನಾವೇನಾದರೂ ಆಡಳಿತದ ಬಗ್ಗೆಯಾಗಲಿ, ಯೋಜನೆಯ ಬಗ್ಗೆಯಾಗಲಿ ಇರುವ ಲೋಪದೋಷಗಳನ್ನು ಹೇಳಿದರೆ ಅದನ್ನು ಸರ್ಕಾರದವರು ಮನಸ್ಸಿಗೆ ತೆಗೆದುಕೊಂಡು, ನಾವು ಮತ್ತೊಮ್ಮೆ ಇಲ್ಲಿ ಸಭೆ ಸೇರುವುದರೊಳಗೆ ನಿವಾರಣೆ ಮಾಡಬೇಕು. ಆಗಿರುವ ಲೋಪದೋಷಗಳು ಯಾರಿಂದ ಆಗಿವೆ, ಆಗುವುದಕ್ಕೆ ಕಾರಣವೇನು ಎಂಬುದನ್ನು ಕೂಡಲೆ ವಿಚಾರ ಮಾಡಿದರೆ ನಮಗೆ ಸಂತೋಷವಾಗುತ್ತದೆ. ಇನ್ನೊಮ್ಮೆ ಇಲ್ಲಿಗೆ ಬಂದಾಗ ನಾವು ಹೇಳಿದ ಕೆಲಸವನ್ನು ಮಾಡಿಸಿದ್ದೀರಿ ಎಂದು ಹೇಳುತ್ತೇವೆಯೇ ವಿನಾ ಟೀಕೆ ಮಾಡುವುದಿಲ್ಲ. ಬಾವಿಗಳಿಗಾಗಿ ಹಣವನ್ನು ರೈತರಿಗೆ ಅಡಮಾನ ಬ್ಯಾಂಕ್ ಮೂಲಕ ಕೊಡಿಸುತ್ತಿದ್ದೀರಿ. ಅವರು ಹಣವನ್ನು ರೈತರಿಗೆ ಸಕಾಲದಲ್ಲಿ ಒದಗಿಸುವುದಿಲ್ಲ. ನಾನು ಸಹ ತಾಲ್ಲೋಕ್ ಬೋರ್ಡಿನ ಅಧ್ಯಕ್ಷನಾಗಿದ್ದೇನೆ, ನಾನು ಸಹ ರೈತರ ಕಷ್ಟವನ್ನು ಅರಿತಿದ್ದೇನೆ. ರೈತರಿಗೆ ಸಕಾಲದಲ್ಲಿ ಏತಕ್ಕೆ ಹಣ ಸಿಗುವುದಿಲ್ಲ ಎಂಬುದನ್ನು ಸರ್ಕಾರದವರು ವಿಚಾರ ಮಾಡುತ್ತಿಲ್ಲ. ನೀವು ಕೊಡುವ ಮೂರು ಸಾವಿರ, ಐದು ಸಾವಿರ ರೂಪಾಯಿಗಳಿಗೆ ಬಾವಿ ಕೆಲಸವನ್ನು ಮುಗಿಸುವುದಕ್ಕಾಗುವುದಿಲ್ಲ. ಏಕೆಂದರೆ, ಬಾವಿ ತೋಡುವಾಗ ಎರೆ ಮಣ್ಣು ಸಿಕ್ಕಿದರೆ ಅಲ್ಲಿ ಕಲ್ಲು ಕಟ್ಟಡ ಕಟ್ಟಬೇಕಾಗುತ್ತದೆ. ರೈತನಲ್ಲಿ ಹಣವಿರುವುದಿಲ್ಲ, ಬಾವಿ ಪೂರ್ತಿಯಾಗದೆ ಮೊದಲನ ಹಣವನ್ನು ಸಹ ಕೊಡುವುದಿಲ್ಲವೆಂದು ಬಿ.ಡಿ.ಓ. ಗಳು ಹೇಳುತ್ತಾರೆ. ಇದರಿಂದ ಅರ್ಧಕ್ಕೆ ನಿಲ್ಲುತ್ತದೆ. ಇಂತಹ ಒಂದು ಸಂದರ್ಭಗಳಲ್ಲಿ, ಅಂದರೆ ಎಲ್ಲಿ ಕಲ್ಲು ಕಟ್ಟಡ ಕಟ್ಟಬೇಕಾಗುತ್ತದೋ ಅಂತಹ ಕಡೆಗೆ ಹೆಚ್ಚು ಹಣವನ್ನು ಒದಗಿಸಿ ಸಹಾಯ ಮಾಡಬೇಕು. ಅರ್ಧವಾಗಿ ನಿಂತಿರುವ ಕೆಲಸಗಳಿಗೆ ಮತ್ತಷ್ಟು ಹಣ ಕೊಟ್ಟು ಕೆಲಸ ಪೂರ್ತಿಯಾಗುವುದಕ್ಕೆ ಏರ್ಪಾಡು ಮಾಡಬೇಕು. ಈ ರೀತಿ ಏರ್ಪಾಡು ಮಾಡಿದರೆ ನಾವು ಉತ್ತಮ ಬೆಳೆಯನ್ನು ನಿರೀಕ್ಷೆ ಮಾಡಬಹುದು.

ಶ್ರೀ ಡಿ. ದೇವರಾಜ ಅರಸ್.—ಅಂದರೆ ಒಂದು ಬಾವಿಗೆ 25 ಸಾವಿರ ರೂಪಾಯಿಗಳಂತೆ ಸಾಲ ಕೊಡಿಸಬೇಕೆಂದು ಹೇಳುತ್ತೀರಾ?

ಶ್ರೀ ಬಿ. ಪರಮೇಶ್ವರಪ್ಪ.—ಕೊನೆಯ ಪಕ್ಷ 5 ಸಾವಿರ ರೂಪಾಯಿಗಳನ್ನಾದರೂ ಕೊಡಬೇಕು. ಎರೆ ಮಣ್ಣು ಸಿಕ್ಕಿ, ಕಲ್ಲು ಕಟ್ಟಡ ಕಟ್ಟಬೇಕಾದರೆ ಮತ್ತಷ್ಟು ಸಹಾಯಮಾಡಬೇಕು.

ಶ್ರೀ ಡಿ. ದೇವರಾಜ ಅರಸ್.—ಎಲ್ಲರಿಗೂ ಬಾವಿ ತೋಡಲು ಹಣವನ್ನು ಸಾಲವಾಗಿ ಕೊಡಬೇಕೆಂದು ಹೇಳುತ್ತೀರಿ, ಮತ್ತು ಹೆಚ್ಚು ಹೆಚ್ಚು ಹಣವನ್ನು ಒದಗಿಸಬೇಕೆಂದು ಹೇಳುತ್ತೀರಿ, ಇದು ಹೇಗೆ ಸಾಧ್ಯ?

ಶ್ರೀ ಬಿ. ಪರಮೇಶ್ವರಪ್ಪ.—ಅದನ್ನು ನಾನು ಒಪ್ಪುತ್ತೇನೆ, ಕೊಟ್ಟ ಹಣ ಉಪಯೋಗವಾಗಬೇಕಾದರೆ, ಆ ಕೆಲಸ ಪೂರ್ತಿಯಾಗುವವರೆಗೂ ಹಣ ಸಹಾಯ ಮಾಡಬೇಕು. ಆಗ ಅವನು ಸಹ ಬಂಗಾರದ ಬೆಳೆಯನ್ನು ಬೆಳೆಯುತ್ತಾನೆ. ಇಷ್ಟು ಕಾಲಾವಕಾಶವನ್ನು ಅಧ್ಯಕ್ಷರು ಕೊಟ್ಟಿದ್ದಕ್ಕೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀಮತಿ ಚಂಪಾಬಾಯಿ ಜೊಗಳೆ (ಕಾಗವಾಡ).—ಮಾನ್ಯ ಅಧ್ಯಕ್ಷರೇ 1967-68ನೇ ಸಾಲಿನ ಬಡ್ಜೆಟನ್ನು ಅನುಮೋದಿಸುತ್ತಾ ನಾನು ಒಂದೆರಡು ಸಲಹೆಗಳನು ಹೇಳುವುದಕ್ಕೆ ಇಚ್ಛಿಸುತ್ತೇನೆ. ನನ್ನ ಕ್ಷೇತ್ರದೊಳಗೆ ಯಾವ ಒಂದು ವಿಕಾಸ ಯೋಜನೆಯ ಕೆಲಸವೂ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ನಮ್ಮ 46 ಹಳ್ಳಿಗಳಲ್ಲಿ ಸ್ವರಾಜ್ಯ ಬಂದು 20 ವರ್ಷವಾದರೂ ಸಹ ಒಂದು ಕೆಲಸವೂ ಏತಕ್ಕೆ ಆಗಿಲ್ಲ ಎಂದು ಪ್ರಶ್ನೆ ಕೇಳಬೇಕಾಗಿದೆ. ನಮ್ಮಲ್ಲಿ ಕೃಷ್ಣಾ ನದಿ ಹರಿಯುವ ಭಾಗದಲ್ಲಿ ಎರೆಮಣ್ಣು ಇವೆ. ಇದುವರೆಗೆ ಒಂದು ಬಾವಿಯೂ ಸಹ ಆಗಿಲ್ಲ, ರಸ್ತೆಯಾಗಿಲ್ಲ, ಒಂದು ದವಾಖಾನೆಯಾಗಿಲ್ಲ. ಇಂಗಳಕ ಊರಿನ ಜನರು ಚುನಾವಣೆಯಲ್ಲಿ ಓಟು ಮಾಡದೆ ಬರೀ ಪೆಟ್ಟಿಗೆಯನ್ನು ಕಳಿಸಿದ್ದಾರೆ. ನನಗೆ ಗುರುತು ಇರುವ ಒಬ್ಬ ಹೆಣ್ಣುಮಗಳು, ಎದುರು ಪಕ್ಷದವರಿಗೂ ಸಹ ಓಟು ಕೊಡಲಲ್ಲ, ಏತಕೆಂದು ಕೇಳಿದಕ್ಕೆ ಸ್ವರಾಜ್ಯ ಬಂದು 20 ವರ್ಷವಾದರೂ ಸಹ ನಮ್ಮ ಕಡೆ ಒಂದು ಕೆಲಸವೂ ಆಗಿಲ್ಲವೆಂದು ತಿಳಿಸುವುದಕ್ಕೆ ಬರೀ ಪೆಟ್ಟಿಗೆಯನ್ನು ಕಳಿಸಿದ್ದೇವೆಂದು ಹೇಳಿದಳು. ಇದು ಅಲ್ಲಿಯ ಜನರ ಅಸಂತೋಷವನ್ನು ತಿಳಿಸುತ್ತದೆ. ಪಿ.ಡಬ್ಲ್ಯೂ.ಡಿ. ಖಾತೆ ಬಹಳ ಮಹತ್ವದ್ದು ಅದೆ. ನಮ್ಮ ಹಳ್ಳಿಗಳ ಭಾಗದಲ್ಲಿ ಒಂದು ಸೇತುವೆ ಆಗಬೇಕು ಎಂದು ಸುಮಾರು ಇಪ್ಪತ್ತು ವರ್ಷಗಳಿಂದಲೂ ಸರಕಾರಕ್ಕೆ ಹೇಳುತ್ತ ಬಂದಿದ್ದೇವು. ಇಲ್ಲಿಗೆ ಸೇತುವೆ ಕಟ್ಟಲು ಹಣ ಮಂಜೂರಾಗಿತ್ತು ಎಂದು ಕೇಳುತ್ತೇವೆ. ಆದರೆ ಇದುವರಿಗೆ ಎತಕ್ಕಾಗಿ ಆಗಲಿಲ್ಲ ನಮಗೆ ತಿಳಿಯಲೊಲ್ಲದು. ಈಗಲಾದರೂ ಇದನ್ನು ಸರಕಾರ ಮಾಡಿಸಿಕೊಡಬೇಕು.

ನಮ್ಮಲ್ಲಿ ಕೃಷ್ಣಾನದಿ ಹರಿಯುತ್ತಿದೆ. ಸುಮಾರು 23 ಹಳ್ಳಿಗಳು ಇವೆ ಇವು ಕೃಷ್ಣಾ ನದಿಯ ಈಚೆ ದಂಡೆಯಲ್ಲಿ ಹಾಗೂ ಆಚೆ ದಂಡೆಯಲ್ಲಿಯೂ ಇವೆ. ಇಲ್ಲಿಯ ಜನರು ಅನುಕೂಲಕ್ಕಾಗಿ ಒಂದು ಶಾಲೆಯೂ ಇಲ್ಲ, ಹಾಗೂ ಒಂದು ದವಾಖಾನೆಯೂ ಇಲ್ಲ. ಇಲ್ಲಿರುವ 14 ಊರುಗಳಿಗೆ ಸರಿಯಾದ ದವಾಖಾನಾ ಇಲ್ಲದೇ ಹೋದರೆ ಇಲ್ಲಿನ ಜನಕ್ಕೆ ಅನುಕೂಲಗಳು ಹೇಗೆ ತಾನೇ ಬಂದೀತು? ಇದು ನಮ್ಮ ಜನರ ಅಸಂತೋಷದ ಗುರುತು ಎಂದು ಸರಕಾರ ತಿಳಿದುಕೊಂಡು ನಮಲ್ಲಿಯೂ ಕೂಡ ವಿಕಾಸ ಯೋಜನಾ ಬೇರೆ ಭಾಗಗಳಲ್ಲಿ ಮಾಡುವಂತೆ ಮಾಡಬೇಕೆಂದು ಹೇಳುತ್ತೇನೆ. ನಮ್ಮಲ್ಲಿರುವ ಜನ ನಮ್ಮ ಕಡೆಯಿಂದ ಹೆಣ್ಣು ಮಗಳು ಚುನಾವಣೆಯಲ್ಲಿ ಬರಲಿ ಎಂದು ನನ್ನನ್ನು ಇಲ್ಲಿಗೆ ಪ್ರತಿನಿಧಿಯಾಗಿ ಕಳುಹಿಸಿದ್ದಾರೆ. ನಮ್ಮ ಜನರ ಪರವಾಗಿ ನಾನು ಸರಕಾರದಲ್ಲಿ ಹೇಳುವುದು ವಿಕಾಸ ಯೋಜನೆಗಾಗಿ ಒಂದು ಸರ್ವೇ ಮಾಡಿಸಿ ಅದನ್ನು ಕಾರ್ಯಗತವಾಗುವಂತೆ ಮಾಡಬೇಕೆಂದು ಸರಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎಲ್ಲ ಕಡೆಗಳಲ್ಲಿ ವಿಕಾಸ ಯೋಜನಾ ಕೆಲಸ ಆಗುತ್ತಿದೆ. ಆದೇಕೋ ನಮ್ಮ ಕ್ಷೇತ್ರದಲ್ಲಿ ಆಗುತ್ತಿಲ್ಲ. ಇದರ ಕಡೆ ಈಗಲಾದರೂ ಲಕ್ಷ್ಯಕೊಟ್ಟು ವಿಕಾಸ ಯೋಜನಾ ಮಾಡಲು ಸರ್ವೇ ಮಾಡಬೇಕು. ಇದು ಬಹಳ ಮಹತ್ವದ್ದು. ನಮ್ಮ ಕಡೆಯಲ್ಲಿ ಒಂದು ವಿಕಾಸ ಯೋಜನೆಯ ಕೆಲಸಗಳೂ ಆಗಿಲ್ಲ. ನಮ್ಮ ಕಡೆಯಲ್ಲಿರುವ ಹಳ್ಳಿಯ ಜನರೆಲ್ಲಾ ಸರಕಾರಕ್ಕೆ ಎಷ್ಟು ಒತ್ತಾಯ ಮಾಡುತ್ತಿದ್ದರೂ ಕೂಡ ಯಾವ ಕೆಲಸವೂ ಆಗಿಲ್ಲ. ನಮ್ಮ ಜನ ಹೇಳುತ್ತಾರೆ, ವೋಟು ಕೇಳುವಾಗ ಮಾತ್ರ ಆಡಳಿತದವರು ನಮ್ಮ ಬಳಿಗೆ ಬರುತ್ತಾರೆ, ವೋಟು ಮುಗಿದ ನಂತರ ನಮ್ಮ ಜನರನ್ನೂ ಕೇಳುವವರೇ ಇಲ್ಲ. ವಿಕಾಸ ಯೋಜನೆ

(ಶ್ರೀಮತಿ ಚಂಪಾಬಾಯಿ ಬೊಗಳೆ)

ಕೆಲಸಗಳಿಗಾಗಿ ಮೂರು ವರ್ಷಗಳಿಂದ ಕೇಳುತ್ತಿದ್ದರೂ ಒಂದನ್ನೂ ಇಲ್ಲಿ ಮಾಡಲಿಲ್ಲ. ಬಡ್ಜೆಟ್ಟಿನಲ್ಲೇನೋ ಹಣ ಒದಗಿಸಿದ್ದಾರೆ. ಕೃಷ್ಣಾ ನದಿಯ ಬಳಿ ಸಣ್ಣ ಸಣ್ಣ ನೀರಾವರಿ ಕೆಲಸಗಳನ್ನು ಮಾಡುತ್ತಿದ್ದಾರೆ ಇನ್ನು ನಮ್ಮ ಜನಕ್ಕೆ ಸರಿಯಾಗಿ ಗೋದಿ ಹಾಗೂ ಜೋಳ ಸರಬರಾಜು ಆಗುತ್ತಿಲ್ಲ.

ಅಲ್ಲದೆ ನಮ್ಮ ಭಾಗದಲ್ಲಿ ಜನಕ್ಕೆ ಓಡಾಡಲು ಅನುಕೂಲವಾಗುವಂತೆ ಸರಿಯಾದ ಒಂದು ರೋಡೂ ಕೂಡ ಆಗಿಲ್ಲ. ಆದರೆ ನಮ್ಮ ಮಾನ್ಯ ಜತ್ತಿಯವರು ಮಂತ್ರಿಗಳಾಗಿದ್ದಾರೆ ಎಂದೋ ಏನೋ ಅವರ ಏರಿಯಾದಲ್ಲಿ ರೋಡುಗಳಾಗಿವೆ. ಆದರೆ ನಮ್ಮ ಭಾಗದಲ್ಲಿ ಯಾವ ರೋಡೂ ಆಗಿಲ್ಲ. ನಮ್ಮ ಜನಕ್ಕೆ ಇದರಿಂದ ಸಂಶಯ ಬಂದಿದೆ. ಅದೇನೆಂದರೆ, ಮಾನ್ಯ ನಿಜಲಿಂಗಪ್ಪನವರು ಬಂದಿದ್ದರಿಂದ ನಮ್ಮ ಭಾಗದಲ್ಲಿ ರೋಡು ಕೆಲಸಗಳು ಆಗಲಿಲ್ಲವೇನೋ ಎಂದು. ಇದರ ಬಗ್ಗೆ ಸರಕಾರ ಸರಿಯಾದ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಮತ್ತು ವಿಕಾಸ ಯೋಜನಾದ ಮೂಲಕವಾಗಿಯಾದರೂ ಈ ಸಾರಿ ಇಲ್ಲಿ ಒಂದು ರೋಡು ಮಾಡಿಸಿಕೊಡಬೇಕು. ವಿಕಾಸ ಯೋಜನಾ ಕೆಲಸಗಳನ್ನು ಇನ್ನೂ ಹೆಚ್ಚು ಮಾಡಬೇಕು ಮತ್ತು ಪ್ರತಿಯೊಂದು ಸ್ಕೀಂ ಮಾಡುವಾಗಲೂ ಅದನ್ನು ಐದು ವರ್ಷಗಳೊಳಗಾಗಿ ಮುಗಿಯುವಂತೆ ಸರಕಾರ ಮಾಡಬೇಕೆಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಆಹಾರ ಧಾನ್ಯಗಳನ್ನು ಸರಿಯಾಗಿ ಕೊಡುತ್ತಿಲ್ಲ. ಹಡದ ಹೆಣ್ಣು ಮಕ್ಕಳಿಗಾಗಿ ಪರ್ಮಿಟ್ ಮೇಲೆ ಅಕ್ಕಿ ಕೊಡಬೇಕೆಂದು ಕೇಳಿದರೂ ಕೊಡುತ್ತಿಲ್ಲ. ನಮ್ಮಲ್ಲಿ ಬಾರ್ಡರು ಏರಿಯಾ ಇರುವುದರಿಂದ ಇಲ್ಲಿರುವ ಕೃಷ್ಣಾ ನದಿಯ ದಂಡೆಯಲ್ಲಿ ಎರಡು ಭಾಗಗಳಲ್ಲಿಯೂ ಪಂಚಾಯತಿಗಳಿರುತ್ತವೆ. ಪ್ರತಿಯೊಂದು ಪಂಚಾಯತಿಯವರೂ ಕೂಡ ಅಕ್ಕಿಗಾಗಿ ಪರ್ಮಿಟ್ ಕೊಡುವಾಗ ಯಾವ ತಕರಾರುಗಳನ್ನೂ ಮಾಡದೇ ಕೊಡಬೇಕು. ನಮ್ಮ ಸರಕಾರ ಇದರ ಬಗ್ಗೆ ಸ್ವಲ್ಪ ವಿಚರ ಮಾಡಬೇಕು.

ಇನ್ನು ಎಲೆಕ್ಟ್ರಿಕ್ ಲೈಟುಗಳನ್ನು ಕೊಡುವುದರಲ್ಲಿ ನಮ್ಮಲ್ಲಿ ಒಂದು ಭಾಗಕ್ಕೆ ಇದೆ. ಇನ್ನೊಂದು ಭಾಗದಲ್ಲಿರುವ ಓಣಿಯಲ್ಲಿ ಇಲ್ಲ. ಜನತೆಗೆ ಯಾವಾಗಲು ಲೈಟುಗಳನ್ನು ಕೊಡುವಾಗ ಎಲ್ಲ ಭಾಗಗಳಿಗೂ ಕೊಡಬೇಕು. ಒಂದು ಕಡೆ ಕೊಟ್ಟು ಇನ್ನೊಂದು ಕಡೆ ಕೊಡದೇ ಇರುವುದು ಸರಿಯಲ್ಲ. ಇದಕ್ಕೆ ಕಾರಣವೇನು? ಸರಕಾರ ತಿಳಿಸಬೇಕು. ಉದಾಹರಣೆಯಾಗಿ ಹೇಳುವುದಾದರೆ, ನಮ್ಮಲ್ಲಿರುವ ಕಾಗೋಡು ಎಂಬಲ್ಲಿ ಅರ್ಧ ಓಣಿಗೆ ಲೈಟು ಬಂದಿದೆ. ಇನ್ನರ್ಧ ಓಣಿಯ ಕಡೆ ಲೈಟುಗಳನ್ನು ಕೊಟ್ಟಿಲ್ಲ. ಇದಕ್ಕೆ ಕಾರಣವೇನೋ ನನಗಂತೂ ತಿಳಿಯಲೊಲ್ಲದು. ತಮ್ಮ ತಮ್ಮ ಏರಿಯಾದಿಂದ ಚುನಾವಣೆಯಲ್ಲಿ ಬಂದಿರುವ ಭಾಗಗಳಲ್ಲಿ ಲೈಟು ಕೊಡಬೇಕು ಇತರ ಭಾಗಗಳಿಗೆ ಕೊಡಕೂಡದು ಎಂದೇನಾದರೂ ಮಾಡಿದರೆ ಇದು ಇಲ್ಲದ ಅಪಪ್ರಚಾರಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಆದುದರಿಂದ ಪ್ರತಿಯೊಂದು ಊರಿನಲ್ಲೂ ಎಲ್ಲೆಲ್ಲಿ ಎಲೆಕ್ಟ್ರಿಸಿಟಿ ಆವಶ್ಯಕತೆ ಇದೆ ಅದನ್ನು ನೋಡಿಕೊಂಡು ಅಲ್ಲಿಗೆ ಪೂರ್ತಿಯಾಗಿ ಸಪ್ಲೈ ಮಾಡಬೇಕು. ಇಲ್ಲದಿದ್ದರೆ ಜನರಲ್ಲಿ ಅಪಪ್ರಚಾರಮಾಡಲು ಅವಕಾಶವಾಗುತ್ತದೆ. ಇದರ ಬಗ್ಗೆ ಸರಕಾರ ಕೂಡಲೇ ತಕ್ಕ ಸರ್ವೇ ಕೆಲಸಗಳನ್ನು ಮಾಡಿಸಬೇಕು ಎಂದು ಇಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನೂ ನಮ್ಮಲ್ಲಿ ದನಗಳಿಗಾಗಿ ಸರಿಯಾದ ದವಾಖಾನೆಗಳನ್ನು ತೆರೆಯುತ್ತಿಲ್ಲ. ಎಲ್ಲಿ ದನಗಳು ಹೆಚ್ಚಾಗಿವೆಯೋ ಮತ್ತು ಮೇವು ಸರಿಯಾಗಿ ಸಿಗುತ್ತದೋ ಅಂತಹ ಕಡೆಗಳಲ್ಲಿ ಒಂದು ಸ್ಕೀಂ ಮಾಡಿಕೊಂಡು ದವಾಖಾನೆಯನ್ನು ತೆರೆಯಬೇಕು. ಬಿ. ಡಿ. ಒ. ರವರು ಶಿಫಾರಸು ಮಾಡಿದ್ದಾರೆ ಎಂಬ ಆಧಾರದಮೇಲೆ ಅಲ್ಲಿ ದನಗಳು ಕಡಿಮೆ ಇದ್ದರೂ ಅಲ್ಲಿ ದನಗಳ ಒಂದು ದವಾಖಾನೆ ತೆರೆದಿದ್ದಾರೆ. ಇದರಿಂದ ಎಲ್ಲ ದನಗಳಿಗೂ ಉಪಯೋಗವಾಗುತ್ತಿಲ್ಲ. ನಮ್ಮಲ್ಲಿರುವ

ಕೃಷ್ಣಾ ದಂಡೆಯ ತೀರದಲ್ಲಿ ದನಗಳಿಗೆ ಸಾಕಷ್ಟು ನೀರು ಹಾಗೂ ಮೇವೂ ದೊರಕುತ್ತವೆ. ಇಲ್ಲಿ ತುರ್ತಾಗಿ ದನಗಳ ಒಂದು ದವಾಖಾನೆ ಮಾಡಿಸಿಕೊಡಬೇಕು. ಯಾವಾಗಲೂ ಸರಕಾರ ಇಂತಹ ಕೆಲಸಗಳನ್ನು ಮಾಡುವಾಗ ಇತರರಿಗೆ ಮಾರ್ಗದರ್ಶಕರಾಗಿರಬೇಕು. ಇಂತಹ ಮಹತ್ವದ ಕೆಲಸಗಳ ಕಡಗೆ ಸರಕಾರ ಗಮನ ಕೊಡಬೇಕು. ವಿಕಾಸಯೋಜನಾ ಕೆಲಸಗಳನ್ನು ನಮ್ಮ ಭಾಗದಲ್ಲಿ ಇನ್ನಾದರೂ ಹೆಚ್ಚು ಮಾಡಬೇಕು.

ಇನ್ನು ಹರಿಜನರಿಗಾಗಿ ನಮ್ಮ ಈ ಬಡ್ಜೆಟ್‌ನಲ್ಲಿ ಬಹಳ ಕಡಿಮೆ ಹಣವನ್ನು ಇಟ್ಟಿದ್ದಾರೆ. ಹರಿಜನರ ಏಳಿಗೆಗಾಗಿ ಪ್ರತಿ ವರ್ಷವೂ ಹೆಚ್ಚು ಹಣ ಇಡುವುದಕ್ಕೆ ಬದಲಾಗಿ ವರ್ಷ ವರ್ಷಕ್ಕೂ ಕಡಿಮೆ ಮಾಡಿದರೆ ಇದರಿಂದ ಹರಿಜನರ ಏಳಿಗೆಯಾಗುತ್ತದೆಯೇ? ಹರಿಜನರಿಗೆ ಅನುಕೂಲವಾಗುವ ವಿಕಾಸ ಯೋಜನಾ ಕೆಲಸಗಳನ್ನು ಮಾಡಲು ಸರಕಾರ ಇನ್ನೂ ಹೆಚ್ಚು ಖರ್ಚುಮಾಡಿ ಹರಿಜನರಿಗೆ ಕಲ್ಯಾಣವಾಗುವಂತೆ ಸರಕಾರದವರು ಕೆಲಸಗಳನ್ನು ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಮಲ್ಲಪ್ಪ (ಬೀರೂರು).—ಸನ್ಮಾನ್ಯ ಅಧ್ಯಕ್ಷರೇ, 1967-68ನೇ ವರ್ಷದ ಆಯವ್ಯಯದ ಚಿತ್ರವನ್ನು ಅರ್ಥಮಂತ್ರಿಗಳು ಮಂಡಿಸಿರುವುದನ್ನು ನೋಡಿದಾಗ ನಿಜವಾಗಿಯೂ ಜನರಿಗೆ ನಿರಾಶೆಯಾಗದೇ ಉಳಿಯಲಿಕ್ಕಿಲ್ಲ. ಆಯವ್ಯಯ ಚಿತ್ರ ನೀರಸವಾಗಿದೆ. ಇದರಲ್ಲಿ ಯಾವ ಆಶ್ವಾಸನೆಗಳೇ ಆಗಲೀ ಅಥವಾ ಹೊಸ ಕಾರ್ಯಗಳನ್ನು ಮಾಡಿಸಿರುವುದಾಗಲೀ ಕಂಡುಬರುತ್ತಿಲ್ಲ. ಇದನ್ನು ಮೊದಲಿಂದ ಕೊನೆಯವರೆಗೂ ನೋಡಿದಾಗ ಮಲೆನಾಡಿನ ಬಗ್ಗೆ ಅರ್ಥಮಂತ್ರಿಗಳು ಒಂದು ಆಶ್ವಾಸನೆಯನ್ನು ಕೂಡ ನುಡಿದಿಲ್ಲ. ಮಲೆನಾಡಿನ ಅಭಿವೃದ್ಧಿಯ ಬಗ್ಗೆ ನಿಜವಾಗಿಯೂ ಆಸಕ್ತಿ ವಹಿಸಿದ್ದರೆ ನ್ಯಾಯವಾಗಿರುತ್ತಿತ್ತು. ಆ ರೀತಿ ಏನೂ ಕಾಣುತ್ತಿಲ್ಲ. ಈಗ್ಗೆ ಸುಮಾರು ಐದು ವರ್ಷಗಳ ಹಿಂದೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳವರು ಮಲೆನಾಡಿನ ಅಭಿವೃದ್ಧಿಯ ಬಗ್ಗೆ ಒಂದು ಬೋರ್ಡನ್ನು ಮಾಡಿ ಮಲೆನಾಡಿನವರೇ ಆದವರು ಒಬ್ಬರನ್ನು ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದ್ದರು. ಆದರೆ ಆ ಬೋರ್ಡು ಮಲೆನಾಡಿನ ಅಭಿವೃದ್ಧಿಗಾಗಿ ಏನೇನು ಕೆಲಸಗಳನ್ನು ಕೈಗೊಳ್ಳಬೇಕು ಎನ್ನುವುದರಲ್ಲಿಯೇ ಆಯಿತು ಮತ್ತು ಮಲೆನಾಡಿನ ಅಭಿವೃದ್ಧಿಯಲ್ಲಿ ಏನು ಮಾಡಲೂ ಸಾಧ್ಯವಾಗಲಿಲ್ಲ ಎಂದು ವಿಷಾದದಿಂದ ಇಲ್ಲಿ ಹೇಳಬಯಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಮಲೆನಾಡಿನ ಪರಿಸ್ಥಿತಿಯನ್ನು ನೋಡಿದಾಗ ಕಳೆದ ವರ್ಷ ಮಳೆಬೆಳೆಗಳು ಆಗದೇ ಜನ ಕಂಗೆಟ್ಟು ಕುಳಿತಿದ್ದಾರೆ. ಅದರಲ್ಲೂ ನಮ್ಮ ಪ್ರಾಂತ್ಯದಲ್ಲಿ ಇರುವ ಅಡಿಕೆ ತೋಟ ತೆಗೆದುಕೊಂಡರೆ, ಅಲ್ಲಿನ ಜನ ಹತ್ತು ಹದಿನೈದು ವರ್ಷಗಳಿಂದಲೂ ಸಂಪಾದಿಸಿಟ್ಟಿದ್ದ ಆಸ್ತಿಗಳನ್ನು ಇಂದು ಕಳೆದುಕೊಂಡಿದ್ದಾರೆ. ಅವರನ್ನು ಸುಧಾರಿಸುವ ಸ್ಥಿತಿಗೆ ತರಲು ಇನ್ನೂ ಆಗಲಿಲ್ಲ. ನಮ್ಮ ಕ್ಷೇತ್ರದಲ್ಲಿ ಒಂದು ಎಕರೆ ಅಡಿಕೆ ತೋಟ ಎಂದರೆ, ಸುಮಾರು ಅದು ನಲವತ್ತು ಸಾವಿರ ರೂಪಾಯಿಗಳಷ್ಟು ಬಾಳುವುದನ್ನು ಕೇವಲ ಹತ್ತು ಸಾವಿರ ರೂಪಾಯಿಗಳಿಗೆ ಮಾರಿಕೊಂಡು ಕಷ್ಟಪಡುತ್ತಿರುವುದನ್ನು ನೋಡಿದರೆ, ನಿಜವಾಗಿಯೂ ಅವರ ಕಡೆಗೆ ಸರಕಾರ ಏನಾದರೂ ಲಕ್ಷ್ಯ ಕೊಡುತ್ತದೆಯೇ ಎನ್ನುವುದು ಗೊತ್ತಾಗುತ್ತದೆ. ರೈತರಿಗೆ ಏನು ಕಷ್ಟಗಳವೆ ಅವರನ್ನು ಹೇಗೆ ಸುಧಾರಿಸಬಹುದು ಎನ್ನುವುದರ ಕಡೆಗೇ ಗಮನ ಕೊಡುವುದು ಸರಕಾರದ ಆದ್ಯ ಕರ್ತವ್ಯವಾಗಿದ್ದರೂ ಈ ಆಯವ್ಯಯ ಪತ್ರದಲ್ಲಿ ಸಾಮಾನ್ಯ ತರಗತಿಯ ಜನರನ್ನು ಸರಕಾರ ಅಲಕ್ಷ್ಯಮಾಡಿ ಅವರ ಅಭಿವೃದ್ಧಿಗಾಗಿ ಯಾವ ಸೂಚನೆಯನ್ನೂ ಕೊಟ್ಟಿಲ್ಲ. ಇದನ್ನು ಸರಕಾರ ಯೋಚನೆ ಮಾಡಬೇಕಾಗಿತ್ತು ಎಂದು ಈ ಸಮಯದಲ್ಲಿ ನಾನು ಹೇಳಬಯಸುತ್ತೇನೆ. ನಮ್ಮ ದೇಶದಲ್ಲಿ ಶೇಕಡ ತೊಂಬತ್ತರಷ್ಟು ಜನ ಕೃಷಿ ಮಾಡುವವರೇ ಆಗಿದ್ದಾರೆ. ಇವರ ಅಭಿವೃದ್ಧಿಯನ್ನು ಮಾಡದೇ ಹೋದರೆ ದೇಶದಲ್ಲಿ ಯಾವ ಪ್ರಗತಿಯನ್ನೂ ಸಾಧಿಸಲು ಸಾಧ್ಯವಿಲ್ಲ. ಇವೊತ್ತಿನ ದಿವಸ ಕೃಷಿಕರಿಗೆ ನಾವು ಬೆಂಬಲ ಕೊಡದಿದ್ದರೆ, ಕೃಷಿ ಅಭಿವೃದ್ಧಿಯಾಗದೇ ಇದ್ದರೆ ಈ ದೇಶದಲ್ಲಿ ಆಹಾರದಸ್ವಾವಲಂಬನೆ ಎಷ್ಟು ಸಾಧ್ಯವಾಗುತ್ತದೆ ಎನ್ನುವುದನ್ನು ತಾವೇ ಯೋಜನೆ ಮಾಡಬೇಕು.

(ಶ್ರೀ ಎಂ. ಮಲ್ಲಪ್ಪ)

ಇವೊತ್ತಿನ ದಿವಸ ಆಹಾರ ಹೆಚ್ಚಾಗಲಿಲ್ಲ ಎಂದು ಆಹಾರದ ಉತ್ಪಾದನೆಯನ್ನು ಹೆಚ್ಚು ಮಾಡಬೇಕಾದರೆ ರೈತರಿಗೆ ಸಹಾಯವಾಗುವಂತೆ ಸಕಾಲದಲ್ಲಿ ಉತ್ತಮವಾದ ಬೀಜಗಳನ್ನು, ಗೊಬ್ಬರವನ್ನು ಹಂಚುವ ವ್ಯವಸ್ಥೆ ಮಾಡಬೇಕು. ಇದರಿಂದ ವ್ಯವಸಾಯವನ್ನು ಸ್ವಲ್ಪ ಮಟ್ಟಿಗೆ ಅಭಿವೃದ್ಧಿ ಮಾಡಬಹುದು. ಕಳೆದ ವರ್ಷದಲ್ಲಿ ವ್ಯವಸಾಯಕ್ಕೆ ಅಗತ್ಯವಾಗಿ ಬೇಕಾಗಿರತಕ್ಕಂಥ ಪದಾರ್ಥಗಳು ಇಲ್ಲದೆ ಇರತಕ್ಕಂಥ ಪರಿಸ್ಥಿತಿ ರೈತರಿಗೆ ಬಂದಿತ್ತು. ಭದ್ರಾವತಿ ಕಂಪನಿಗೆ ಕೋ-ಅಪರೇಟಿವ್ ಸೊಸೈಟಿಯವರು ಬರೆದು ಕೇಳಿದರೆ ಈ ವರ್ಷ ಆ ಪದಾರ್ಥಗಳನ್ನು ಮಾಡುತ್ತಿಲ್ಲ ಎಂದು ತಿಳಿಸಿದರು.

Mr. SPEAKER.—The House will now adjourn and meet again tomorrow at 1 P.M.

The House adjourned at Six of the Clock to meet again at One of the Clock on Tuesday the 28th March 1967.